Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–22 ಮೇ 29–ಜೂನ್ 4, 2023 ಪುಟ 16 ರೂ. 10/–

Volume-17 Issue-22 May 29-June 4, 2023 Pages:16 Price: 10/-

ನೂತನ ಸಂಸತ್ ಭವನ ಉದ್ಘಾಟನೆ : ರಾಷ್ಟ್ರಪತಿಯವರಿಗಿಲ್ಲ ಆಹ್ವಾನ





ಕೇರಳ: LDF ಸರ್ಕಾರದ ಮುನ್ನಡೆಯ ಈ 2 ವರ್ಷಗಳು

ಸಂಪುಟದ ಹೊಣೆಗಾರಿಕೆಯ ಅರಿವಿರಲಿ

'ರಾಜದಂಡ' ಆರ್‌ಎಸ್‌ಎಸ್–ಬಿಜೆಪಿಯ ಕಟ್ಟುಕಥೆ

CITU 53 ಕಾರ್ಮಿಕರ ಹಕ್ಕುಗಳಿಗಾಗಿ ವ್ಯಾಪಕ ಚಳುವಳಿ ಕಟ್ಟುವ ಪಣ ತೊಡೋಣ



ಸಿಐಟಿಯು ಗೆ 53 ರ ಸಂಭ್ರಮ

ಕಾರ್ಮಿಕರ ಹಕ್ಕುಗಳಿಗಾಗಿ ವ್ಯಾಪಕ ಚಳುವಳಿ ಕಟ್ಟುವ ಪಣ ತೊಡೋಣ

ಸಿಐಟಿಯು (ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್)ನ 53 ನೇ ಸಂಸ್ಥಾಪನಾ ದಿನ. ಇದೇ ವೇಳೆಗೆ ರಾಜ್ಯದಲ್ಲಿ, ಕಾರ್ಮಿಕರ ವ್ಯಾಪಕ ವಿರೋಧವನ್ನೂ ಲೆಕ್ಕಿಸದೆ, ಪ್ರತಿಭಟನೆಗೂ ಮಣಿಯದೆ, ರಾಜ್ಯದಲ್ಲಿ ಕಾರ್ಮಿಕ ವಿರೋಧಿ ಕಾನೂನುಗಳನ್ನು ಜಾರಿಗೆ ತಂದು, ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಂಡ ಬಿಜೆಪಿಯನ್ನು ಜನತೆ ಸೋಲಿಸಿದ್ದಾರೆ. ಇದರ ಲಾಭ ಪಡೆದ ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರಕ್ಕೆ ಬಂದಿದೆ. ಬಿಜೆಪಿ ಆಡಳಿತದ ಅವಧಿಯಲ್ಲಿ ಕಳೆದುಕೊಂಡ ಹಕ್ಕುಗಳನ್ನು ಮತ್ತೆ ಪಡೆಯಲು ಮತ್ತು ಹಲವು ದಿನಗಳ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಕಾರ್ಮಿಕರು ಮುಂದಾಗಬೇಕಿದೆ. ಈ ಸಂದರ್ಭದಲ್ಲಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತಾಗಿ ಒಂದು ಪುಟ್ಟ ಲೇಖನ.

ಖಾಯಂ ಮತ್ತು ಸಮರ್ಪಕ ಉದ್ಯೋಗ ಎಂಬುದು ಕಾರ್ಮಿಕರ ಕನಸು. ವರ್ಷಕ್ಕೆ 2 ಕೋಟಿ ಜನರಿಗೆ ಉದ್ಯೋಗ ಒದಗಿಸುವ 10 ವರ್ಷಗಳ ಹಿಂದಿನ ಬಿಜೆಪಿಯ ಚುನಾವಣಾ ಭರವಸೆ ಏನಾಯಿತು? ಈ ಪ್ರಶ್ನೆ ಕೇಳಿದಾಗ, ಗೃಹ ಸಚಿವ ಅಮಿತ್ ಶಾ 'ಇದು ಜುಮ್ಲಾ' (ಕೇವಲ ಮಾತು) ಎಂದು ಉತ್ತರಿಸಿದರು. ನಮ್ಮ ದೇಶದಲ್ಲಿ ಮಾನವ ಸಂಪನ್ಮೂಲವಿದೆ. ನೈಸರ್ಗಿಕ ಸಂಪನ್ಮೂಲಗಳಿವೆ. ಆದರೆ, ಅವುಗಳನ್ನು ಸಂಪೂರ್ಣವಾಗಿ ದೇಶದ ಪ್ರಗತಿಗೆ ಬಳಸುತ್ತೇವೆಯೇ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ. ನಮ್ಮ ದೇಶದ ಜನಸಂಖ್ಯೆಯಲ್ಲಿ ಯುವಕರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಎಲ್ಲರಿಗೂ ಸರಿಯಾದ, ವೈಜ್ಞಾನಿಕ ಶಿಕ್ಷಣ ಪಡೆಯಲು ಅವಕಾಶವಿಲ್ಲ. 1990 ರ ದಶಕದಲ್ಲಿ ಜಾರಿಗೆ ಬಂದ ನವ–ಉದಾರವಾದಿ ನೀತಿಗಳಿಂದಾಗಿ ಶಿಕ್ಷಣ, ವೈದ್ಯಕೀಯ, ಸಾರಿಗೆ, ದೂರಸಂಪರ್ಕ, ಹಣಕಾಸು ಇತ್ಯಾದಿಗಳಲ್ಲಿ ಖಾಸಗಿ ವಲಯವು ವ್ಯಾಪಕವಾಗಿ ಹರಡಿಹೋಗಿದೆ. ವರ್ಷದಲ್ಲಿ 240 ದಿನ ಕೆಲಸ ಮಾಡಿದರೆ ಖಾಯಂ ಮಾಡಬೇಕೆಂಬ ಕಾನೂನನ್ನು ಆಳುವ ವರ್ಗಗಳು ನಿರ್ಲಕ್ಷಿಸುತ್ತಲೇ ಇವೆ. ಅಪ್ರೆಂಟಿಸ್‌ಗಳಿಗೆ ಎನ್‌ಇಎಂ (ರಾಷ್ಟ್ರೀಯ ಉದ್ಯೋಗ ಅಭಿವೃದ್ಧಿ ಕಾರ್ಯಕ್ರಮ) ಮೂಲಕ ಉತ್ಪಾದನಾ ವಲಯದಲ್ಲಿ ಕೆಲಸ ಮಾಡಲು ಅವಕಾಶ ನೀಡಲಾಗುತ್ತದೆ. ಕಾರ್ಖಾನೆಗಳಲ್ಲಿ ಆರಂಭವಾದ 'ನಿಶ್ಚಿತ ಅವಧಿಯ ಕೆಲಸ' ಎಂಬುದು, ಸೇನೆಯಲ್ಲಿ 'ಅಗ್ನಿ ವೀರ್' ಯೋಜನೆಗೂ ವ್ಯಾಪಿಸಿದೆ. ಅಗ್ನಿ ವೀರ್ ಯೋಜನೆ ಮೂಲಕ ಸೈನ್ಯಕ್ಕೆ ಸೇರಿಕೊಳ್ಳುವವರು ಕೇವಲ ನಾಲ್ಕು ವರ್ಷಗಳ ಕಾಲ ಮಾತ್ರ ಸೈನಿಕರು ಎನಿಸಿಕೊಳ್ಳುತ್ತಾರೆ. ನಂತರ ಅವರ ಬುದುಕು ಕತ್ತಲೆಯ ಭವಿಷ್ಯದಲ್ಲಿ ಬೆಳಕಿಗಾಗಿ ಹುಡುಕಾಟ ನಡೆಸುವ ಸ್ಥಿತಿಗೆ ತಲುಪುತ್ತದೆ.

ಗುತ್ತಿಗೆ ಪದ್ಧತಿ ಸಾಂಕ್ರಾಮಿಕವಾಗಿ ಹರಡುತ್ತಿದೆ

ಎಲ್ಲೆಡೆ ಗುತ್ತಿಗೆ ಪದ್ಧತಿ ಎಂಬುದು ಸಾಂಕ್ರಾಮಿಕವಾಗಿ ಹರಡುತ್ತಿದೆ. ಸರ್ಕಾರಿ ವಲಯದಲ್ಲಿ, ಸಾರ್ವಜನಿಕ ಉದ್ಯಮ ವಲಯದಲ್ಲಿ ಗುತ್ತಿಗೆ ಕಾರ್ಮಿಕರ ಸಂಖ್ಯೆ ಕಾಯಂ ಕಾರ್ಮಿಕರ ಸಂಖ್ಯೆಗಿಂತ ಹೆಚ್ಚುತ್ತಿದೆ. 1970ರ ಗುತ್ತಿಗೆ ಕಾಯಿದೆಯಲ್ಲಿ ಶಾಶ್ವತ ಸ್ವರೂಪದ ಕಾಮಗಾರಿಗಳಿಗೆ ಗುತ್ತಿಗೆ ವ್ಯವಸ್ಥೆ ಇರಬಾರದು ಎಂದು ಹೇಳಲಾಗಿದೆ. ಇದನ್ನು ಉಲ್ಲಂಘಿಸುವ ಯಾವುದೇ ಕಾರ್ಪೊರೇಟ್ ಸಂಸ್ಥೆ, ಮಾಲೀಕರ ವಿರುದ್ದ ಕ್ರಮ ತೆಗೆದುಕೊಳ್ಳುವ ಹಕ್ಕು ಸರ್ಕಾರಕ್ಕಿದೆ. ಅಥವಾ, 20 ಅಥವಾ ಅದಕ್ಕಿಂತ ಹೆಚ್ಚು ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವ ಗುತ್ತಿಗೆದಾರರು ಕಾನೂನುಬದ್ಧವಾಗಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ಈ ಗುತ್ತಿಗೆ ಕಾರ್ಮಿಕರಿಗೂ ಪಿಎಫ್, ಇಎಸ್‌ಐ, ಬೋನಸ್‌ನಂತಹ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸಬೇಕು. 20 ಇದ್ದ ಈ ಕಾರ್ಮಿಕರ ಸಂಖ್ಯೆಯನ್ನೂ 50ಕ್ಕೆ ಪರಿಷ್ಕರಿಸಲು ಕೇಂದ್ರ ಸರ್ಕಾರ ಇಂದು ಅವಕಾಶ ನೀಡಿದೆ. 50 ಕ್ಕಿಂತ ಕಡಿಮೆ ಸಂಖ್ಯೆಯ ಕಾರ್ಮಿಕರನ್ನು ಹೊಂದಿರುವ ಗುತ್ತಿಗೆದಾರರ ಬಳಿ ನೇಮಕಗೊಳ್ಳುವ ಕಾರ್ಮಿಕರು, ಕಾರ್ಮಿಕ ಕಾಯ್ದೆ ಮೂಲಕ ಸಿಗಬೇಕಾದ ಸಾಮಾಜಿಕ ಭದ್ರತಾ ಯೋಜನೆಗಳಿಂದ ವಂಚಿತರಾಗುತ್ತಾರೆ.

ಮತ್ತೊಂದಡೆ, 50 ಅಥವಾ ಅದಕ್ಕಿಂತ ಹೆಚ್ಚು, ನೂರಾರು ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವ ಗುತ್ತಿಗೆದಾರರು, ಕಾರ್ಮಿಕರನ್ನು 49, 49 ವಿಗಂಡಿಸಿ, ಪ್ರತ್ಯೇಕ ಗುಂಪುಗಳನ್ನಾಗಿ ಪರಿವರ್ತಿಸುವ ಮೂಲಕ ಸಣ್ಣ ಸಣ್ಣ ಗುತ್ತಿಗೆದಾರನೆಂದು ತೋರಿಸಿಕೊಂಡು, ಸಾರ್ವಜನಿಕ ವಲಯದಲ್ಲಿಯೂ ಸಹ ಕಾನೂನು ಜಾರಿಯಿಂದ ಸಂಪೂರ್ಣವಾಗಿ ತಪ್ಪಿಸಿಕೊಳ್ಳಬಹುದು. ಇದರಿಂದಾಗಿ, ಕಾರ್ಮಿಕನಿಗೆ ತನ್ನ ಜೀವನದುದ್ದಕ್ಕೂ ಗುತ್ತಿಗೆ ಕೆಲಸಗಾರನಾಗಿ ನಿವೃತ್ತಿಯಾಗುವ ದುರದೃಷ್ಟಕರ ಸ್ಥಿತಿ ಬರಬಹುದು. ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಸಿದ್ಧಾಂತದ ಪ್ರಕಾರ, ಕಾಯಂ ಕಾರ್ಮಿಕರಿಗೆ ಸಮಾನವಾಗಿ ಕೆಲಸ ಮಾಡುವ ಗುತ್ತಿಗೆ ಕಾರ್ಮಿಕರಿಗೆ ಸಮಾನ ವೇತನ ನಿರಾಕರಿಸುವ ಕಾರ್ಖಾನೆಗಳ ಮಾಲೀಕರ ಕ್ರೌರ್ಯ ಸರಕಾರಕ್ಕೆ ಕಾಣುತ್ತಿಲ್ಲ.

ಹೊಸ ಪಿಂಚಣಿ ಯೋಜನೆ ಭವಿಷ್ಯದ ಸುರಕ್ಷತೆಗೆ ನೆರವಾಗುವುದೇ?

ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಅವಲಂಬಿಸಿರುವ ಕಾರ್ಮಿಕರಿಗೆ ಭವಿಷ್ಯ ಉಳಿತಾಯ ನಿಧಿ ಪಿಎಫ್ ಸೌಲಭ್ಯ, ಪಿಂಚಣಿ ಸೌಲಭ್ಯ ಇತ್ಯಾದಿ ಸಾಮಾಜಿಕ ಭದ್ರತಾ ಯೋಜನೆಗಳಿವೆ. ಕೇಂದ್ರ ಸರ್ಕಾರವು ತನ್ನ ನಾಲ್ಕು ಕಾರ್ಮಿಕ ಸಂಹಿತೆಯ ಕಾನೂನುಗಳ ಮೂಲಕ, ಕಂಪನಿ ಆಡಳಿತ ಮತ್ತು ಕಾರ್ಮಿಕರು ಬಯಸಿದಲ್ಲಿ ಪಿಎಫ್ ಮತ್ತು ಇಎಸ್‌ಐ ಯೋಜನೆಗಳಿಂದ ಹೊರಗುಳಿಯಲು ಅನುಮತಿಸುವ ಷರತ್ತುಗಳನ್ನು ರೂಪಿಸಿದೆ. ಕಾರ್ಮಿಕರು ಹೋರಾಟ ಮಾಡಿ ಗಳಿಸಿದ ಸಾಮಾಜಿಕ ಭದ್ರತಾ ಯೋಜನೆಗಳು ಉಳಿಯುತ್ತವೆಯೇ ಎಂಬ ಪ್ರಶ್ನೆ ಈಗ ಉದ್ಭವಿಸಿದೆ.

ಕೇಂದ್ರ ಸರ್ಕಾರವು ಖಾಸಗಿ ವಿಮೆ, ಖಾಸಗಿ ಆಸ್ಪತ್ರೆಗಳು ಮತ್ತು ಖಾಸಗಿ ಔಷಧ ತಯಾರಕರನ್ನು ಬೆಳೆಸಲು ಮುಂದಾಗುತ್ತಿದೆ. ಜನವರಿ 2004 ರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರಿಗೆ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಹಳೆಯ ಪಿಂಚಣಿ ಯೋಜನೆಯಡಿ, ನೌಕರನು ತನ್ನ ಕೊನೆಯ ತಿಂಗಳ ಸಂಬಳದ ಅರ್ಧದಷ್ಟನ್ನು ನಿವೃತ್ತಿಯ ನಂತರ ಪಿಂಚಣಿಯಾಗಿ ಪಡೆಯುತ್ತಿದ್ದನು. ನೌಕರರ ಕೊಡುಗೆಗೆ ಸಮಾನವಾದ ಪಿಎಫ್ ಕೊಡುಗೆಯನ್ನು ಸರ್ಕಾರವು ಪಾವತಿಸುವುದಿಲ್ಲ. ಆದರೆ ಹೊಸ ಪಿಂಚಣಿ ಯೋಜನೆಯಲ್ಲಿ ಪಿಂಚಣಿಗಾಗಿಯೇ ಸರ್ಕಾರಿ ನೌಕರರ ಸಂಬಳದಿಂದ ಮಾಸಿಕ 10% ರಷ್ಟು ಹಣವನ್ನು ಕಡಿತಗೊಳಿಸಲಾಗುತ್ತದೆ. ಸರ್ಕಾರವೂ ತನ್ನ ಪಾಲಿನ ಹತ್ತರಷ್ಟನ್ನು ಕೊಡುತ್ತದೆ. 60 ನೇ ವಯಸ್ಸಿನಲ್ಲಿ, ಒಟ್ಟು ಪಿಂಚಣಿ ಉಳಿತಾಯದ ಶೇ. 60 ನಗದು ರೂಪದಲ್ಲಿ ಲಭ್ಯವಿರುತ್ತದೆ. ವಿಮಾ ಕಂಪನಿಗಳ ಸೆಕ್ಯೂರಿಟಿಗಳಲ್ಲಿ ಶೇ. 40 ಹೂಡಿಕೆ ಮಾಡಬೇಕು. ಇದಕ್ಕೆ ಜಿಎಸ್‌ಟಿ ಕೂಡ ಪಾವತಿಸಬೇಕಾಗುತ್ತದೆ. ಹೂಡಿಕೆಯು ಉತ್ತಮ ಆದಾಯವನ್ನು ನೀಡಿದರೆ ಉತ್ತಮ ಪಿಂಚಣಿ. ಇದನ್ನು ಪಿಂಚಣಿ ಎಂದು ವ್ಯಾಖ್ಯಾನಿಸಲಾಗಿಲ್ಲ. ಹಳೆಯ ಪಿಂಚಣಿ ಯೋಜನೆಯಲ್ಲಿ ಶೇ. 40 ಪಿಂಚಣಿಯನ್ನು ನಗದು ರೂಪದಲ್ಲಿ ಕಮ್ಯುಟೇಶನ್ ಮೂಲಕ ಪಡೆಯಬಹುದು. ಆದರೆ ಹೊಸ ಪಿಂಚಣಿ ಯೋಜನೆಯಲ್ಲಿ ಇಂತಹ ಸೌಲಭ್ಯವಿಲ್ಲ. ರಾಜಸ್ಥಾನ, ಛತ್ತೀಸ್‌ಗಢ, ಜಾರ್ಖಂಡ್, ಪಂಜಾಬ್ ಮತ್ತು ಹಿಮಾಚಲ ಪ್ರದೇಶ ರಾಜ್ಯ ಸರ್ಕಾರಗಳು ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರಲು ನಿರ್ಧರಿಸಿವೆ. ಪಶ್ಚಿಮ ಬಂಗಾಳದಲ್ಲಿ ಹಳೆಯ ಪಿಂಚಣಿ ಯೋಜನೆ ಜಾರಿಯಲ್ಲಿದೆ.

ಅಸಂಘಟಿತ ಕಾರ್ಮಿಕರಿಗೆ ಕೇಂದ್ರ ಸರ್ಕಾರದಿಂದ ದ್ರೋಹ

2008ರಲ್ಲಿ ಎಡ ಪಕ್ಷಗಳ 62 ಸಂಸದರ ಒತ್ತಾಯದಿಂದಾಗಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ರಕ್ಷಣೆಗಾಗಿ ಅಖಿಲ ಭಾರತ ಕಾಯಿದೆಯನ್ನು ಅಂಗೀಕರಿಸಲಾಯಿತು. ಮನಮೋಹನ್ ಸಿಂಗ್ ಸರ್ಕಾರ ಕಾನೂನು ಜಾರಿಗಾಗಿಯೇ 1,000 ಕೋಟಿ ರೂ. ಮಂಜೂರು ಮಾಡಿತು. ಕೇಂದ್ರ ಸರ್ಕಾರವು ವಾರ್ಷಿಕವಾಗಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ GDP ಯ ಶೇ. 3ರಷ್ಟನ್ನು – ಅಂದರೆ ಮೂರು ಲಕ್ಷ ಕೋಟಿ ರೂಪಾಯಿಗಳನ್ನು ನಿಗದಿಪಡಿಸಬೇಕೆಂದು ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಒತ್ತಾಯಿಸಿವೆ. ಇದು ಕಾರ್ಮಿಕರ ಎಲ್ಲಾ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಗಳಲ್ಲಿನ ಪ್ರಮುಖ ಬೇಡಿಕೆಯಾಗಿತ್ತು. ಇದಕ್ಕೆ ಬಿಜೆಪಿ ಸರಕಾರ ಇದುವರೆಗೂ ಹಣ ಮೀಸಲಿಟ್ಟಿಲ್ಲ. ಮತ್ತೊಂದೆಡೆ, ಕೇಂದ್ರ ಸರ್ಕಾರವು ಕಾರ್ಪೊರೇಟ್‌ಗಳಿಗೆ ಹಲವಾರು ಲಕ್ಷ ಕೋಟಿ ರೂಪಾಯಿಗಳ ತೆರಿಗೆ ಪ್ರೋತ್ಸಾಹವನ್ನು ನೀಡುತ್ತದೆ.

ವಸೂಲಾಗದ ಸಾಲ (NPA)ದ ಹೆಸರಲ್ಲಿ ಉದ್ಯಮಿಗಳ ಲಕ್ಷಾಂತರ ಕೋಟಿ ಬ್ಯಾಂಕ್ ಸಾಲ ಮನ್ನಾ ಮಾಡುವ ಕೇಂದ್ರ ಸರಕಾರ, 38 ಕೋಟಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಗೆ ಒಂದು ಪೈಸೆಯನ್ನೂ ಮೀಸಲಿಡದಿರುವುದು ದೊಡ್ಡ ದ್ರೋಹವಾಗಿದೆ. 'ಇ–ಶ್ರಮ' ಎಂಬ ಅಸಂಘಟಿತ ಕಾರ್ಮಿಕರ ನೊಂದಣಿ ಪ್ರಕ್ರಿಯೆಯು ಸುಪ್ರೀಂ ಕೋರ್ಟ್ ಆದೇಶದ ಮೇರಗೆ ಆಗಸ್ಟ್ 2021 ರಿಂದ ಜಾರಿಗೆ ಬಂದಿದೆ. ಹೊರ ರಾಜ್ಯದ ಕಾರ್ಮಿಕರೂ ಇದರಲ್ಲಿ ನೋಂದಾಯಿಸಿಕೊಂಡಿದ್ದಾರೆ. ಆದರೆ, ಸಾಮಾಜಿಕ ಭದ್ರತಾ ಯೋಜನೆಗಳು, ಹಣ ವಿನಿಯೋಗ, ಮೂಲಸೌಕರ್ಯ ಯಾವುದನ್ನೂ ಇದುವರೆಗೂ ಕೇಂದ್ರ ಸರ್ಕಾರ ಸ್ಥಾಪಿಸಿಲ್ಲ. ಪ್ರಧಾನ ಮಂತ್ರಿ ಶ್ರಮ ಯೋಗಿ ಮಂದನ್ (PM-SYM) ಎಂಬ ಮರುನಾಮಕರಣಗೊಂಡ ಅಟಲ್ ಪಿಂಚಣಿ ಯೋಜನೆಯನ್ನು ಸರ್ಕಾರ ಘೋಷಿಸಿದೆ. 18 ರಿಂದ 40 ವರ್ಷ ವಯಸ್ಸಿನವರು ಮಾತ್ರ ಈ ಯೋಜನೆಗೆ ಸೇರಬಹುದು. ಈ ಪಿಂಚಣಿ ಯೋಜನೆಗೆ ಕಾರ್ಮಿಕರು ಸರಕಾರಕ್ಕೆ ಮಾಸಿಕ 55 ರಿಂದ 200 ರೂ. ವರೆಗೂ ತುಂಬಬೇಕು. 60 ವಯಸ್ಸಿನ ನಂತರ ತಿಂಗಳಿಗೆ 3000 ರೂಪಾಯಿ ಪಿಂಚಣಿ ಸಿಗುತ್ತದೆ. ಈಗ 40 ವರ್ಷ ವಯಸ್ಸಿನ ಕಾರ್ಮಿಕರು ಯೋಜನೆಗೆ ಸೇರಿದರೆ, ಮುಂದಿನ 20 ವರ್ಷಗಳವರೆಗೆ ಸರ್ಕಾರಕ್ಕೆ ತಿಂಗಳಿಗೆ 200 ರೂ.ಗಳನ್ನು ಪಾವತಿಸುತ್ತಾರೆ ಮತ್ತು 20 ವರ್ಷಗಳ ನಂತರ ಅವರಿಗೆ ತಿಂಗಳಿಗೆ 3,000 ರೂ. ಮಾತ್ರ ಪಿಂಚಣಿ ಸಿಗುತ್ತದೆ. ಆಗ 3 ಸಾವಿರದ ನಿಜವಾದ ಮೌಲ್ಯ ತೀವ್ರವಾಗಿ ಕುಗ್ಗಿರುತ್ತದೆ.

ಕನಿಷ್ಟ ವೇತನ ರೂ. 31 ಸಾವಿರ...

1957 ರಲ್ಲಿ ನಡೆದ ಭಾರತೀಯ ಕಾರ್ಮಿಕ ಸಮ್ಮೇಳನವು ಕಾರ್ಮಿಕರ ಅಗತ್ಯತೆಗಳ ಆಧಾರದ ಮೇಲೆ ಕನಿಷ್ಟ ವೇತನವನ್ನು ನೀಡಲು ನಿರ್ಧರಿಸಿತು. ಈ ಒಂಬತ್ತು ವರ್ಷಗಳಲ್ಲಿ ಸರ್ಕಾರ ವಾರ್ಷಿಕವಾಗಿ ನಡೆಸುವ 'ಭಾರತೀಯ ಕಾರ್ಮಿಕ ಸಮ್ಮೇಳನ' ಎಂಬ ತ್ರಿಪಕ್ಷೀಯ ಸಮ್ಮೇಳನವನ್ನು ಮೋದಿ ಸರ್ಕಾರ 2015 ರಲ್ಲಿ ನಡೆಸಿದೆ. ಇಂದಿನ ಬೆಲೆಗಳ ಪ್ರಕಾರ, 1957 ರ ಸಮ್ಮೇಳನವು ನಿರ್ಧರಿಸಿದ ಅವಶ್ಯಕತೆಯ ಆಧಾರದ ಮೇಲೆ ಕನಿಷ್ಠ ಕೂಲಿ 31 ಸಾವಿರ ರೂ. ನಿಗದಿಮಾಡಬೇಕು. ಅದು ಎಲ್ಲರಿಗೂ ಸಿಗುವಂತೆ ನೋಡಿಕೊಳ್ಳಬೇಕು. ಅಂತಹ ಪ್ರಮುಖ ಬೇಡಿಕೆಗಳನ್ನು ➚

ಸಂಪಾದಕೀಯ

ಸಂಪುಟದ ಹೊಣೆಗಾರಿಕೆಯ ಅರಿವಿರಲಿ

ಕಾಂಗ್ರೆಸ್ ಪಕ್ಷದ 24 ಶಾಸಕರು ಮೇ 27 ಶನಿವಾರದಂದು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯವರೊಂದಿಗೆ ಪ್ರಮಾಣ ವಚನ ಸ್ವೀಕರಿಸಿದ 10 ಜನರೊಂದಿಗೆ ಸಿದ್ಧರಾಮಯ್ಯನವರ ಸಂಪುಟ 34 ಕ್ಕೆ ಏರಿದೆ. ಇದು ನಿಗದಿತ 34 ರ ಗರಿಷ್ಠ ಮಿತಿಯನ್ನು ತಲುಪಿದೆ.

ಕಾಂಗ್ರೆಸ್ ಪಕ್ಷ 2023 ರ ಮೇ 13 ರಂದು 135 ಸ್ಥಾನಗಳನ್ನು ಪಡೆದು ಅತ್ಯಧಿಕ ಬಹುಮತದಿಂದ ಆಯ್ಕೆಯಾದ ಬಳಿಕ ಸರಕಾರ ರಚನೆ ಮತ್ತು ಸಂಪುಟ ರಚನೆಗೆ ನಡೆಸಲಾದ ಪ್ರಯಾಸದ ಕಸರತ್ತು ಇದಾಗಿದೆ. ಆರಂಭದಲ್ಲೇ ಸೃಷ್ಟಿಗೊಂಡ ಸಿದ್ಧರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ರವರ ಎರಡು ಬಣಗಳ ಪ್ರಬಲ ಪ್ರತಿಪಾದನೆಯ ಹಗ್ಗ ಜಗ್ಗಾಟದಿಂದ ಸಂಪುಟ ರಚನೆಗೆ ಮತ್ತೊಂದು ವಿಳಂಬ ಸಂಭವಿಸಿತು. ಹೈಕಮಾಂಡ್ ಮುಂದಿನ ರಾಜೀ ಸೂತ್ರದ ಸಂಪುಟ ಇದು ಎಂದು ಹೇಳಲಾಗುತ್ತಿದೆ. ಇನ್ನು ಲಾಭದಾಯಕ ಖಾತೆಗಳ ಹಂಚಿಕೆಯ ಎಳೆದಾಟವೂ ತಪ್ಪಿದ್ದೇನಲ್ಲ. ಬಹುಮತ ಪಡೆದ ಪಕ್ಷದ ಶಾಸಕಾಂಗ ಪಕ್ಷವು ತನ್ನ ನಾಯಕನನ್ನು ಆರಿಸಿದವರು ಮುಖ್ಯಮಂತ್ರಿಯಾಗುವುದು ಸಂವಿಧಾನದತ್ತ ನಿಯಮ. ಹಾಗೆಯೇ ಸುಲಲಿತ ಆಡಳಿತಕ್ಕಾಗಿ ತನ್ನ ನೆರವಿಗೆ ಮಂತ್ರಿಗಳ ಸಂಪುಟ ರಚಿಸುವುದು ಮುಖ್ಯಮಂತ್ರಿಯವರ ನಿರ್ಧಾರಕ್ಕೆ ಬಿಟ್ಟ ವಿಚಾರವಾಗಿದೆ. ಮುಖ್ಯಮಂತ್ರಿ ಪಕ್ಷದ ಪ್ರತಿನಿಧಿಯೂ ಆಗಿರುವುದರಿಂದ ಪಕ್ಷದ ಸೂಚನೆ ಅನುಸರಿಸುವ ಸಾವಯವ ಸಂಬಂಧವೂ ಇಲ್ಲದಿಲ್ಲ. ಇವೆಲ್ಲವೂ ಪಕ್ಷದಲ್ಲಿ ಆಂತರಿಕವಾಗಿ ನಡೆಯುವ ವಿಷಯಗಳು.

ಆದರೆ ಮುಖ್ಯಮಂತ್ರಿ ಆಯ್ಕೆ, ಸಚಿವರ ಆಯ್ಕೆಯ ಪ್ರಕ್ರಿಯ ಬೀದಿ ರಂಪಾಟದಂತೆ ನಡೆದದ್ದು ಜನರಿಗೆ ಒಂದಿಷ್ಟು ನಿರಾಶೆ ತಂದಿದೆ. ಇದು ಕಾಂಗ್ರೆಸ್ ಸರಕಾರ ಎನ್ನುವ ಬದಲು ಎರಡು ಬಣಗಳ ಸರಕಾರ ಎಂದು ಬಿಂಬಿತವಾಗುವುದು, ಇದನ್ನೇ ಬಳಸಿ ಬಿಜೆಪಿ ಅಭದ್ರ ಸರಕಾರ, ಇಬ್ಬರ ಮೈತ್ರಿ ಸರಕಾರ, ಸಂಸತ್ತಿನ ಚುನಾವಣೆಯ ಬಳಿಕ ಪತನ ಎಂದೆಲ್ಲಾ ನಡೆಸಲಾಗುತ್ತಿರುವ ವ್ಯಾಖ್ಯಾನಗಳು ಸ್ಥಿರ ಸರಕಾರ ಬಯಸಿದವರಿಗೆ ಕೊಂಚ ನಿರಾಶೆ ತರುತ್ತಿದೆ. ಪ್ರತಿ ಹಂತದಲ್ಲಿಯೂ ಬಣಗಳ ಬಲಾಬಲ ಪ್ರದರ್ಶನ, ನಾಯಕರ ಹಠಮಾರಿತನ ಮತ್ತು ಶಕ್ತಿಯ ಅಸ್ತಿತ್ವ ಸಾಬೀತು ಪಡಿಸುವ ಯತ್ನಗಳು ಅನುಮಾನ ಮತ್ತು ನಿರಾಶೆಯನ್ನು ಹೆಚ್ಚಿಸುತ್ತವೆ. ಕಾಂಗ್ರೆಸ್ ಹೈಕಮಾಂಡಿನ ಮುಂದೆ ಅದೇನೇ ಒಪ್ಪಂದಗಳಿದ್ದರೂ ಅದು ಆಂತರಿಕವಾಗಿ ಇರಬೇಕೇ ಹೊರತು ಜನರೆದುರಿನ ಪ್ರಹಸನವಾಗಬೇಕಿಲ್ಲ.

ನೂತನ ಸರಕಾರದ ಮುಂದೆ ಅನೇಕ ಗುರುತರ ಕರ್ತವ್ಯಗಳಿವೆ. ಅವುಗಳನ್ನು ನಿರ್ವಹಿಸಿ ಜನತೆಗೆ ನೆಮ್ಮದಿ, ಶಾಂತಿ, ಸಾಮರಸ್ಯದ ಬದುಕನ್ನು ನಿರ್ಮಿಸಬೇಕು. ಕಾನೂನು, ಸಂವಿಧಾನಬದ್ಧ ಆಡಳಿತವೇ ಕುಸಿದು ಹೋಗಿದೆ. ಗೃಹ ಇಲಾಖೆ, ಶಿಕ್ಷಣ, ಸಂಸ್ಕೃತಿ, ಆರ್ಥಿಕತೆ, ಸಮಾಜಗಳನ್ನು ಹದಗೆಡಿಸಲಾಗಿದೆ. ಇವೆಲ್ಲವನ್ನೂ ಸುಸ್ಥಿತಿಗೆ ತರುವುದು ಮೊದಲ ಆದ್ಯತೆ. ಇವನ್ನು ಸಮರ್ಥವಾಗಿ ನಿರ್ವಹಿಸ ಬಲ್ಲವರನ್ನು ಸಚಿವರನ್ನಾಗಿಸಿ, ಯಶಸ್ವಿಯಾಗಿ ಕೆಲಸ ಮಾಡಲು ಅವಕಾಶ, ಸಹಕಾರ ನೀಡಬೇಕು

ಅನುಭವಿಯಾಗಿರುವ ಮುಖ್ಯಮಂತ್ರಿ ಯವರಿಗೆ ಸಂಪುಟದ ಸಹೋದ್ಯೋಗಿಗಳು, ಪಕ್ಷದ ನಾಯಕತ್ವ ಸಹಕಾರ ನೀಡಬೇಕು. ಇದಕ್ಕೆ ಬದಲಾಗಿ ಚುನಾವಣೆಯಲ್ಲಿ 'ಬಂಡವಾಳ ಹೂಡಿದವರು' 'ವ್ಯಾಪಾರ' ಮಾಡಿಕೊಳ್ಳಲು ಅವಕಾಶ ಮಾಡಿಕೊಳ್ಳುವುದು ಅಧಃಪತನಕ್ಕೆ ಹಾಕುವ ಹೆಜ್ಜೆಗಳು ಎನ್ನುವುದನ್ನು ಮರೆಯದಿರಲಿ.

ಆತ್ಮಾವಲೋಕನದಲ್ಲಿ ಇಲ್ಲವಾದ 'ಆತ್ಮ'!?

ಈ ವಾರ

ಎಸ್.ವೈ. ಗುರುಶಾಂತ್

2023 ರ ವಿಧಾನಸಭಾ ಚುನಾವಣೆಯಲ್ಲಿ ತಾನೇ 'ಕಿಂಗ್' ಆಗುವ ಕನಸು ಕಂಡಿದ್ದ ಜಾತ್ಯಾತೀತ ಜನತಾದಳ ಹಾಗಾಗದೇ ಇರುವ ಕಾರಣಗಳ ಬಗ್ಗೆ 'ಆತ್ಮಾವಲೋಇಕನ' ಮಾಡಿಕೊಂಡಿದೆ. 'ಅತಿ ಆಸೆ ಗತಿಗೇಡು' ಎನ್ನುವಂತಾಗಿರುವ ಜೆಡಿಎಸ್ ನಲ್ಲೀಗ ಕಾಡುತ್ತಿರುವುದು ನಿರಾಶೆ ಮಾತ್ರ ಅಲ್ಲ, ಹತಾಶೆ ಕೂಡ! ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಮತ್ತು ಇತರೆ ಪ್ರಮುಖ ನಾಯಕರು ಕಾರ್ಯಕರ್ತರ ಮುಂದೆ ಮಾಡಿಕೊಂಡ ಆತ್ಮಾವಲೋಕನ ಫಲಿತಾಂಶದ ಮೂಲಕ ಜನತೆ ಕೊಟ್ಟ ಸ್ಪಷ್ಟ ಸಂದೇಶವನ್ನು ಅರ್ಥ ಮಾಡಿಕೊಳ್ಳುವಂತೆ ಆಳಕ್ಕೆ ಇಳಿದಿರಲಿಲ್ಲ. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ ಮತಗಳ ಕ್ರೋಢೀಕರಣಕ್ಕೆ ಕಾರಣವಾದ ಅಂಶಗಳು, ಕೋಮುವಾದಿ ಬಿಜೆಪಿಯ ವಿರುದ್ಧದ ಮತದಾರರ ಪರಿಗಣನೆಗಳು ಅವಲೋಕನದ ನಜರ್ ನಿಂದ ಹೊರಗುಳಿದಿವೆ. ಬಿಜೆಪಿಯ ದುರಾಡಳಿತಕ್ಕೆ ರೋಸಿಹೋದ ಜನ ಒದ್ದೋಡಿಸಲು ಸನ್ನದ್ಧಗೊಳ್ಳುತ್ತಿರುವಾಗ ಗದ್ದುಗೆ ಹಿಡಿಯಲು ಬಿಜೆಪಿಯಾದರೇನು, ಷರತ್ತು ಒಪ್ಪಿದರೆ ಕಾಂಗ್ರೆಸ್ಸಾದರೇನು ಎನ್ನುವ 'ಅವಕಾಶವಾದಿ' ರಾಜಕಾರಣಕ್ಕೆ ಜನ ಕೊಟ್ಟ ಅಘಾತಕಾರಿ ಪೆಟ್ಟು ಎನ್ನುವುದನ್ನು ಮರೆ ಮಾಚುವುದೇಕೆ? ಕಾಂಗ್ರೆಸ್ ಮತ್ತು ಬಿಜೆಪಿಗಳಿಗೆ ಮೂರನೆಯ ಸೆಕ್ಯುಲರ್ ಪರ್ಯಾಯವನ್ನೇ ಜನರ ಮುಂದೆ ಇಡಬಹುದಿತ್ತು. ಕಳೆದ ಅವಧಿಯಲ್ಲಿ ಜನಸ್ನೇಹಿ ಆಡಳಿತ ನೀಡಲು ಕುಮಾರಸ್ವಾಮಿಯವರು ಯತ್ನಿಸಿದ್ದಾಗಲೂ ಬಹುಮತವಿಲ್ಲದೇ ಅಲ್ಪ ಸಂಖ್ಯೆಯಲ್ಲಿದ್ದರೂ ಮುಖ್ಯಮಂತ್ರಿಯಾಗಿದ್ದುದರ ಬಗ್ಗೆ ಬಹುಸಂಖ್ಯೆಯಲ್ಲಿ ಅಷ್ಟಾಗಿ ಒಲವು ಇರದುದನ್ನು ನಿರಾಕರಿಸಲಾಗದು ಅಥವಾ ಜೆ.ಡಿ.ಎಸ್. ಬಗ್ಗೆ ಒಂದು ಮಟ್ಟಿನ ಪೂರ್ವಾಗ್ರಹ ಬೆಳೆಸಲಾಗಿತ್ತು.

ಚುನಾವಣಾ ಫಲಿತಾಂಶದಲ್ಲಿ ಇಷ್ಟು ಕಡಿಮೆ ಸ್ಥಾನ ಬಂದಿರುವುದರ ಬಗ್ಗೆ ಮತ್ತು ಸೋಲುಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದ ಮಾಜಿ ಪ್ರಧಾನಿ ದೇವೇಗೌಡ ರವರು ಈ ಸೋಲು ಅತ್ಯಂತ ನೋವು ತಂದಿದೆ ಎನ್ನುತ್ತಲೇ ಅದನ್ನು ಅರಗಿಸಿಕೊಂಡು ಪಕ್ಷವನ್ನು ಮತ್ತೆ ಅಧಿಕಾರಕ್ಕೆ ಬರುವಂತೆ ಕೊನೆ ಉಸಿರು ಇರುವವರೆಗೂ ಶ್ರಮಿಸುವುದಾಗಿ ತಿಳಿಸಿದ್ದಾರೆ. ಎಚ್.ಡಿ. ಕುಮಾರಸ್ವಾಮಿ ಅವರು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ ಬಗ್ಗೆ ಮತ್ತು ಅವರಿಗೆ ಸಂಪನ್ಮೂಲ ಪೂರೈಸಲು ಆಗದಿರುವುದರ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾ ಸಂಪನ್ಮೂಲ ನೀಡದೇ ಕೆಲವರು ದ್ರೋಹ ಬಗೆದ ಬಗ್ಗೆ ಪ್ರಸ್ತಾವಿಸಿ ಅಭ್ಯರ್ಥಿಗಳ ಕ್ಷಮೆ ಯಾಚಿಸಿದ್ದಾರೆ. ಈ ಕಾರಣದಿಂದಲೇ ಸುಮಾರು 25 ಅಭ್ಯರ್ಥಿಗಳು 2000 ರಿಂದ 4000 ಮತಗಳ ಅಂತರದಲ್ಲಿ ಸೋಲನ್ನಪ್ಪಿದ್ದಾರೆ ಎಂದು ಹೇಳಿದ್ದಾರೆ. ತಾವು ಇಡೀ ಈ ಅವಧಿಯ ಉದ್ದಕ್ಕೂ ಒಂದು ಸಮುದಾಯದ (ಮುಸ್ಲಿಂ) ರಕ್ಷಣೆಗೆ ಶ್ರಮಿಸಿದಾಗಲೂ ಆ ಸಮುದಾಯ ನಂಬಲಿಲ್ಲ' ಎಂದು ಆರೋಪಿಸಿದ್ದಾರೆ. ಸೋಲಿನ ಹೊಣೆ ಹೊತ್ತು ಸಿ.ಎಂ. ಇಬ್ರಾಹಿಂ ಮತ್ತು ಯುವ ಘಟಕದ ಅಧ್ಯಕ್ಷರಾಗಿರುವ ನಿಖಿಲ್ ಕುಮಾರಸ್ವಾಮಿ ನೀಡಿದ ರಾಜೀನಾಮೆ ನೀಡಿದ್ದಾರೆ.

ಚುನಾವಣಾ ಪ್ರಚಾರದುದ್ದಕ್ಕೂ ಜೆಡಿಎಸ್ ಪಕ್ಷದ ನಾಯಕರು ಬಿಜೆಪಿಯನ್ನು ನಿಖರವಾಗಿ ಟೀಕಿಸಲಿಲ್ಲ, ಭ್ರಷ್ಟಾಚಾರ, ಹಗರಣಗಳು, ಕೋಮುವಾದದ ಅಪಾಯಗಳನ್ನು ಅಷ್ಟಾಗಿ ಟೀಕಿಸದೇ ಕಾಂಗ್ರೆಸ್ ವಿರೋಧವಾಗಿಯೇ ಮಾತನಾಡಿದರು ಎಂಬ ಟಿಪ್ಪಣಿಯನ್ನು ಕೆಲವರು ಮಾಡಿದ್ದಾರೆ. ಇಡೀ ವಿರೋಧ ಪಕ್ಷಗಳು ಸರಕಾರದ ನಿಲುವನ್ನು ಪ್ರತಿಭಟಿಸಿ ನೂತನ ಸಂಸತ್ತಿನ ಉದ್ಘಾಟನೆಯನ್ನು ಬಹಿಷ್ಕರಿಸಿರುವಾಗ ದೇವೇಗೌಡರು ಪಾಲ್ಗೊಳ್ಳುವುದಾಗಿ ಯಾಕೆ ಹೇಳಿದ್ದಾರೆ ಎಂದೂ ಪ್ರಶ್ನಿಸಿದ್ದಾರೆ. ಈ ನಡೆ ಮತ್ತು ಕಾಂಗ್ರೆಸ್ ಸರಕಾರ ಬೇಗ ಪತನವಾಗುವುದು ಎಂದು ಭವಿಷ್ಯ ಹೇಳುತ್ತಾ ಅದನ್ನೇ ನಿರೀಕ್ಷಿಸುತ್ತಿರುವುದರ ಹಿಂದೆ ಇರುವ ನಿಲುವು ಯಾವುದು?

ಸಂಸತ್ತಿನ ಚುನಾವಣೆಯ ಹೊತ್ತಿಗಾದರೂ ಬಿಜೆಪಿಯನ್ನು ಅಧಿಕಾರದಿಂದ ತೊಲಗಿಸಲು ಜೆಡಿಎಸ್ ಸ್ಪಷ್ಟ ರಾಜಕೀಯ ನಿಲುವು ತಳೆಯುವುದು ಅಗತ್ಯ. ಇದು ನಾಡಿನ ಹಿತದಲ್ಲಿ ಮಾತ್ರವಲ್ಲದೇ ತನ್ನ ಹಿತದಲ್ಲಿಯೂ ಮುಖ್ಯ.

➘ ಒತ್ತಿಹೇಳುವುದು, ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಜನವಿರೋಧಿ ನೀತಿಗಳನ್ನು ಸೋಲಿಸಲು, ಜಾತಿ, ಧರ್ಮ, ಜನಾಂಗ ಮತ್ತು ಭಾಷೆಯ ಭೇದವಿಲ್ಲದೆ ಕರ್ನಾಟಕದ ಕಾರ್ಮಿಕ ವರ್ಗವನ್ನು ಒಗ್ಗೂಡಿಸಲು, ಪ್ರಬಲ ವರ್ಗ ಹೋರಾಟಗಳನ್ನು ಮುಂದಕ್ಕೆ ಕೊಂಡೊಯ್ಯಲು, ಮತೀಯ ರಾಜಕಾರಣಕ್ಕೆ ಅಂತ್ಯ ಹಾಡಲು ಮೇ 30 ರಂದು ಸಿಐಟಿಯುನ 53 ನೇ ಸಂಸ್ಥಾಪನಾ ದಿನದ ಆಚರಣೆಯ ಈ ಸಂದರ್ಭದಲ್ಲಿ ಪಣತೊಡೋಣ.

ಹೊಸ ಸರ್ಕಾರಕ್ಕೆ ರಾಜ್ಯದ ಕಾರ್ಮಿಕರ ಹಕ್ಕೊತ್ತಾಯಗಳು

29 ಕಾನೂನುಗಳನ್ನು 4 ಸಂಹಿತೆಗಳನ್ನಾಗಿ ಮಾಡಿರುವ ಕೇಂದ್ರದ ಶಾಸನಗಳ ನಿಯಮಾವಳಿಗಳನ್ನು ರಾಜ್ಯ ಸರ್ಕಾರ ಜಾರಿ ಮಾಡಬಾರದು. ಕಾರ್ಮಿಕರ ಪರವಾದ ಕಾನೂನುಗಳನ್ನು ಜಾರಿಗೆ ತರಬೇಕು. ವಿದ್ಯುಚ್ಛಕ್ತಿ ಖಾಸಗೀಕರಣ ಕೈಬಿಟ್ಟು, ವಿದ್ಯುತ್ ತಿದ್ದುಪಡಿ ಮಸೂದೆ 2020ನ್ನು ತಿರಸ್ಕರಿಸಬೇಕು. ಬೆಲೆ ಏರಿಕೆ ಆಧಾರದಲ್ಲಿನ ತುಟ್ಟಿಭತ್ಯೆಯೊಂದಿಗೆ ಎಲ್ಲಾ ವಿಭಾಗಗಳ ಕಾರ್ಮಿಕರಿಗೂ ಸಮಾನ ಕನಿಷ್ಠ ವೇತನ ರೂ. 31 ಸಾವಿರ ಜಾರಿಗೊಳಿಸಬೇಕೆಂದು.

ಬೀಡಿ ಕಾರ್ಮಿಕರ ಎಲ್ಲಾ ಕಲ್ಯಾಣ ಯೋಜನೆಗಳನ್ನು ಜಾರಿಗೆ ತರಬೇಕು. ರಾಜ್ಯ ಸರ್ಕಾರ ಕೇರಳ ಮಾದರಿಯಲ್ಲಿ ಕಲ್ಯಾಣ ಕಾರ್ಯಕ್ರಮ ಜಾರಿ ಮಾಡಬೇಕು. ತೋಟ ಕಾರ್ಮಿಕರ ಕಾಯ್ದೆಯನ್ನು ಉಳಿಸಿ ಪ್ಲಾಂಟೇಶನ್ ಕಾರ್ಮಿಕರಿಗೆ ಪ್ರತ್ಯೇಕ ಕಲ್ಯಾಣ ಮಂಡಳಿ ಸ್ಥಾಪಿಸಿ ಮನೆ, ಶಿಕ್ಷಣ, ಆರೋಗ್ಯ, ಸವಲತ್ತುಗಳನ್ನು ಜಾರಿ ಮಾಡಬೇಕು. ಅಂತರ ರಾಜ್ಯ ವಲಸೆ ಕಾರ್ಮಿಕರ ಕಲ್ಯಾಣ ಮಂಡಳಿ ರಚಿಸಿ, ಯೋಜನೆ ರೂಪಿಸಿ ವಸತಿ ಆರೋಗ್ಯ, ಶಿಕ್ಷಣ ಒದಗಿಸಬೇಕು. ಜೀವವಿಮಾ ಪ್ರತಿನಿಧಿಗಳನ್ನು ಕೇರಳದ ಮಾದರಿಯಲ್ಲಿ ರಾಜ್ಯ ಸರ್ಕಾರದ ಅಸಂಘಟಿತ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಸೇರ್ಪಡೆ ಮಾಡಬೇಕು.

ಕನಿಷ್ಠ ವೇತನ ಸಲಹಾ ಮಂಡಳಿ, ಕಾರ್ಮಿಕರ ಕಲ್ಯಾಣ ಮಂಡಳಿ, ಕಟ್ಟಡ ಹಾಗು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಅಸಂಘಟಿತ ಕಾರ್ಮಿಕರ ಕಲ್ಯಾಣ ಮೊದಲಾದ ತ್ರಿಪಕ್ಷೀಯ ಮಂಡಳಿ/ಸಮಿತಿಗಳಲ್ಲಿ ಸಿಐಟಿಯು ಪ್ರತಿನಿಧಿಗಳನ್ನು ಸೇರ್ಪಡೆ ಮಾಡಬೇಕು. ರಾಜ್ಯದಲ್ಲಿ ಕಾರ್ಖಾನೆ ಕಾಯ್ದೆಗೆ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, ಕೈಗಾರಿಕಾ ನಿಶ್ಚಿತ ಕಾಲಾವಧಿ ಕಾರ್ಮಿಕರ ನೇಮಕದ ಮಾದರಿ ಸ್ಥಾಯಿ ಆದೇಶಗಳಿಗೆ ಮಾಡಲಾಗಿರುವ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ವಾಪಸ್ಸು ಪಡೆಯಬೇಕು.

ಮಹಿಳೆಯರನ್ನು ರಾತ್ರಿ ಪಾಳಿಯಲ್ಲಿ ಮತ್ತು ಅಪಾಯಕಾರಿ ಕೆಲಸಗಳಲ್ಲೂ ದುಡಿಸಿಕೊಳ್ಳಲು ನೀಡಿರುವ ರಿಯಾಯಿತಿ ರದ್ದು ಮಾಡಬೇಕು. ಆಟೋ, ಟ್ಯಾಕ್ಸಿ ಮುಂತಾದ ಅಸಂಘಟಿತ ಸಾರಿಗೆ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ರಚಿಸಬೇಕು. ಹಮಾಲಿ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ದರ್ಜಿಗಳು, ಮೆಕ್ಯಾನಿಕ್ ಗಳು, ಮನೆಗೆಲಸ ಮಹಿಳೆಯರು ಸೇರಿ ವಿವಿಧ ವಿಭಾಗಗಳಿಗೆ ಈಗಾಗಲೇ ಕಾರ್ಮಿಕ ಇಲಾಖೆ ರೂಪಿಸಿರುವ ಅಸಂಘಟಿತ ಕಾರ್ಮಿಕರ ಭವಿಷ್ಯ ನಿಧಿ ಕರಡನ್ನು ಶಾಸನವನ್ನಾಗಿ ವಿಧಾನಸಭೆಯಲ್ಲಿ ಅಂಗೀಕರಿಸಬೇಕು. ಅದಕ್ಕೆ ಅಗತ್ಯವಿರುವ ಸೆಸ್ ಸಂಗ್ರಹಕ್ಕೆ ಸರ್ಕಾರ ಕ್ರಮವಹಿಸಬೇಕು.

ಸಂಘಟಿತ ಕಾರ್ಮಿಕರು ಹಾಗೂ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಕಟ್ಟಡ ನಿರ್ಮಾಣ ಆಟೋ, ಟ್ಯಾಕ್ಸಿ, ಮನೆಗೆಲಸ, ಹಮಾಲಿ, ಬೀದಿಬದಿ ಹಾಗೂ ಉದ್ಯೋಗ ಖಾತ್ರಿಗಳಲ್ಲಿ ದುಡಿಯುತ್ತಿರುವ ಲಕ್ಷಾಂತರ ಶ್ರಮಜೀವಿಗಳು ಹಾಗೂ ಖಾಸಗೀ ಮತ್ತು ಸರ್ಕಾರದ ಮುನ್ಸಿಪಾಲಿಟಿ, ಗ್ರಾಮ ಪಂಚಾಯ್ತಿಗಳಲ್ಲಿ ದುಡಿಯುತ್ತಿರುವ ನೌಕರರು ಸೇರಿ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ, ಮತ್ತು ವಿವಿಧ ಸ್ಕೀಂಗಳಲ್ಲಿ ಕೆಲಸ ಮಾಡುವ ಅಂಗನವಾಡಿ, ಬಿಸಿಯೂಟ, ಆಶಾ ಮೊದಲಾದ ಕಾರ್ಮಿಕರ ಬೇಡಿಕೆಗಳನ್ನು ಪರಿಗಣಿಸಬೇಕು.





ಸದಾ ದುಡಿಯುವ ವರ್ಗದ ಕುರಿತು ಚಿಂತನೆ ಮಾಡುತ್ತಿದ್ದ ಕಾರ್ಮಿಕ ಮುಖಂಡ ವಿ.ಪಿ.ಕುಲಕರ್ಣಿಯವರ ಶ್ರದ್ಧಾಂಜಲಿ ಸಭೆ

ಏಪ್ರಿಲ್ 28, 2023 ರಂದು ನಿಧನರಾದ ಸಂಗಾತಿ ವಿ.ಪಿ. ಕುಲಕರ್ಣಿಯವರಿಗೆ ಬೆಳಗಾವಿಯಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು. ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ ನೌಕರರ ಸಂಘ ರಾಜ್ಯ ಸಮಿತಿ ಮತ್ತು ಸಿಐಟಿಯು ಬೆಳಗಾವಿ ಜಿಲ್ಲಾ ಸಮಿತಿ ಆಶ್ರಯದಲ್ಲಿ ಬೆಳಗಾವಿಯ ಮಾರುತಿ ಮಂಗಲ ಕಾರ್ಯಾಲಯದಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು. ಸಭೆಯಲ್ಲಿ ಭಾಗವಹಿಸಿದ್ದ ಹಲವು ಸಂಘಟನೆಗಳ ಮತ್ತು ಸಿಪಿಐಎಂ ಪಕ್ಷದ ಮುಖಂಡರು ಕಾಂ. ಕುಲಕರ್ಣಿಯವರ ಹೋರಾಟಗಳ ಹಾದಿ ಮತ್ತು ಆ ಹಾದಿಯಲ್ಲಿ ಅವರು ದಿಟ್ಟತನದಿಂದ ಎದುರಿಸಿದ ಹಲವು ಘಟನೆಗಳನ್ನು ನೆನಪಿಸಿಕೊಂಡು ಮಾತನಾಡಿದರು. ಅವರ ನೆನಪುಗಳ ತುಣುಕುಗಳು ಇಲ್ಲಿವೆ.

ವಿ.ಪಿ.ಕುಲಕರ್ಣಿಯವರು ಮೂಲತಃ ರಾಮದುರ್ಗ ತಾಲೂಕಿನ ಮುದೇನಕೊಪ್ಪ ಗ್ರಾಮದವರಾದರು. 14.03.1953 ರಲ್ಲಿ ಜನನ. ಇವರ ತಂದೆ ಪ್ರಲ್ಹಾದ, ತಾಯಿ ಉಷಾದೇವಿ. ಬಡತನದಲ್ಲಿಯೇ ಬೆಳೆದ ಅವರು ಬಾಲ್ಯದಲ್ಲಿಯೇ ತಂದೆ–ತಾಯಿಯನ್ನು ಕಳೆದುಕೊಂಡರು.

ದುಡಿಯುವ ಜನರಿಗೆ, ರೈತರಿಗೆ, ಶೋಷಿತರಿಗೆ ಧ್ವನಿ ನೀಡಿ ರಾಮದುರ್ಗದಲ್ಲಿ ಪ್ರಜಾಸತ್ತಾತ್ಮಕ ಹೋರಾಟಗಳನ್ನು ಪ್ರಾರಂಭ ಮಾಡಿದ ಕಾಂ. ವಿ.ಪಿ.ಕುಲಕರ್ಣಿ ತಮ್ಮ ಚಿಕ್ಕ ವಯಸ್ಸಿನಲ್ಲೇ ಮಾರ್ಕ್ಸವಾದದ ಸಿದ್ಧಾಂತಕ್ಕೆ ಮಾರು ಹೋದರು. ಮನುಷ್ಯನಿಂದಲೇ ಇತಿಹಾಸ ಸೃಷ್ಟಿಸಲು ಸಾಧ್ಯ ಎನ್ನುವ ತತ್ವವನ್ನು ನಂಬಿದ್ದರು.

ಇವರು ಧಾರವಾಡದಲ್ಲಿ 10 ನೇ ತರಗತಿಯವರೆಗೆ ಶಿಕ್ಷಣ ಪಡೆದರು. 1970 ರಿಂದ 1973 ರವರೆಗೆ ಧಾರವಾಡದ ಟೈವಾಕ ಕಂಪನಿಯಲ್ಲಿ ಕೆಲಸ ಮಾಡಿದರು. ಕಂಪನಿಯ ಕಾರ್ಮಿಕರನ್ನು ಸಂಘಟಿಸಿ ಅವರ ಸಮಸ್ಯೆಗಳ ಇತ್ಯರ್ಥಕ್ಕಾಗಿ ಹೋರಾಟ ಮಾಡುತ್ತಿರುವ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿಯವರು ಬಂದಿದ್ದಾರೆಂಬ ವಿಷಯ ತಿಳಿದು, ಅವರನ್ನು ಬೇಟಿಮಾಡಿ ಕಾರ್ಮಿಕರ ಸಮಸ್ಯೆಗಳನ್ನು ತಿಳಿಸಲು ಹೋದಾಗ, ತಮ್ಮ ಮನವಿ ಸ್ವೀಕರಿಸಲು ಮುಂದಾಗದ ಮುಖ್ಯ ಮಂತ್ರಿಯ ಕಾಲರ್ ಹಿಡಿದು ಏಳೆದ ಕಾರಣ ಇವರನ್ನು ಜೈಲಿಗೆ ಅಟ್ಟಲಾಯಿತು. ಚಿಕ್ಕ ವಯಸ್ಸಿನ ಕಾರಣದಿಂದ ನ್ಯಾಯಾಧೀಶರು ಹಾಗೂ ಎಸ್.ಪಿ ರವರು ಕುಲಕರ್ಣಿರವರಿಗೆ ಹೆದರಿಸಿ ಈ ರೀತಿಯ ತಂಟೆ ಮಾಡಿದರೆ ಹುಷಾರ್ ಎಂದು ಬುದ್ದಿವಾದ ಹೇಳಿ ಕಳಿಸಿದ್ದರು. 1977 ರಲ್ಲಿ ಬೆಂಗಳೂರಿಗೆ ಹೋಗಿ ಸಿಪಿಎಂ ಪಕ್ಷದ ಸದಸ್ಯತ್ವ ಪಡೆದು ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಕೊಂಡರು.

ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾಗಿ ಪ್ರತಿದಿನ 2 ರೂಪಾಯಿ ಸಂಭಾವನೆ ಪಡೆದು ಅದರಲ್ಲಿ ಊಟೋಪಚಾರ ಮಾಡಿಕೊಂಡು ಕಷ್ಟದ ಜೀವನ ಕಳೆದರು. ಪಕ್ಷದ ಮುಖವಾಣಿ ಪತ್ರಿಕೆ ಐಕ್ಯರಂಗದಲ್ಲಿ ಕೆಲಸ ಮಾಡಿ ಪತ್ರಿಕೆ ಪ್ರಸಾರ ಮಾಡುವ ಕಾರ್ಯದಲ್ಲಿ ತೊಡಗಿ ಒಬ್ಬ ಪ್ರಾಮಾಣಿಕ ಹಾಗೂ ನಿಷ್ಠುರ, ಯಾರ ಜೊತೆಯೂ ರಾಜಿ ಮಾಡಿಕೊಳ್ಳದ ಮುಖಂಡರಾಗಿ ಬೆಳೆದರು.

1984 ರಲ್ಲಿ ಪಕ್ಷದ ರಾಜ್ಯ ಮುಖಂಡರ ಆದೇಶದಂತೆ ಕುಲಕರ್ಣಿರವರು ಬೆಂಗಳೂರಿನಿಂದ ರಾಮದುರ್ಗಕ್ಕೆ ಬಂದರು. ಅಲ್ಲಿ ಯಾರೂ ಪರಿಚಯವಿಲ್ಲ, ಗೆಳೆಯರಿಲ್ಲ, ತಮ್ಮ ಗ್ರಾಮ ಮುದೇನಕೊಪ್ಪದ ಹಳೇ ಗೆಳೆಯರ ಜೊತೆಗೂಡಿ ಕಡ್ಲಿಕೊಪ್ಪ ಗ್ರಾಮದಲ್ಲಿ ನೀರಾವರಿ ಕಾಲುವೆಯ ಬೇಡಿಕೆ ಇಟ್ಟುಕೊಂಡು ತಮ್ಮ ಹೋರಾಟವನ್ನು ಪ್ರಾರ0ಭಿಸಿದರು.

ಹಿಂದೆ 1939ರಲ್ಲಿ ರಾಮದುರ್ಗ ಸಂಸ್ಥಾನದ, ಭಾವ ಸರ್ಕಾರ ಬರಗಾಲ ಇದ್ದ ಸಮಯದಲ್ಲಿ ಹಿತ್ತಲಕ್ಕೆ ಟ್ಯಾಕ್ಸ್ ಹಾಕಿದ ನೀತಿಯನ್ನು ವಿರೋಧಿಸಿ ದೊಡ್ಡ ಹೋರಾಟವೇ ನಡೆದು 'ರಾಮದುರ್ಗ ದುರಂತ' ಎಂದು ಹೆಸರುವಾಸಿಯಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ನಂತರದಲ್ಲಿ ಮತ್ತೆ ಇಂತಹ ಪ್ರಜಾಸತ್ತಾತ್ಮಕ ಹೋರಾಟಗಳು ಪ್ರಾರಂಭವಾಗಿದ್ದು 1985 ರಲ್ಲಿ ವಿ.ಪಿ.ಕುಲಕರ್ಣಿರವರ ಮುಂದಾಳತ್ವದಲ್ಲಿ. 1984 ರಲ್ಲಿ ರಾಮದುರ್ಗಕ್ಕೆ ಬಂದು ಬಾಡಿಗೆ ಮನೆಯಲ್ಲಿ ವಾಸವಾಗಿ ಯಾರು ಪರಿಚಯ ಇಲ್ಲದಾದರೂ ತಮ್ಮ ಸಿದ್ಧಾಂತದ ಚಾಟಿಯಿಂದ ಜನರ ಜೊತೆ ಒಡನಾಟ ಬೆಳೆಸಿ, ಪ್ರಥಮವಾಗಿ ರಾಮದುರ್ಗದಲ್ಲಿ ವಾಹನ ಚಾಲಕರ ಸಂಘ ಕಟ್ಟಿದರು.

ರಾಮದುರ್ಗ ನಗರಕ್ಕೆ ಹೊಂದಿಕೊಂಡ ಪುರಸಭೆಯ ವ್ಯಾಪ್ತಿಗೆ ಬರುವ ಖುಲ್ಲಾ ಜಾಗೆಯಲ್ಲಿ ವಸತಿ ರಹಿತ ಬಡವರು ಗುಡಿಸಲು ಹಾಕಿಕೊಂಡು ಜೀವನ ನಡೆಸುತ್ತಿರುವಾಗ, ಅವರನ್ನು ಒಕ್ಕಲೆಬ್ಬಿಸಲು ಪುರಸಭೆಯವರು ಮುಂದಾದರು. ಆಗ ವಸತಿ ರಹಿತ ಬಡವರನ್ನು ಸಂಘಟಿಸಿ ನಿರಂತರ ಹೋರಾಟ ಮಾಡಿ, ಬಡವರನ್ನು ಅವರ ಗುಡಿಸಲದಿಂದ ಹೊರಹಾಕದಂತೆ ನೋಡಿಕೊಂಡಿದ್ದು ಐತಿಹಾಸಿಕವಾದ ಹೋರಾಟವಾಗಿದೆ. ನಂತರದ ದಿನಗಳಲ್ಲಿ ಇಲ್ಲಿ ನೀರು, ವಿದ್ಯುತ್, ರಸ್ತೆ ಇತ್ಯಾದಿ ಮೂಲಭೂತ ಸೌಲಭ್ಯಕ್ಕಾಗಿ ಹೋರಾಟಗಳು ನಡೆದು ಯಶಸ್ವಿಯಾಗಿವೆ. ಈಗ ಅದೇ ಪ್ರದೇಶ ಭಾಗ್ಯನಗರ ಎಂದು ಪ್ರಸಿದ್ಧಿ ಪಡೆದು 1995 ರಿಂದ 2015 ರವರೆಗೆ ನಿರಂತರ ಪಂಚಾಯತ ಚುನಾವಣೆಯಲ್ಲಿ ಸತತ 6 ಬಾರಿ ಸಿಪಿಎಂ ಪಕ್ಷದ ಸಂಗಾತಿಗಳೇ ಚುನಾಯಿತರಾಗಿದ್ದು, ಈ ಶ್ರೇಯಸ್ಸು ವಿ.ಪಿ.ಕುಲಕರ್ಣಿರವರಿಗೆ ಸಲ್ಲುತ್ತದೆ.

ಹಿಂದೆ ಕೇಂದ್ರದಲ್ಲಿ ವಿ.ಪಿ.ಸಿಂಗ್ ರವರ ಸರಕಾರ ಇದ್ದಾಗ ಮಂಡಲ್ ವರದಿ ಜಾರಿಗೆ ಬರಬೇಕೆಂಬ ಹೋರಾಟ ಪ್ರಾರಂಭವಾದಾಗ ಆ ಸಮಯದಲ್ಲಿ ಕುಲಕರ್ಣಿರವರು ವಿಧ್ಯಾರ್ಥಿಗಳನ್ನು ಸೇರಿಸಿ ಮಂಡಲ್ ವರದಿ ಬಗ್ಗೆ ತಿಳಿಸಿ ಎಸ್ ಎಫ್ ಐ ಸಂಘಟನೆ ಕಟ್ಟಿದರು. ಕಾಲೇಜು ಡೋನೆಷನ್ ಅನ್ನು ಹೆಚ್ಚಿಗೆ ಪಡೆಯುತ್ತಿರುವ ಸಿ ಎಸ್ ಬೆಂಬಳಗಿ ಕಾಲೇಜಿನ ಆಡಳಿತ ಮಂಡಳಿ ವಿರುದ್ಧ 5–6 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿ ಕೊನೆಗೂ ಹೆಚ್ಚಿಗೆ ಪಡೆದ ಡೋನೆಷನ್ ಮೊತ್ತವನ್ನು ವಿದ್ಯಾರ್ಥಿಗಳಿಗೆ ವಾಪಸ್ ಕೊಡಿಸುವಲ್ಲಿ ಜಯಶಾಲಿಯಾದರು.

ಎಸ್.ಎಫ್.ಐ ಸಂಘಟನೆ ಕಟ್ಟುವ ಮೊದಲು ಕಾಲೇಜಿನ ಜಾಗೆಯು ರಾಮದುರ್ಗ ಸಂಸ್ಥಾನಕ್ಕೆ ಸಂಬಂಧಿಸಿದ್ದುದರಿಂದ ಆ ಜಾಗೆಯನ್ನು ಸಂಸ್ಥಾನದವರು ಮಾರಾಟ ಮಾಡಲು ಹೊರಟಾಗ, ಮಧ್ಯಪ್ರವೇಶಿಸಿದ ಕುಲಕರ್ಣಿರವರು ಈ ಜಾಗೆಯಲ್ಲಿ ಪ್ಲಾಟ್‌ಗಳನ್ನು ಮಾಡಿ ಮಾರಾಟ ಮಾಡಬಾರದು, ಈ ಜಾಗೆಯನ್ನು ಸಿ.ಎಸ್.ಬೆಂಬಳಗಿ ಕಾಲೇಜಿನ ಆಡಳಿತಕ್ಕೆ ಬಿಟ್ಟುಕೊಡಬೇಕೆಂಬ ಬೇಡಿಕೆ ಇಟ್ಟು ಸತ್ಯಾಗ್ರಹ ಪ್ರಾರಂಭಿಸಿ ವಿಜಯ ಸಾಧಿಸಿಯೇ ತಮ್ಮ ಸತ್ಯಾಗ್ರಹವನ್ನು ಮುಗಿಸಿದರು. ಆವಾಗಿಂದ ಈ ಜಾಗೆಯು ಸಿ.ಎಸ್.ಬೆಂಬಳಗಿ ಕಾಲೇಜಿನ ಆಡಳಿತ ಮಂಡಳಿಯ ಕಟ್ಟಾ ಆಯಿತು.

ಈ ಸಮಯದಲ್ಲಿ ಕಡಿಮೆ ಕೂಲಿ ದುಡಿಸಿಕೊಳ್ಳುತ್ತಿರುವ ರಾಮದುರ್ಗ ನಗರದ ರಾಯಲ್ ಬೀಡಿ ಪ್ಯಾಕ್ಟರಿಯ ಮಾಲೀಕರ ವಿರುದ್ದ ಬಡ ಬೀಡಿ ಕಾರ್ಮಿಕರನ್ನು ಸಂಘಟಿಸಿ ಕನಿಷ್ಟ ಕೂಲಿ ವಿಷಯ ಮುಂದಿಟ್ಟು ಹೋರಾಟ ಪ್ರಾರಂಭವಾಯಿತು. ಇವರಿಗೆ ಬೊನಸ್ ಬದಲಾಗಿ ಒಂದು ಸೀರೆ, ರವಿಕೆ ಕೊಟ್ಟು ರೂ. 2000–3000ಕ್ಕೆ ಮಾಲೀಕರು ಕಾರ್ಮಿಕರಿಂದ ಸಹಿ ಪಡೆದುಕೊಂಡು ವಂಚಿಸುತ್ತಿದ್ದರು. ಇದರ ವಿರುದ್ಧ ಬೀಡಿ ಫ್ಯಾಕ್ಟರಿ ಮುಂದೆ ಅನಿರ್ದಿಷ್ಟ ಹೋರಾಟ ನಡೆಸಿ, ಬೀಡಿ ಕಾರ್ಮಿಕರಿಗೆ ಕಾಯ್ದೆ ಬದ್ದವಾಗಿ ಬೋನಸ್ ಹಾಗೂ ಕನಿಷ್ಟ ವೇತನ ಜಾರಿ ಮಾಡಿಸಿದ್ದು ರಾಮದುರ್ಗ ನಗರದಲ್ಲಿ ಐತಿಹಾಸಿಕ ಹೋರಾಟವಾಗಿ ಪರಿಗಣಿಸಿತು. ಅದೇ ರೀತಿ ಎಲ್ಲ ಬೀಡಿ ಕಾರ್ಮಿಕರಿಗೆ ನಿವೇಶನ ಕೊಡಿಸಲು ಬೀಡಿ ಕಾರ್ಮಿಕರ ಸಭೆ ಮಾಡಿ ಬ್ಯಾಂಕದಿಂದ ಪ್ರತಿಯೊಬ್ಬರಿಗೂ ರೂ.5000 ಸಾಲ ಕೊಡಿಸಿ, ಆ ಹಣವನ್ನು ಕೂಡಿಸಿ ಖುಲ್ಲಾ ಜಾಗೆ ಖರೀದಿಸಿ ಅವರಿಗೆ ನಿವೇಶನ ಮಾಡಿಕೊಟ್ಟಿದ್ದು ಪ್ರಶಂಸನೀಯ.

ಹುಕ್ಕೇರಿ ತಾಲೂಕಿನ ಕಣಗಲಾದಲ್ಲಿರುವ ಹಿಂದುಸ್ಥಾನ ಲೇಟಿಕ್ಸ್ ಕಂಪನಿಯಲ್ಲಿ ಕಾರ್ಮಿಕರನ್ನು ಸಂಘಟಿಸಿ, ಅತಿ ಕಡಿಮೆ ವೇತನದಲ್ಲಿ ಹಾಗೂ ಸೌಲಭ್ಯವಿಲ್ಲದೇ ದುಡಿಸಿಕೊಳ್ಳುತ್ತಿರುವ ಮಾಲೀಕರ ವಿರುದ್ಧ ಕಂಪನಿ ಮುಂದೆ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಇದರಿಂದ ಕುಪಿತರಾದ ಮಾಲೀಕರು ಪೋಲಿಸ್ ಗೂಂಡಾಗಳಿಂದ ಹಲ್ಲೆ ನಡೆಸಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆಂದು ಸುಳ್ಳು ಕೇಸ್ ಹಾಕಿ ವಿ.ಪಿ.ಕುಲಕರ್ಣಿರವರನ್ನ ಜೈಲಿಗೆ ತಳ್ಳಿದರು. ಜೈಲಿನಿಂದ ಹೊರಗೆ ಬಂದಮೇಲೆ ಮತ್ತೆ ಹೋರಾಟ ನಡೆಸಿ ಅಲ್ಲಿಯ ಕಾರ್ಮಿಕರಿಗೆ ಕನಿಷ್ಟ ವೇತನ ಕೊಡಿಸಿದ್ದು ದೊಡ್ಡ ಗೆಲುವು ಮತ್ತೆ ಎಡ ಚಳುವಳಿಗೆ ಒಂದು ಗರಿ ಬಂದಂತಾಯಿತು.

ರೈತರ ಪಂಪಸೆಟ್‌ಗೆ ಮೀಟರ್ ಅಳವಡಿಸಲು ವಿದ್ಯುತ್ ಮಂಡಳಿಯವರು ಮುಂದಾದಾಗ ತಾಲೂಕಿನ ಪಂಪಸೆಟ್ ರೈತರನ್ನ ಸೇರಿಸಿ ಸಂಘಟನೆ ಮಾಡಿ, ರೈತ ಮುಖಂಡ ಬಾಬಾಗೌಡರನ್ನ ಆಮಂತ್ರಿಸಿ ಅವರ ಮುಂದಾಳತ್ವದಲ್ಲಿ ಇಡೀ ಜಿಲ್ಲೆಯಲ್ಲಿ ಪಂಪಸೆಟ್ ರೈತರ ಸಂಘಟನೆ ಮಾಡಿ, ಅಲ್ಲಿಂದ ಪಂಪ್‌ಸೆಟ್ ರೈತರ ವಿದ್ಯುತ ಬಿಲ್ ರೂ 989 ಕೋಟಿ ಮನ್ನಾ (ಎಸ್. ಎಮ್.ಕೃಷ್ಣ ಸರ್ಕಾರದಲ್ಲಿ) ಮಾಡಿಸಿದ್ದು, ಇಡೀ ರಾಜ್ಯಕ್ಕೆ ಯಶಸ್ವಿ ಹೋರಾಟವಾಗಿತ್ತು. ಇದರ ಜೊತೆಯಲ್ಲಿ ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಫಲಾನುಭವಿಗಳನ್ನು ಸಂಘಟಿಸಿ ತಾಲೂಕಿನಲ್ಲಿ ಹೋರಾಟ ಮಾಡಿ ಅವರ ಮನೆಗಳ ವಿದ್ಯುತ್ ಬಿಲ್ ಮನ್ನಾ ಮಾಡಿಸಲಾಯಿತು. ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಗ್ರಾಮ ಪಂಚಾಯತ ನೌಕರರ, ಅಕ್ಷರ ದಾಸೋಹ ನೌಕರರ, ಅಂಗನವಾಡಿ ನೌಕರರ ಸಂಘಟನೆಗಳನ್ನು ಕಟ್ಟಿ ಅವರ ಬೇಡಿಕೆಗಳಿಗೆ, ಸ್ಥಳೀಯ ಸಮಸ್ಯೆಗಳ ಇತ್ಯರ್ಥಕ್ಕಾಗಿ ಹಲವಾರು ಹೋರಾಟಗಳನ್ನು ಮಾಡಿದ್ದಾರೆ.

ಇತ್ತೀಚೆಗೆ ಬೀದಿ ಬದಿ ವ್ಯಾಪಾರಿಗಳ (ಡಬ್ಬಾ ಅಂಗಡಿಕಾರರ) ನ್ನು ಮಳಿಗೆಗಳಿಂದ ಹೊರಹಾಕುವ ಪುರಸಭೆ ಮುಖ್ಯಾಧಿಕಾರಿಗಳ ನೀತಿ ವಿರೋಧಿಸಿ ಹೋರಾಟ ನಡೆಸಿದ್ದಾರೆ. ಈ ಅವದಿಯಲ್ಲಿ ಅವರಿಗೆ ಡಯಾಲಿಸಿಸ್ ಇದ್ದರೂ ಡಯಾಲಿಸಿಸ್ ಮಾಡಿಕೊಂಡು ಬಂದು ಹೋರಾಟದಲ್ಲಿ ಭಾಗಿಯಾಗಿದ್ದರು. ಇನ್ನೂ ಕೋರ್ಟಿನಲ್ಲಿ ಈ ಹೋರಾಟ ನಡೆದಿದೆ.

ಹೀಗೆ ಶೋಷಿತ ವರ್ಗದ ಜನರ ಪರ ಕಾಳಜಿ ವಹಿಸಿಕೊಂಡು ಜನರ ಕುರಿತಾಗಿಯೇ ಚಿಂತಿಸುತ್ತಿದ್ದರು. ಇವರ ಪ್ರತಿಯೊಂದು ಹೋರಾಟದಲ್ಲಿ ಕಾಂ. ಗೈಬು ಜೈನಖಾನ್ ಇದ್ದು ಮುನ್ನಡೆಸುತ್ತಿದ್ದರು. ಈಗಲೂ ಮುನ್ನಡೆಸುತ್ತಿದ್ದಾರೆ.

ವಿ.ಪಿ.ಕುಲಕರ್ಣಿರವರು ಧರ್ಮ, ಜಾತಿ, ಕೋಮು, ಭಾಷೆ ನೋಡಿದವರಲ್ಲ. ಇವರು ನಿಧನರಾದ ಮೇಲೆ ಸಂಪ್ರದಾಯದಂತೆ ಇವರ ಅಂತ್ಯಕ್ರಿಯೆ ಆಗಿಲ್ಲ. ವಿ.ಪಿ.ಕುಲಕರ್ಣಿರವರು ಬಿದ್ದ ಮರವಲ್ಲ ಬಿತ್ತಿದ ಬೀಜ, ಅವರು ಬಿಟ್ಟು ಹೋದ ಕೆಲಸಗಳನ್ನು ನಾವೆಲ್ಲರೂ ಕೂಡಿ ಮಾಡೋಣ ಎಡ ಚಳುವಳಿ ವಿಸ್ತರಿಸೋಣ.

ಈ ಶ್ರದ್ಧಾಂಜಲಿ ಸಭೆಯಲ್ಲಿ ಪ್ರಾಸ್ತಾವಿಕವಾಗಿ ಸಿಐಟಿಯುವಿ ನ ಜಿಲ್ಲಾ ಕಾರ್ಯದರ್ಶಿ ಜಿ.ಎಮ್.ಜೈನೆಖಾನ್ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಿಪಿಐಎಂ ಪಕ್ಷದ ರಾಜ್ಯ ಮುಖಂಡರಾದ ಜಿ.ಎನ್.ನಾಗರಾಜ ರವರು ವಿ. ಪಿ. ಕುಲಕರ್ಣಿರವರ ಹೋರಾಟದ ಹಿನ್ನೆಲೆಯನ್ನು ವಿವರಿಸಿದರು. ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ ನೌಕರರ ಸಂಘದ ರಾಜ್ಯ ಅಧ್ಯಕ್ಷರಾದ ಎಮ್.ಬಿ.ನಾಡಗೌಡ ರವರು ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆ ವಹಿಸಿ ವಿ.ಪಿ.ಕುಲಕರ್ಣಿರವರು ಪಂಚಾಯತ ನೌಕರರ ಸಂಘಟನೆಯನ್ನು ಕಟ್ಟಿ ಬೆಳೆಸಿದ ಹಿನ್ನೆಲೆಯನ್ನು ವಿವರಿಸಿದರು. ಅದೇ ರೀತಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಜಿ.ರಾಮಕೃಷ್ಣ, ರಾಜ್ಯ ಖಜಾಂಚಿ ಆರ್.ಎಸ್.ಬಸವರಾಜ, ಸಾಹಿತಿಗಳಾದ ಸರಜೂ ಕಾಟ್ಕರ್, ನಿವೃತ್ತ ಪ್ರಾಚಾರ್ಯರಾದ ಆನಂದ ಮೆನಸೆ, ಎಐಟಿಯುಸಿನ ಜಿಲ್ಲಾ ಅಧ್ಯಕ್ಷರಾದ ನಾಗೇಶ ಸಾತೇರಿ, ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಬಿ.ಎಸ್. ಸೊಪ್ಪಿನ ರವರು ಶ್ರದ್ಧಾಂಜಲಿ ಸಭೆಯಲ್ಲಿ ಕುಲಕರ್ಣಿರವರ ಜನಪರ ಹೋರಾಟಗಳ ಬಗ್ಗೆ ಮಾತನಾಡಿದರು. ಕಟ್ಟಡ ಕಾರ್ಮಿಕರ ಸಂಘದ ನಾಗಪ್ಪ ಸಂಗೊಳ್ಳಿ ಕಾರ್ಯಕ್ರಮ ನಿರೂಪಿಸಿದರು. ಮಡ್ಡೆಪ್ಪ ಭಜಂತ್ರಿ ಸ್ವಾಗತಿಸಿದರು. ಕೊನೆಯಲ್ಲಿ ಪಂಚಾಯತ ನೌಕರರ ಸಂಘದ ಜಿಲ್ಲಾ ಖಜಾಂಚಿ ವೀರಭದ್ರ ಕಂಪ್ಲಿ ವಂದನಾರ್ಪಣೆ ಮಾಡಿದರು. ಸಭೆಯಲ್ಲಿ ನೂರಾರು ಜನ ಭಾಗವಹಿಸಿದ್ದರು.

ವರದಿ: **ಗೈಬು ಜೈನೆಖಾನ**

ಕೇರಳ: ಜನರಿಗಾಗಿ ಎಲ್.ಡಿ.ಎಫ್. ಸರ್ಕಾರ



ಮನೆಗೆಲಸದವರ ಹಕ್ಕುಗಳ ರಕ್ಷಣೆಗಾಗಿ ಕೇರಳವು ಮಸೂದೆಯನ್ನು ರಚಿಸಲಿದೆ, ಇಂತಹ ನೀತಿಯನ್ನು ತರುತ್ತಿರುವ ದೇಶದ ಮೊದಲ ರಾಜ್ಯ ವಾಗಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ಪಿಣರಾಯಿ ವಿಜಯನ್ ಅವರು ಸಾರ್ವಜನಿಕ ಸಹಭಾಗಿತ್ವವನ್ನು ಖಾತ್ರಿಪಡಿಸುವ ಮೂಲಕ ಕೇರಳದ ಎಲ್ಲಾ 5,409 ಆರೋಗ್ಯ ಉಪ ಕೇಂದ್ರಗಳನ್ನು ವರ್ಧಿತ ಸೌಲಭ್ಯಗಳು ಮತ್ತು ಸೇವೆಗಳೊಂದಿಗೆ ಮೇಲ್ದರ್ಜೆಗೇರಿಸುವ ಗುರಿಯನ್ನು ಹೊಂದಿರುವ ಜನತಾ ಆರೋಗ್ಯ ಕೇಂದ್ರ ಗಳನ್ನು ರೂಪಿಸುವ ಮತ್ತೊಂದು ಪ್ರವರ್ತಕ ಆರೋಗ್ಯ ಪಾಲನೆ ಉಪಕ್ರಮವನ್ನು ಪ್ರಾರಂಭಿಸಿದರು. ಇದರಲ್ಲಿ ಸಾರ್ವಜನಿಕರ ಪಾತ್ರವನ್ನು ಖಾತ್ರಿಪಡಿಸಲಾಗುತ್ತಿದೆ. ಇದು ಸಾಮಾನ್ಯ ಜನರಿಗೆ ಉತ್ತಮ ಆರೋಗ್ಯ ಸೇವೆ ಪಡೆಯುವಂತೆ ಸಬಲೀಕರಿಸುತ್ತದೆ.





ಸ್ವೀಡಿಷ್ ಸಂಶೋಧನಾ ಸಂಸ್ಥೆ ಯುಬಿಐ ಗ್ಲೋಬಲ್ ಪ್ರಕಟಿಸಿದ ವರ್ಲ್ಡ್ ಬೆಂಚ್‌ಮಾರ್ಕ್ ಅಧ್ಯಯನದ ಪ್ರಕಾರ ಕೇರಳ ಸ್ಟಾರ್ಟ್‌ಅಪ್ ಮಿಷನ್ ವಿಶ್ವದ ಅತ್ಯುತ್ತಮ ಸಾರ್ವಜನಿಕ ವ್ಯವಹಾರಗಳ ವಿಕಸನ ಮಾಧ್ಯಮ ಆಗಿದೆ. ಕೇರಳವನ್ನು ಉದ್ಯಮಿಗಳ ತಾಣವನ್ನಾಗಿ ಮಾಡುವ ರಾಜ್ಯ ಸರ್ಕಾರದ ಬದ್ಧತೆಗೆ ಇದು ಸಾಕ್ಷಿಯಾಗಿದೆ.



ಕೇರಳ MGNREGS ಕಾರ್ಮಿಕರಿಗಾಗಿ ಕಲ್ಯಾಣ ನಿಧಿಯನ್ನು ಪ್ರಾರಂಭಿಸಿದ ಭಾರತದ ಮೊದಲ ರಾಜ್ಯ ವಾಗುತ್ತಿದೆ

ಕೇರಳ ಸರ್ಕಾರವು MGNREGS ಮತ್ತು ರಾಜ್ಯದ ನಗರ ಉದ್ಯೋಗ ಖಾತ್ರಿ ಯೋಜನೆ– ಅಯ್ಯಂಕಾಳಿ ನಗರ ಉದ್ಯೋಗ ಖಾತರಿ ಯೋಜನೆ–ಗಾಯಲ್ಲಿ ನೋಂದಾಯಿಸಲಾದ ಕಾರ್ಮಿಕರಿಗಾಗಿ ಕಲ್ಯಾಣ ನಿಧಿ ಮಂಡಳಿಯನ್ನು ದೇಶದಲ್ಲೇ ಮೊದಲ ಬಾರಿಗೆ ಪ್ರಾರಂಭಿಸಿದೆ . ಪಾಲಕ್ಕಾಡ್‌ನಲ್ಲಿ ನಡೆದ ಸಮಾರಂಭದಲ್ಲಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಯೋಜನೆಯನ್ನು ಉದ್ಘಾಟಿಸಿದರು.

ಮೇ 25, ಕೇರಳವನ್ನು ಇಂದು ಸಂಪೂರ್ಣ ಇ–ಆಡಳಿತ ರಾಜ್ಯವೆಂದು ಘೋಷಿಸಲಾಗಿದೆ. ಕೇರಳ ಮಾದರಿಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು ಆಗಲಿದೆ. ಸಾರ್ವಜನಿಕ ಸೇವಾ ವಲಯದಲ್ಲಿ ತಂತ್ರಜ್ಞಾನವನ್ನು ಸಂಯೋಜಿಸುವ ಇ–ಆಡಳಿತದ ಮೂಲಕ 'ಜನರಿಗೆ ಸರ್ಕಾರಿ ಸೇವೆಗಳು' ಎಂಬ ಎಲ್‌ಡಿಎಫ್ ಸರ್ಕಾರದ ನೀತಿಯು ನಿಜವಾಗುತ್ತಿದೆ.

ಸರ್ಕಾರಿ ಸೇವೆಗಳು ಜನರಿಗೆ ದೊರೆಯುವಂತೆ ಮಾಡಲು ಬಂದಿರುವ ಇ–ಸೇವಾ ಪೋರ್ಟಲ್ ಮೂಲಕ ಸುಮಾರು 900 ಸೇವೆಗಳು ಸಾರ್ವಜನಿಕರಿಗೆ ಲಭ್ಯವಾಗುತ್ತಿವೆ. ಇನ್ನೊಂದು ಜನಪ್ರಿಯ ಯೋಜನೆಯಾದ ಇ–ಡಿಸ್ಟ್ರಿಕ್ಟ್ ಮೂಲಕ ಸುಮಾರು 7.5 ಕೋಟಿ ಪ್ರಮಾಣ ಪತ್ರಗಳನ್ನು ಲಭ್ಯಗೊಳಿಸಲಾಗಿದೆ.

ಇ–ಆಡಳಿತ ವ್ಯವಸ್ಥೆಗಳನ್ನು ಬಲಪಡಿಸಲು ರಾಜ್ಯ ದತ್ತಾಂಶ ಕೇಂದ್ರವನ್ನು ಸ್ಥಾಪಿಸಲಾಗಿದೆ. ಕೇರಳ ಸ್ಟೇಟ್ ವೈಡ್ ಏರಿಯಾ ನೆಟ್‌ವರ್ಕ್ ಈ ಡೇಟಾ ಸೆಂಟರ್ ಅನ್ನು 14 ಜಿಲ್ಲಾ ಕೇಂದ್ರಗಳು ಮತ್ತು 152 ಬ್ಲಾಕ್ ಹೆಡ್‌ಕ್ವಾರ್ಟರ್‌ಗಳಿಗೆ ಸಂಪರ್ಕಿಸುವ ಯೋಜನೆಯನ್ನು ಅನಾವರಣಗೊಳಿಸಿದೆ. ಸರ್ಕಾರಿ ಕಚೇರಿಗಳಲ್ಲಿ ಕಡತಗಳ ಚಲನೆಯನ್ನು ತ್ವರಿತಗೊಳಿಸುವ ಉದ್ದೇಶದಿಂದ ಇ–ಕಚೇರಿ ವ್ಯವಸ್ಥೆಯನ್ನು ಪರಿಚಯಿಸಲಾಗಿದೆ.

ಎಲ್ಲಾ ಗ್ರಾಮ ಕಛೇರಿಗಳನ್ನು ಸ್ಮಾರ್ಟ್ ವಿಲೇಜ್ ಕಛೇರಿಗಳಾಗಿ ಪರಿವರ್ತಿಸುವುದು ಮತ್ತು ಡಿಜಿಟಲ್ ಮರು ಸಮೀಕ್ಷೆ ಯೋಜನೆಯನ್ನು ಪ್ರಾರಂಭಿಸುವುದು, ಇದು ಮರು ಸಮೀಕ್ಷೆ ಪ್ರಕ್ರಿಯೆಗಳನ್ನು ವೈಜ್ಞಾನಿಕ, ಪಾರದರ್ಶಕ ಮತ್ತು ತ್ವರಿತಗೊಳಿಸುತ್ತದೆ. ಸಂಯೋಜಿತ ಸ್ಥಳೀಯ ಆಡಳಿತ ನಿರ್ವಹಣಾ ವ್ಯವಸ್ಥೆಯನ್ನು ಕಳೆದ ವರ್ಷ ಕೇರಳದ ಎಲ್ಲಾ ಪಂಚಾಯತ್‌ಗಳಲ್ಲಿ ಅಳವಡಿಸಲಾಗಿದ್ದು,



ಆ ಮೂಲಕ 250 ಸೇವೆಗಳನ್ನು ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡಿದೆ.

ಕೇರಳ ವಿಶೇಷ ಡೇಟಾ ಮೂಲಸೌಕರ್ಯ ಮೂಲಕ ಕೇರಳ ಜಿಯೋ ಪೋರ್ಟಲ್–2 ಅನ್ನು ಪ್ರಾರಂಭಿಸಲಾಗಿದೆ. ಹೀಗಾಗಿ, ಕೇರಳದ 600 ಪಂಚಾಯತ್‌ಗಳು ಮತ್ತು 31 ಪುರಸಭೆಗಳಲ್ಲಿ ವಿಪತ್ತು ನಿರ್ವಹಣೆ ಮ್ಯಾಪಿಂಗ್ ಪೂರ್ಣಗೊಂಡಿದೆ. ಸೈಬರ್ ತಂತ್ರಜ್ಞಾನದ ಈ ಯುಗದಲ್ಲಿ, ನಾವು ಕೇರಳ ಪೊಲೀಸ್ ಪಡೆಯನ್ನು ಮೇಲ್ದರ್ಜೆಗೇರಿಸುತ್ತಿದ್ದೇವೆ ಮತ್ತು ಮುಂದೆ ಸಾಗುತ್ತಿದ್ದೇವೆ. ಸೈಬರ್ ಅಪರಾಧಗಳನ್ನು ತಡೆಗಟ್ಟುವಲ್ಲಿ ಮತ್ತು ಆನ್‌ಲೈನ್ ಸೇವೆಗಳನ್ನು ಒದಗಿಸುವಲ್ಲಿ ಕೇರಳ ಪೊಲೀಸರು ದೇಶಕ್ಕೆ ಮಾದರಿಯಾಗಿದ್ದಾರೆ. ಆರೋಗ್ಯ ಕ್ಷೇತ್ರದಲ್ಲೂ ಇ–ಆಡಳಿತದ ಭಾಗವಾಗಿ ನವೀಕರಣ ನಡೆಯುತ್ತಿದೆ. ಅದರ ಭಾಗವಾಗಿಯೇ ಇ–ಹೆಲ್ತ್ ಯೋಜನೆಯನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸಲಾಗುತ್ತಿದೆ. 509 ಆಸ್ಪತ್ರೆಗಳು ಅಸ್ತಿತ್ವಕ್ಕೆ ಬಂದಿವೆ. ಮೂಲಸೌಕರ್ಯ ಅಭಿವೃದ್ಧಿ, ಕಾರ್ಯಾಚರಣೆ ಮತ್ತು ಬಳಕೆಯಲ್ಲಿ ಸಮರ್ಥವಾಗಿ ತೊಡಗಿಸಿಕೊಳ್ಳುವ ಮೂಲಕ ಇ–ಆಡಳಿತ ವ್ಯವಸ್ಥೆಗಳನ್ನು ಪೂರ್ಣಗೊಳಿಸಲು ರಾಜ್ಯ ಸರ್ಕಾರವು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಇ–ಆಡಳಿತ ಸಂಪೂರ್ಣ ಪರಿಣಾಮಕಾರಿಯಾಗಲು ಎಲ್ಲರ ಸಹಕಾರ ಅತ್ಯಗತ್ಯ. ಅದನ್ನು ಮುಂದುವರಿಸೋಣ.

ಪಿಣರಾಯಿ ವಿಜಯನ್, ಮುಖ್ಯಮಂತ್ರಿ

ಬಂಗಾರದ ಕುಸ್ತಿಪಟುಗಳ ಬದುಕನ್ನು ಬೀದಿಗೆ ತಂದ ಸಂಸದ

"ಬೇಟಿ ಬಚಾವೋ ಬೇಟಿ ಪಢಾವೋ" ಎನ್ನುವ ಪ್ರಧಾನಿಗೆ ಇದು ತಿಳಿದೇ ಇಲ್ಲವೇ? ಮಹಿಳೆಯರ ಸುರಕ್ಷತೆ ಅವರ ಕರ್ತವ್ಯವಲ್ಲವೇ? ಅವರ ಪಕ್ಷವೆಂದರೆ, ಭ್ರಷ್ಟಾಚಾರಿಗಳು, ಅತ್ಯಾಚಾರಿಗಳು, ಕೊಲೆಗಡುಕರನ್ನು ರಕ್ಷಿಸುವ ಅಡಗುತಾಣವೇ?. ಘಟನಾಸ್ಥಳಕ್ಕೆ ಆರೋಪಿಯಲ್ಲದ ಸಹಾನುಭೂತಿಗಾಗಿ ಬಂದ ಕಾಂಗ್ರೆಸ್ ಮುಖಂಡ ದೀಪೇಂದರ್ ಸಿಂಗ್ ಹುಡಾ ಅವರನ್ನು ದೆಹಲಿ ಪೋಲೀಸರು ಬಂಧಿಸಿರುವುದು ಯಾವ ನ್ಯಾಯ? ಅವರದೇ ಪಕ್ಷದ ಉತ್ತರ ಪ್ರದೇಶದ ಸಂಸದನಾದ ಆರೋಪಿ ಬ್ರಿಜಭೂಷಣ ಶರಣಸಿಂಗನನ್ನು ಯಾಕೆ ಬಂಧಿಸುತ್ತಿಲ್ಲವೆಂಬುದು ಜನತೆಯ ಪ್ರಶ್ನೆಯಾಗಿದೆ.

ಅತಿಥಿ ಅಂಕಣ



ಡಾ.ಕೆ.ಷರೀಫಾ

ಕುಸ್ತಿ ಬಾಕ್ಸಿಂಗ್ ಇವೆರಡೂ ಆಟಗಳು ಮೂಲತ: ದೈಹಿಕ ಶಕ್ತಿಯನ್ನು ಅವಲಂಬಿತ ಕ್ರೀಡೆಗಳು. ಪುರುಷ ಪ್ರಧಾನವಾದ ಬಾಕ್ಸಿಂಗ್ ಮತ್ತು ಕುಸ್ತಿಯಲ್ಲಿ ಸಮಾನವಾಗಿ ಈ ಕ್ರೀಡಾಪಟುಗಳು ನಿಂತರೂ ಸಹ, ಆದರೆ ಅದೇ ಮಹಿಳೆಯರು ಇಂದು ತನ್ನ ದೇಹವನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದನ್ನು ಗೆಲ್ಲಲಾಗದೆ ರೋದಿಸುತ್ತಿರುವ ದೃಶ್ಯ ಮನ ಕಲಕುತ್ತದೆ. ಹೆಣ್ಣುಮಕ್ಕಳು ಹೀಗೆ ಹೋರಾಟಕ್ಕಿಳಿದರೂ ಸರ್ಕಾರ ಆರೋಪಿ ಬ್ರಿಜಭೂಷಣನ ವಿರುದ್ಧ ಕ್ರಮ ಕೈಕೊಳ್ಳಲು ಯಾಕೆ ಹಿಂಜರಿಯುತ್ತಿದೆ?. ಅವನ ವಿರುದ್ದ ತನಿಖೆ ನಡೆಸಲು ಯಾಕೆ ಹಿಂಜರಿಯುತ್ತಿದೆ? ಎಂಬುದು ಪ್ರಶ್ನೆ

ದೆಹಲಿಯ ಜಂತರ ಮಂತರ್ ನಲ್ಲಿ ತಿಂಗಳ ಮೇಲೆ ಧರಣಿ ಕೂತು ಕುಸ್ತಿ ಪಟು ಹೆಣ್ಣುಮಕ್ಕಳು ಸಂಸದನಾಗಿರುವ ಹಾಗೂ ಭಾರತೀಯ ಕುಸ್ತಿ ಫೆಡರೇಶನ್ (ಡಬ್ಲುಎಫ್ಐ)ನ ಅಧ್ಯಕ್ಷನಾದ ಬ್ರಿಜಭೂಷಣ ಶರಣಸಿಂಗ್ ವಿರುದ್ಧ ಕ್ರಿಡಾಪಟುಗಳು ಆರೋಪ ಮಾಡಿದರೂ ಸಹ ಇಲ್ಲಿಯವರೆಗೂ ಯಾಕೆ ಬಂಧಿಸಿಲ್ಲ ಎಂಬುದು ಜನತೆಯ ಪ್ರಶ್ನೆ. ಬ್ರಿಜ್ ಭೂಷಣ್ ಉತ್ತರ ಪ್ರದೇಶದ ಬಿಜೆಪಿ ಸಂಸದರಾಗಿದ್ದಾರೆ. ಅವರು ಆರು ಬಾರಿ ಸಂಸದರಾಗಿ ಆಯ್ಕೆಯಾಗಿದ್ದಾರೆ. ಅವರು ಒಂದು ಸ್ವಂತ ಹೆಲಿಕ್ಯಾಪ್ಟರ್ ಹೊಂದಿದ್ದಾರೆ. ಅಯೋಧ್ಯದಲ್ಲಿ ರಾಮಮಂದಿರ ವಿವಾದದಲ್ಲಿ ಬಂಧಿತರಾಗಿದ್ದರು. ಅವರ ಬಂಧನಕ್ಕೆ ಅಗ್ರಹಿಸಿ, ಅವರ ವಿರುದ್ಧ್ ಎಫ್.ಐ.ಆರ್ ದಾಖಲಿಸಬೇಕು ಮತ್ತು ತಮಗೆ ಭದ್ರತೆ ಒದಗಿಸಬೇಕೆಂದು ಈ ಕುಸ್ತಿ ಪಟುಗಳು ಎಪ್ರಿಲ್ 23,2023ರಿಂದ ಹೋರಾಟ ನಡೆಸುತ್ತಿದ್ದಾರೆ. ಈ ಕ್ರೀಡಾಪಟುಗಳು ದೂರು ನೀಡಿ ಮೂರು ತಿಂಗಳಾದರೂ ಸಹ ದೆಹಲಿ ಪೋಲೀಸಲು ಎಫ್ ಐ ಆರ್ ದಾಖಲಿಸದಿರುವ ಹಿನ್ನೆಲೆಯಲ್ಲಿ ಈಗ ಸುಪ್ರೀಂ ಕೋರ್ಟ ಮಧ್ಯಪ್ರವೇಶಿಸಿದ ನಂತರ ದೆಹಲಿ ಪೋಲಿಸರು ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಎಫ್.ಐ.ಆರ್ ದಾಖಲಿಸಲಾಗಿದೆ. ಈಗ ಬ್ರಿಜ್ ಭೂಷಣ್ ವಿರುದ್ಧ ದಿನಾಂಕ 28–4–23 ರಂದು ಎರಡು ಪ್ರಕರಣಗಳನ್ನು ದಾಖಲಿಸಲಾಗಿದೆ

ಬಿಜೆಪಿಯ ಸಂಸದ ಮತ್ತು ಬ್ರಿಜ್ ಭೂಷಣ್ ರನ್ನು ಬಂಧಿಸಿ ಕ್ರಮ ಕೈಕೊಳ್ಳುವಂತೆ ಕೋರಿ ಧರಣಿ ಕುಳಿತಿದ್ದಾರೆ. ಆ ಹೆಣ್ಣುಮಕ್ಕಳನ್ನು ಮಧ್ಯರಾತ್ರಿ ಹೆದರಿಸಲು ಬಂದ ಪೋಲೀಸರು ಬೀಸಿದ ಲಾಠಿಗಳಿಂದ ಹಲವಾರು ಕುಸ್ತಿ ಪಟುಗಳ ತಲೆಗೆ ಪೆಟ್ಟಾಗಿದೆ. ಈ ಸರ್ಕಾರ ಮತ್ತು ಅದರ ಅಂಗ ಸಂಸ್ಥೆಗಳು ದೇಶದ ಮಹಿಳೆಯರನ್ನು ಯಾವ ಸ್ಥಿತಿಗೆ ದೂಡುತ್ತಿವೆ. ಥೂ ಅಸಹ್ಯ. ಕುಡಿದು ಬಂದ ಪೋಲೀಸರು ಮಹಿಳೆಯರ ಮೇಲೆ ತೋರಿದ ದುರ್ವತನೆ ಮತ್ತು ದೌರ್ಜನ್ಯಗಳನ್ನು ಇಡೀ ದೇಶ ಖಂಡಿಸುತ್ತಿದೆ. ಕೇಂದ್ರ ಸರ್ಕಾರವೂ ಸಹ ಪರಿಸ್ತಿತಿ ಕೈಮೀರುವ ಮುನ್ನ ನ್ಯಾಯದ ಕ್ರಮ ಕೈಕೊಳ್ಳುವ ಜವಾಬ್ದಾರಿಯಿದೆ.

"ಪೋಲೀಸರು ಕುಡಿದು ಬಂದು ನಮ್ಮನ್ನು ನಿಂದಿಸಿದರು. ಇಂತಹ ದಿನ ನೋಡಲು ನಾವು ದೇಶಕ್ಕಾಗಿ ಪದಕಗಳನ್ನು ಗೆದ್ದಿದ್ದೇವೆಯೇ?" ಇದು ದೇಶಕ್ಕೆ ಬಂಗಾರದ ಪದಕ ಗೆದ್ದು ಕೊಟ್ಟು ವಿಶ್ವದ ಮುಂದೆ ಭಾರತ ಎತ್ತರಕ್ಕೆ ಎರುವಂತೆ ಮಾಡಿದ್ದ ವಿನೇಶ್ ಫೋಗಟ್‌ರವರ ಅಂಬೋಣ. ಓಲಂಪಿಕ್ ಮತ್ತು ಕಾಮನ್ವೆಲ್ತ ಗೇಮ್ನಲ್ಲಿ ಚಿನ್ನದ ಪದಕ ವಿಜೇತೆ ಫೋಗಟ್‌ರವರು ವಿಶ್ವಮಟ್ಟದಲ್ಲಿ ಹೆಸರು ಮಾಡಿ ದೇಶದ ಕೀರ್ತಿ ಪತಾಕೆಯನ್ನು ಹಾರಿಸಿದವರು. ಸುಮಾರು 23 ದಿನಗಳಿಂದಲೂ ವಿನೇಶ್ ಫೋಗಟ್, ಸಾಕ್ಷಿ ಮಲ್ಲಿಕ್, ಬಜರಂಗ ಪುನಿಯಾ ಮತ್ತು ಇನ್ನಿತರ ಕುಸ್ತಿ ಪಟುಗಳು ಜಂತರ್ ಮಂತರ್ ನಲ್ಲಿ ಹೋರಾಟ ನಡೆಸುತ್ತಿದ್ದಾರೆ. ದಿಟ್ಟತನದಿಂದ ದೊಡ್ಡ ದೊಡ್ಡ ಸವಾಲುಗಳನ್ನು ಎದುರಿಸುವ ಈ ಆಟಗಾರ್ತಿಯರು ಇಂದು ದೆಹಲಿಯ ಜಂತರ ಮಂತರ್ ನಲ್ಲಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಾರೆ. ಪ್ರಧಾನ ಮಂತ್ರಿಗಳು ರೋಡ್ ಶೋಗಳನ್ನು ಕರ್ನಾಟಕದ ಗಲ್ಲಿಗಲ್ಲಿಗಳಲ್ಲಿ ಮಾಡುವುದು ಮತ್ತು ತನ್ನ ಮನ್ ಕಿ ಬಾತ್ ಹೇಳುವ ಬದಲು ಸ್ವಲ್ಪ ಬಿಡುವು ಮಾಡಿಕೊಂಡು ಆ ಹೆಂಗೂಸುಗಳ ಮನ್ ಕಿ ಬಾತ್ ಏನೆಂದು ಕೇಳಬಾರದೇ?

"ಬೇಟಿ ಬಚಾವೋ ಬೇಟಿ ಪಢಾವೋ" ಎನ್ನುವ ಪ್ರಧಾನಿಗೆ ಇದು ತಿಳಿದೇ ಇಲ್ಲವೇ? ಮಹಿಳೆಯರ ಸುರಕ್ಷತೆ ಅವರ ಕರ್ತವ್ಯವಲ್ಲವೇ? ಅವರ ಪಕ್ಷವೆಂದರೆ, ಬ್ರಷ್ಟಾಚಾರಿಗಳು, ಅತ್ಯಾಚಾರಿಗಳು, ಕೊಲೆಗಡುಕರನ್ನು ರಕ್ಷಿಸುವ ಅಡಗುತಾಣವೇ?. ಘಟನಾಸ್ಥಳಕ್ಕೆ ಆರೋಪಿಯಲ್ಲದ ಸಹಾನುಭೂತಿಗಾಗಿ ಬಂದ ಕಾಂಗ್ರೆಸ್ ಮುಖಂಡ ದೀಪೇಂದರ್ ಸಿಂಗ್ ಹುಡಾ ಅವರನ್ನು ದೆಹಲಿ ಪೋಲೀಸರು ಬಂಧಿಸಿರುವುದು ಯಾವ ನ್ಯಾಯ? ಅವರದೇ ಪಕ್ಷದ ಉತ್ತರ ಪ್ರದೇಶದ ಸಂಸದನಾದ ಆರೋಪಿ ಬ್ರಿಜಭೂಷಣ ಶರಣಸಿಂಗನನ್ನು ಯಾಕೆ ಬಂಧಿಸುತ್ತಿಲ್ಲವೆಂಬುದು ಜನತೆಯ ಪ್ರಶ್ನೆಯಾಗಿದೆ.

ಇದು ಕ್ರೀಡಾಪಟುಗಳ ಘನತೆಯ ಪ್ರಶ್ನೆಯಾಗಿದೆ. ಆರೋಪಿ ಸ್ವತಂತ್ರವಾಗಿ ತಿರುಗುತ್ತಿದ್ದಾನೆ. ಆದರೆ ಈ ಮಕ್ಕಳು ನ್ಯಾಯಕ್ಕಾಗಿ ಬೀದಿಯಲ್ಲಿ ಪೋಲೀಸರ ಹೊಡೆತ ತಿನ್ನುತ್ತಾರೆಂದರೆ ಇದರ ಅರ್ಥವೇನು? ಈ ಹೆಣ್ಣುಮಕ್ಕಳು ಬಂಗಾರದ ಪದಕಗಳನ್ನು ಗೆದ್ದು ತಂದಾಗ ಅವರನ್ನು ಗೌರವಿಸಿ ಮನೆಗೆ ಕರೆದು ಅವರೊಂದಿಗೆ ಟೀ ಕುಡಿದ ಪ್ರಧಾನಿಗೆ ಆ ಮಕ್ಕಳು ಈಗ ಸಂಕಟದಲ್ಲಿದ್ದಾರೆ ಅವರ ನೆರವಿಗೆ ಹೋಗಬೇಕೆಂಬ ಅರಿವಿಲ್ಲವೇ? ಕುಸ್ತಿ ಬಾಕ್ಷಿಂಗ್ ಇವೆರಡೂ ಆಟಗಳು ಮೂಲತ: ದೈಹಿಕ ಶಕ್ತಿಯನ್ನು ಅವಲಂಬಿತ ಕ್ರೀಡೆಗಳು. ಪುರುಷ ಪ್ರಧಾನವಾದ ಬಾಕ್ಸಿಂಗ್ ಮತ್ತು ಕುಸ್ತಿಯಲ್ಲಿ ಸಮಾನವಾಗಿ ಈ ಕ್ರೀಡಾಪಟುಗಳು ನಿಂತರೂ ಸಹ, ಆದರೆ ಅದೇ ಮಹಿಳೆಯರು ಇಂದು ತನ್ನ ದೇಹವನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದನ್ನು ಗೆಲ್ಲಲಾಗದೆ ರೋದಿಸುತ್ತಿರುವ ದೃಶ್ಯ ಮನ ಕಲಕುತ್ತದೆ. ರಾಜಕೀಯ ನಡೆಸುವ ಪ್ರಭುತ್ವಕ್ಕೊಂದಿಷ್ಟು ತಾಯಿ ಕರಳೂ ಸಹ ಇರಬೇಕಾಗುತ್ತದೆ. ಹೆಣ್ಣುಮಕ್ಕಳು ಹೀಗೆ ಹೋರಾಟಕ್ಕಿಳಿದರೂ ಸರ್ಕಾರ ಆರೋಪಿ ಬ್ರಿಜಭೂಷಣನ ವಿರುದ್ಧ ಕ್ರಮ ಕೈಕೊಳ್ಳಲು ಯಾಕೆ ಹಿಂಜರಿಯುತ್ತಿದೆ?. ಅವನ ವಿರುದ್ದ ತನಿಖೆ ನಡೆಸಲು ಯಾಕೆ ಹಿಂಜರಿಯುತ್ತಿದೆ? ಎಂಬುದು ಪ್ರಶ್ನೆ

ಇವರ ಬೆಂಬಲಕ್ಕೆ ಇಡೀ ದೇಶವೇ ನಿಂತಿದೆ. ಜೆ.ಎನ್.ಯು ವಿದ್ಯಾರ್ಥಿಗಳೂ, ವಕೀಲರು, ಕುಸ್ತಿ ಪಟುಗಳ ಬೆಂಬಲಕ್ಕೆ ನಿಂತಿದ್ದಾರೆ, ರೈತರೂ ಬೆಂಬಲ ಸೂಚಿಸಿದ್ದಾರೆ. ಮೊದಲು "ಹೀಗೆ ಪ್ರತಿಭಟಿಸುವುದು ಅಶಿಸ್ತಿನ ವರ್ತನೆ" ಎಂದು ಹೇಳಿದ್ದ ಹಿರಿಯ ಅಥ್ಲೆಟ್ ಹಾಗೂ ಭಾರತೀಯ ಒಲಂಪಿಕ್ ಅಸೋಸಿಯೇಷನ್ ಅಧ್ಯಕ್ಕೆ ಪಿ.ಟಿ.ಉಷಾ ಕೂಡ ಜಂತರ ಮಂತರ್ ಗೆ ಹೋಗಿ ತಮ್ಮ ಬೆಂಬಲ ಸೂಚಿಸಿದ್ದಾರೆ. "ನಾನು ಮೊದಲು ಕ್ರೀಡಾಪಟು ಆ ಬಳಿಕ ಆಡಳಿತಾಧಿಕಾರಿ" ಎಂದು ಹೇಳುವ ಮೂಲಕ ಕ್ರೀಡಾಪಟುಗಳಿಗೆ ತಮ್ಮ ಬೆಂಬಲವನ್ನು ಸೂಚಿಸಿದ್ದಾರೆ. ಟೆನ್ನಿಸ್ ಆಟಗಾರ್ತಿಯಾದ ಸಾನಿಯಾ ಮಿರ್ಜಾರವರು ಕೂಡ ಈ ಹೋರಾಟಕ್ಕೆ ಬೆಂಬಲ ಸೂಚಿಸಿದ್ದಾರೆ. ಇದು ಈ ದೇಶದ ಗೌರವಾನ್ವಿತ ಮಹಿಳೆಯರ ಘನತೆಯ ಪ್ರಶ್ನೆಯಾಗಿದೆ. ಬ್ರಿಜ್ ಭೂಷಣ್ ತನ್ನ ವಿರುದ್ಧ ಆರೋಪ ಮಾಡುವುದಾಗಿ ಒಬ್ಬರಾದರೂ ಮುಂದೆ ಬಂದರೆ ತಾನೂ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿದ್ದ. ಈಗ ಏಳು ಮಕ್ಕಳು ಆರೋಪ ಮಾಡಿದ್ದಾರೆ. ಅವನು ಹೇಳಿದಂತೆ ಈಗ ಆತ್ಮಹತ್ಯೆ ಮಾಡಿಕೊಂಡನೇ?



ಬ್ರಿಜ್‌ಭೂಷಣ ಶರಣಸಿಂಗ್ ವಿರುದ್ಧ ಲೈಂಗಿಕ ದೌರ್ಜನ್ಯ ಕುರಿತು ಮನವಿ ಮಾಡಿದ ಏಳು ಜನ ಲೈಂಗಿಕ ಶೋಷಿತ ಮಹಿಳೆಯರಲ್ಲಿ ಒಬ್ಬ ಅಪ್ರಾಪ್ತ ಹುಡುಗಿಯೂ ಇದ್ದಾಳೆ. ಜಂತರ ಮಂತರ ಹೋರಾಟದ ಸ್ಥಳದಲ್ಲಿ ಮಧ್ಯರಾತ್ರಿ ಪೋಲೀಸರು ನಡೆಸಿದ ದೌರ್ಜನ್ಯದ ಬಗ್ಗೆ ವೀನೇಶಾ ಫೋಗಟ್ ಹೇಳುತ್ತಾರೆ. "ನಿಜಕ್ಕೂ ಪೋಲಿಸರ ವರ್ತನೆಯಿಂದ ನಮಗೆ ಆಘಾತವಾಗಿದೆ. ಏಕೆಂದರೆ ನಾವು ಅಪರಾಧಿಗಳಲ್ಲ. ನಾವು ಅಂತಹ ಅಗೌರವಕ್ಕೆ ಅರ್ಹರಲ್ಲ" ಎನ್ನುತ್ತಾ ಪುರುಷ ಪೋಲೀಸರು ನಮ್ಮನ್ನು ಹೇಗೆ ಹಿಡಿದು ತಳ್ಳಾಡುತ್ತಾರೆ. ನಾವೇನು ಅಪರಾಧಿಗಳೇ?. ಆರೋಪಿಯನ್ನು ಆರಾಮಾಗಿ ಮನೆಯಲ್ಲಿರಲು ಬಿಟ್ಟು ನಮಗೆ ಈ ಚಿತ್ರ ಹಿಂಸೆ ಏಕೆ? ಪೋಲಿಸರ ಲಾಠಿ ಏಟಿನಿಂದ ನನ್ನ ತಮ್ಮನ ತಲೆ ಒಡೆದಿದೆ. ಕೊಲ್ಲುವದಾದರೆ ನಮ್ಮನ್ನು ಕೊಂದು ಹಾಕಿ" ಎಂದು ಆ ಮಗಳು ಅಳುತ್ತಿದ್ದಾರೆ. ಅವರ ರೋದನ ಎಲ್ಲರೂ ಸಾಮಾಜಿಕ ಜಾಲತಾಣಗಳಲ್ಲಿ ನೋಡಿದ್ದಾರೆ.

ಇದು ಲೋಕತಂತ್ರದ ಹತ್ಯೆಯಾಗಿದೆ ಎಂದು ವಕೀಲರು ಹೇಳುತ್ತಿದ್ದಾರೆ. "ಸಾರೆ ಎಂ.ಪಿ ಗುಂಡೆ ಹೈ" ಎನ್ನುತ್ತಾರೆ. ಪೋಲಿಸರಿಗೆ ಗೃಹಮಂತ್ರಿಯ ಭಯವಿರುವ ಕಾರಣ ಅವರು ನಿಜವಾದ ತನಿಖೆ ನಡೆಸಲು ಬಿಡುವುದಿಲ್ಲ ಎನ್ನುತ್ತಾರೆ. ಭಾರತದಲ್ಲಿಯ ಎಲ್ಲ ಸರ್ಕಾರಿ ಆಡಳಿತಗಳು ಒತ್ತಡದಲ್ಲಿ ಬದುಕುತ್ತಿವೆ. ಇಂತಹ ಗಂಭೀರ ಮಹಿಳಾ ವಿಷಯದ ಕುರಿತು ಪ್ರಭುತ್ವದ ಮೌನವು ಭವಿಷ್ಯದಲ್ಲಿ ಬಹಳ ದೊಡ್ಡ ಬೆಲೆ ತೆರಬೇಕಾಗಬಹುದು. ಆಳುವ ಈಗಿನ ಕೇಂದ್ರ ಸರ್ಕಾರವೆಂದರೆ, ಭ್ರಷ್ಟಾಚಾರಿಗಳು, ಅತ್ಯಾಚಾರಿಗಳು ಮತ್ತು ಕೊಲೆಗಡುಕರನ್ನು ರಕ್ಷಿಸುವ ತಾಣಗಳಾಗಿ ಬದಲಾಗುತ್ತಿರುವುದು ಶೋಚನೀಯವಾಗಿದೆ. ಈ ಧರಣಿಯು ಜಂತರ ಮಂತರದಿಂದ ಬ್ರಿಜ್ ಭೂಷಣನ ಮನೆಯ ಮುಂದೆಯೇ ಹೋರಾಟ ಆರಂಭವಾಗಿತ್ತು. ಆದರೆ ಅದನ್ನು ಪೋಲೀಸರು ತಡೆದಿದ್ದಾರೆ. ಈಗಲಾದರೂ ಗೃಹಮಂತ್ರಿಗಳು ಅರೋಪಿಗಳನ್ನು ರಕ್ಷಿಸಲು ಮುಂದಾಗಬಾರದು. ನಮಗೆ ನಮ್ಮ ಸಂವಿಧಾನ ಮುಖ್ಯವಾಗುತ್ತದೆ. ಸಂವಿಧಾನ ಪರವಾದ ನಡೆ ಸರ್ಕಾರ ತೋರಿಸದಿದ್ದರೆ, ಜನರು ತಿರುಗಿ ಬೀಳುವ ದಿನಗಳು ದೂರವಿಲ್ಲ. ಈಗಲಾದರೂ ಮೋದಿ ಬಾಯಿ ಬಿಡಬಹುದೆ?

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ:
080–22234369
ಫೋನ್:
9448578021, 9483966467

ಪ್ರಜಾತಾಂತ್ರಿಕ ಒಕ್ಕೂಟತತ್ವದ ಮೇಲೆ ನಗ್ನ ಆಕ್ರಮಣ ಕೇಂದ್ರದ ಸುಗ್ರೀವಾಜ್ಞೆ ಸೋಲಿಸೋಣ

ಪ್ರಕಾಶ್ ಕಾರತ್

ತನ್ನ ವ್ಯಾಪ್ತಿಯ ಆಡಳಿತಾತ್ಮಕ ಅಧಿಕಾರಿಗಳ ಮೇಲಿನ ದೆಹಲಿ ಸರಕಾರದ ನಿಯಂತ್ರಣಾಧಿಕಾರಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ನೀಡಿದ್ದ ಮಹತ್ವದ ನಿರ್ಧಾರವನ್ನು ನಿಷ್ಕ್ರಿಯಗೊಳಿಸುವ ಸುಗ್ರೀವಾಜ್ಞೆಯೊಂದನ್ನು ನರೇಂದ್ರ ಮೋದಿ ಸರಕಾರ ಹೊರಡಿಸಿದೆ. ಇದೊಂದು ಅಪ್ಪಟ ಸರ್ವಾಧಿಕಾರಿ ನಡೆಯಾಗಿದೆ. ಈ ಸುಗ್ರೀವಾಜ್ಞೆ, ದೆಹಲಿಯ ಅಧಿಕಾರಿಗಳ ನೇಮಕ ಮತ್ತು ವರ್ಗಾವಣೆಯ ಅಧಿಕಾರವನ್ನು ಉಪ ರಾಜ್ಯಪಾಲರಿಗೆ (ಲೆಫ್ಟಿನೆಂಟ್ ಗವರ್ನರ್), ಅಂದರೆ ಆ ಮೂಲಕ ಕೇಂದ್ರ ಸರ್ಕಾರಕ್ಕೆ ಮರಳಿಸುತ್ತದೆ.

ದೆಹಲಿಯಲ್ಲಿ ಅಧಿಕಾರಿಗಳ ನೇಮಕ ಮತ್ತು ವರ್ಗಾವಣೆಗೆ ಶಿಫಾರಸು ಮಾಡುವ ರಾಷ್ಟ್ರ ರಾಜಧಾನಿ ನಾಗರಿಕ ಸೇವಾ ಪ್ರಾಧಿಕಾರವನ್ನು ರಚಿಸುವ ಮೂಲಕ ಈ ಉಲ್ಲಂಘನೆ ಮಾಡಲಾಗಿದೆ. ಈ ಪ್ರಾಧಿಕಾರದಲ್ಲಿ ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿ ಇರುತ್ತಾರೆ. ಬಹುಮತದಿಂದ ತೀರ್ಮಾನವನ್ನು ಕೈಗೊಳ್ಳುವ ಕಾರಣ, ಕೇಂದ್ರ ಸರ್ಕಾರ ನೇಮಿಸುವ ಇಬ್ಬರು ಅಧಿಕಾರಿಗಳು ಚುನಾಯಿತ ಮುಖ್ಯಮಂತ್ರಿಯ ನಿರ್ಧಾರವನ್ನು ಬುಡಮೇಲು ಮಾಡಬಹುದಾಗಿದೆ. ಅಲ್ಲದೆ, ಲೆಫ್ಟಿನೆಂಟ್ ಗವರ್ನರ್ ಮತ್ತು ಪ್ರಾಧಿಕಾರದ ನಡುವೆ ಭಿನ್ನಾಭಿಪ್ರಾಯವೇನಾದರೂ ಉಂಟಾದರೆ ಉಪ ರಾಜ್ಯಪಾಲರ ನಿರ್ಧಾರವೇ ಅಂತಿಮವಾಗಿರುತ್ತದೆ.

ಈ ಸುಗ್ರೀವಾಜ್ಞೆ ಮೂಲಕ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನ ತೀರ್ಪನ್ನು ಧಿಕ್ಕರಿಸಿದೆ ಹಾಗೂ ಸಂವಿಧಾನವನ್ನು ವ್ಯಾಖ್ಯಾನಿಸುವ ಕೋರ್ಟ್‌ನ ಹಕ್ಕಿಗೆ ಸವಾಲು ಹಾಕಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಸಂವಿಧಾನ ಪೀಠವು ದೆಹಲಿಯಲ್ಲಿ ಚುನಾಯಿತ ಸರಕಾರದ ಹಕ್ಕುಗಳು ಮತ್ತು ಅಧಿಕಾರಿಗಳ ಕುರಿತು ಸರ್ವಾನುಮತದ ಹಾಗೂ ವಿವೇಕಯುತ ತೀರ್ಪನ್ನು ನೀಡಿತ್ತು.

'ಪ್ರಜಾಪ್ರಭುತ್ವ ಮತ್ತು ಒಕ್ಕೂಟತತ್ವವು ನಮ್ಮ ಸಂವಿಧಾನದ ಅಗತ್ಯ ಲಕ್ಷಣಗಳಾಗಿವೆ ಮತ್ತು ಮೂಲ ಸ್ವರೂಪದ ಭಾಗವಾಗಿದೆ' ಎಂದು ತೀರ್ಪು ಸುಸ್ಪಷ್ಟವಾಗಿ ಹೇಳಿದೆ. 'ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಒಂದು ಸರಕಾರಕ್ಕೆ ಅದರ ವ್ಯಾಪ್ತಿಯಲ್ಲಿ ನೇಮಕಗೊಂಡ ಅಧಿಕಾರಿಗಳ ನಿಯಂತ್ರಣದ ಅಧಿಕಾರ ಒದಗಿಸದಿದ್ದರೆ, ಸಾಮೂಹಿಕ ಹೊಣೆಗಾರಿಕೆಯ ತ್ರಿವಳಿ ಸರಪಳಿಯು ವ್ಯರ್ಥವಾಗುತ್ತದೆ' ಎಂದೂ ಕೋರ್ಟ್ ಹೇಳಿದೆ.

ದೆಹಲಿಯು ರಾಷ್ಟ್ರ ರಾಜಧಾನಿಯಾಗಿರುವುದರಿಂದ ಅದರ ಆಡಳಿತಾತ್ಮಕ ಸೇವೆಗಳು ತನ್ನ ವ್ಯಾಪ್ತಿಯಲ್ಲಿರಬೇಕೆಂಬ ಕೇಂದ್ರದ ವಾದವನ್ನು ತಿರಸ್ಕರಿಸಿರುವ ಸುಪ್ರೀಂ ಕೋರ್ಟ್ ಪೀಠದ ತೀರ್ಪು ಸಾರ್ವಜನಿಕ ಸುವ್ಯವಸ್ಥೆ, ಪೊಲೀಸ್ ಮತ್ತು ಭೂಮಿಗೆ ಸಂಬಂಧಿಸಿದ ವಿಚಾರಗಳನ್ನು ಹೊರತುಪಡಿಸಿ ಉಳಿದ ಎಲ್ಲ ಕ್ಷೇತ್ರಗಳ ಅಧಿಕಾರಿಗಳ ನಿರ್ವಹಣೆಯ ಅಧಿಕಾರವನ್ನು ಚುನಾಯಿತ ಸರಕಾರಕ್ಕೆ ನೀಡಿದೆ.



ಜನತಾಂತ್ರಿಕ ಪ್ರಾತಿನಿಧಿಕ ಸರಕಾರದ ತತ್ವ, ಆಡಳಿತಾತ್ಮಕ ಅಧಿಕಾರಿಗಳು ಚುನಾಯಿತ ಸರಕಾರಕ್ಕೆ ಉತ್ತರದಾಯಿ ಆಗಿರಬೇಕು ಹಾಗೂ ಫೆಡರಲ್ (ಒಕ್ಕೂಟತತ್ವ) ತತ್ವಕ್ಕೆ ಬದ್ಧವಾಗಿರಬೇಕೆಂಬ ತತ್ವವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಈ ಎಲ್ಲವನ್ನೂ ಕೇಂದ್ರ ಸರಕಾರದ ಸುಗ್ರೀವಾಜ್ಞೆಯ ಸರ್ವಾಧಿಕಾರಿ ಹೆಜ್ಜೆ ತಿರಸ್ಕರಿಸಿದೆ.

ಕೋರ್ಟ್‌ನ ಈ ಉದ್ದೇಶಪೂರ್ವಕ ಧಿಕ್ಕಾರದ ಮೂಲಕ ಮೋದಿ ಸರಕಾರವು ಪ್ರಜಾಪ್ರಭುತ್ವ ಮತ್ತು ಒಕ್ಕೂಟತತ್ವಕ್ಕೆ ತನ್ನ ಅಗೌರವವನ್ನು ಘೋಷಿಸಿದೆ. ತನ್ನ ಒಂಬತ್ತು ವರ್ಷಗಳ ಅಧಿಕಾರಾವಧಿಯುದ್ದಕ್ಕೂ ಮೋದಿ ಸರಕಾರ ಬಿಜೆಪಿಯೇತರ ರಾಜ್ಯ ಸರಕಾರಗಳ ಹಕ್ಕುಗಳ ಮೇಲೆ ಆಕ್ರಮಣ ನಡೆಸುತ್ತಾ ಬಂದಿದೆ ಹಾಗೂ ಫೆಡರಲ್ ತತ್ವವನ್ನು ಉಲ್ಲಂಘಿಸಲು ರಾಜ್ಯಪಾಲರನ್ನು ಬಳಸಿಕೊಳ್ಳುತ್ತಿದೆ. ಈ ಪ್ರವೃತ್ತಿಯು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ವಿಸರ್ಜಿಸಿ ಅದನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸುವ ಮೂಲಕ ಸಾಂವಿಧಾನಿಕ ಸ್ವರೂಪದ ಮೇಲಿನ ಆಕ್ರಮಣದ ಗಂಭೀರ ರೂಪ ತಳೆದಿದೆ. ಚುನಾಯಿತ ಸರಕಾರದ ಅಧಿಕಾರ ಕಿತ್ತುಕೊಳ್ಳುವುದನ್ನು ಕಾನೂನುಬದ್ಧಗೊಳಿಸುವ ಮೂಲಕ ಈ ಆಧ್ಯಾದೇಶವು ಪ್ರಜಾತಾಂತ್ರಿಕ ಫೆಡರಲಿಸಂ ಮೇಲಿನ ಆಕ್ರಮಣವನ್ನು ಹೊಸ ಹಂತಕ್ಕೆ ತೆಗೆದುಕೊಂಡು ಹೋಗಿದೆ.

ಸಂವಿಧಾನದ ರಕ್ಷಕನಾಗಿ ಸುಪ್ರೀಂಕೋರ್ಟ್ ಈ ಕರಾಳ ಕ್ರಮವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಬೇಕು. ರಾಜಕೀಯ ಮಟ್ಟದಲ್ಲಿ, ಸಂಸತ್ತಿನಲ್ಲಿ ಸರಕಾರ ಇದನ್ನು ಕಾನೂನು ಮಾಡುವ ಸಂದರ್ಭದಲ್ಲಿ ಪ್ರತಿಪಕ್ಷಗಳು ಒಟ್ಟಾಗಿ ಈ ಆಧ್ಯಾದೇಶವನ್ನು ಒಗ್ಗಟ್ಟಿನಿಂದ ವಿರೋಧಿಸಬೇಕು. ಕಾಂಗ್ರೆಸ್ ಪಕ್ಷ ಈ ವಿಚಾರದಲ್ಲಿ ನಿಲುವು ತಳೆಯುವಲ್ಲಿನ ಹೊಯ್ದಾಟವನ್ನು ನಿಲ್ಲಿಸಬೇಕು. ಅರವಿಂದ ಕೇಜ್ರಿವಾಲ್ ಮತ್ತು ಆಪ್ ಕುರಿತ ಧೋರಣೆಯು ಈ ವಿಚಾರದಲ್ಲಿ ನಿಲುವು ತಳೆಯಲು ಅಡ್ಡಿಯಾಗಬಾರದು. ಇದು ಯಾವುದೇ ಒಬ್ಬ ನಾಯಕನ ಅಥವಾ ಒಂದು ಪಕ್ಷದ ಪ್ರಶ್ನೆಯಲ್ಲ; ಇದು ಪ್ರಜಾಪ್ರಭುತ್ವ ಮತ್ತು ಒಕ್ಕೂಟತತ್ವದ ಮೇಲಿನ ಮೂಲಭೂತ ಆಕ್ರಮಣದ ವಿಚಾರವಾಗಿದೆ.

ಸುಗ್ರೀವಾಜ್ಞೆಯನ್ನು ಪ್ರತಿಪಕ್ಷಗಳು ಎಷ್ಟು ಒಗ್ಗಟ್ಟಿನಿಂದ ವಿರೋಧಿಸುತ್ತವೆ ಎನ್ನುವುದು ಮುಂದೆ ಬಿಜೆಪಿ ವಿರುದ್ಧ ನಡೆಸಬೇಕಿರುವ ದೊಡ್ಡ ಸಮರಕ್ಕೆ ರೂಪಿಸಬೇಕಾದ ಒಗ್ಗಟ್ಟಿನ ಮೇಲೆ ಪರಿಣಾಮ ಬೀರಲಿದೆ.

ಅನು: **ವಿಶ್ವ**

ವೈವಿಧ್ಯತೆಯಲ್ಲಿ ಏಕತೆ ಸಾರುವ ಭವ್ಯ ಭಾರತದ ಪರಂಪರೆ ಇನ್ನಷ್ಟೂ ಆಳವಾಗಿ ಬೇರೂರಬೇಕು



ವಿವಿಧ ಜಾತಿ ಧರ್ಮ ಭಾಷೆಗಳ ಸಮ್ಮಿಶ್ರಣದಿಂದ ಭಾರತದ ಶ್ರೀಮಂತ ಪರಂಪರೆ ರೂಪುಗೊಂಡಿದೆ. ಅವುಗಳನ್ನು ಉಳಿಸಿ ಬೆಳೆಸುವಲ್ಲಿ ಪ್ರತಿಯೊಬ್ಬ ಸತ್ಪ್ರಜೆಗಳು ಶಕ್ತಿ ಮೀರಿ ಪ್ರಯತ್ನಿಸಬೇಕಾಗಿದೆ. ಆ ಮೂಲಕ ವೈವಿಧ್ಯತೆಯಲ್ಲಿ ಏಕತೆ ಸಾರುವ ಭವ್ಯ ಭಾರತದ ಪರಂಪರೆಯನ್ನು ಇನ್ನಷ್ಟೂ ಆಳವಾಗಿ ಬೇರೂರಬೇಕು ಎಂದು ಸಂತ ಅಲೋಶಿಯಸ್ ಹೈಸ್ಕೂಲ್ ನ ಮುಖ್ಯೋಪಾಧ್ಯಾಯರಾದ ರೆ. ಫಾ. ಜೆರಾಲ್ಡ್ ಫುರ್ಟಾಡೋರವರು ಅಭಿಪ್ರಾಯ ಪಟ್ಟರು.

ಚಿಣ್ಣರ ಚಾವಡಿ ಮಂಗಳೂರು ಇದರ ಆಶ್ರಯದಲ್ಲಿ ಕಳೆದ 3 ದಿನಗಳಿಂದ ನಗರದ ಸಂತ ಅಲೋಶಿಯಸ್ ಹೈಸ್ಕೂಲ್ ನ ಸಭಾಂಗಣದಲ್ಲಿ ಜರುಗಿದ ಚಿಣ್ಣರ ಕಲರವ – 2023 ಮಕ್ಕಳ ಸಂತಸ ಕಲಿಕಾ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತಾ ಅವರು, ಈ ಮಾತುಗಳನ್ನು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಂತ ಮದರ್ ತೆರೇಸಾ ವಿಚಾರ ವೇದಿಕೆಯ ಅಧ್ಯಕ್ಷರಾದ ರೊಯ್ ಕ್ಯಾಸ್ಟಲಿನೋರವರು ಮಾತನಾಡುತ್ತಾ ಎಳೆಯ ಪ್ರಾಯದ ಮಕ್ಕಳಿಗೆ ದೇಶದ ಸಂವಿಧಾನದ ಪರಿಚಯ ಮಾಡುವ ಮೂಲಕ ಭಾರತದ ಅಂತಃಸತ್ವವನ್ನು ಅರಿಯಬೇಕಾಗಿದೆ. ಕೂಡಿ ಬಾಳುವ ಸಂಸ್ಕೃತಿಯನ್ನು ಮೈಗೂಡಿಸಿ, ಪ್ರೀತಿ ಹಂಚುವ ಕಾರ್ಯ ನಿರಂತರವಾಗಿ ಸಾಗಬೇಕು ಎಂದು ಹೇಳಿದರು.

ಜಿಲ್ಲಾ ಯುವಜನ ಮುಖಂಡರಾದ ಸಂತೋಷ್ ಬಜಾಲ್, ಯುವ ವಕೀಲರಾದ ಮನೋಜ್ ವಾಮಂಜೂರುರವರು ಮಾತನಾಡಿ, ಮಕ್ಕಳಲ್ಲಿ ಅದೆಷ್ಟೋ ಪ್ರತಿಭೆಗಳು ಹುದುಗಿದ್ದು, ಅವುಗಳನ್ನು ಗುರುತಿಸಿ ಪ್ರೋತ್ಸಾಹ ನೀಡುವಲ್ಲಿ ಇಂತಹ ಮಕ್ಕಳ ಕಾರ್ಯಾಗಾರಗಳು ಮಹತ್ವದ ಪಾತ್ರವನ್ನು ವಹಿಸುತ್ತದೆ. ಭವಿಷ್ಯದ ಹರಿಕಾರರಾದ ಇಂದಿನ ಮಕ್ಕಳು ಸರಿಯಾದ ದಾರಿಯಲ್ಲಿ ಮುನ್ನಡೆಯಬೇಕಾದರೆ ಪುರೋಗಾಮಿ ವಿಚಾರಗಳ ಮೂಲಕ ಮಾತ್ರ ಸಾದ್ಯ ಎಂದು ಹೇಳಿದರು.

ಚಿಣ್ಣರ ಚಾವಡಿ ಮಂಗಳೂರು ಇದರ ಸಂಚಾಲಕರಾದ ಸುನಿಲ್ ಕುಮಾರ್ ಬಜಾಲ್ ರವರು ಕಾರ್ಯಾಗಾರದ ಮಹತ್ವವನ್ನು ಪ್ರಾಸ್ತಾವಿಕ ಮಾತುಗಳ ಮೂಲಕ ಹೇಳಿದರು.

ವೇದಿಕೆಯಲ್ಲಿ ನಿವೃತ್ತ ಪ್ರಾಂಶುಪಾಲರಾದ ಡಾ. ಕಾರ್ಮಿಲಿಟಾ ಡಿಸೋಜ, ಸಾಮಾಜಿಕ ಚಿಂತಕರಾದ ಫ್ಲೇವಿ ಕ್ರಾಸ್ತಾ, ಪ್ರಮೀಳಾ ದೇವಾಡಿಗ, ಕ್ವೀನಿ ಪರ್ಸಿ ಆನಂದ್, ಶಿಬಿರ ನಿರ್ದೇಶಕರಾದ ಪ್ರವೀಣ್ ವಿಸ್ಮಯರವರು ಉಪಸ್ಥಿತರಿದ್ದರು. ಸಭೆಯ ಬಳಿಕ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು.

ಪದವಿ ಪೂರ್ವವರೆಗಿನ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲಿ

ಶಿಕ್ಷಣದ ಖಾಸಗೀಕರಣವು ವಿದ್ಯಾರ್ಥಿಗಳ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಿದೆ. ಈ ಸಮಾಜದಲ್ಲಿ ಬಡವರ ಮಕ್ಕಳೂ ಶಿಕ್ಷಣ ಪಡೆಯುತ್ತಿದ್ದಾರೆ. ಅವರ ಜೀವನ ಕ್ರಮಗಳು, ಬದುಕು, ಕಷ್ಟ ಸುಖಗಳು ಶ್ರೀಮಂತ ವಿದ್ಯಾರ್ಥಿಗಳಿಗೆ ಅದರ ಅರಿವೇ ಇಲ್ಲದ ರೀತಿಯಲ್ಲಿದ್ದು ಬಡವರ ಮತ್ತು ಶ್ರೀಮಂತರ ನಡುವಿನ ಅಂತರ, ತಾರತಮ್ಯಗಳು ಹೆಚ್ಚಾಗಲು ಕಾರಣವಾಗಿದೆ. ಮಕ್ಕಳಲ್ಲಿ ಸಹೋದರತೆ, ಪ್ರೀತಿ, ವಾತ್ಸಲ್ಯ, ಸೌಹಾರ್ದತೆಗಳೆಲ್ಲವೂ ಜೀವಂತವಾಗಿರಬೇಕಾದರೆ ಸರಕಾರ ಪದವಿ ಪೂರ್ವವರೆಗಿನ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಬೇಕೆಂದು ಕಿಟೆಲ್ ಮೆಮೋರಿಯಲ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ವಿಠಲ್ ಎ. ಅವರು ಮೇ 20, 2023 ಪಕ್ಕಲಡ್ಕ ಯುವಕ ಮಂಡಲ(ರಿ), ಡಿವೈಎಫ್‌ವೈ ಪಕ್ಕಲಡ್ಕ ಘಟಕದ ನೇತೃತ್ವದಲ್ಲಿ ಒಂದು ವಾರಗಳ ಕಾಲ ನಡೆದ ಆಟ ಪಾಠ ಮಕ್ಕಳ ಸಂತಸ ಕಲಿಕಾ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.

ಸರಕಾರ ಸರಿಯಾಗಿ ಮನಸ್ಸು ಮಾಡಿದರೆ ಸರಕಾರಿ ಶಾಲೆಗಳನ್ನು ಮಾದರಿಯಾಗಿ ನಡೆಸುವುದು ಬಹಳ ಕಷ್ಟದ ಕೆಲಸವೇನಲ್ಲ. ಈ ಹಿಂದೆ ಎಲ್ಲರೂ ಸರಕಾರಿ ಶಾಲೆಯಲ್ಲೇ ಕಲಿತವರು. ಆ ಶಾಲೆಗಳಲ್ಲಿ ಕಲಿತಂತವರೇ ಸಮಾಜದಲ್ಲಿ ಬಹಳಷ್ಟು ಸಾಧನೆ ಮಾಡಿದ ಸಾಧಕರು ನಮ್ಮ ನಡುವೆ ಇದ್ದಾರೆ. ಸರಕಾರವೇ ನಡೆಸುವಂತಹ ಕೇಂದ್ರೀಯ ವಿದ್ಯಾಲಯ, ನವೋದಯ, ಎನ್‌ಐಟಿಕೆಯಂತಹ ಶಾಲೆಗಳಲ್ಲಿ ಈಗಲೂ ಮಾದರಿ ಶಿಕ್ಷಣವನ್ನು ನೀಡಲಾಗುತ್ತಿದ್ದೆ ಅಲ್ಲಿ ಪ್ರವೇಶ ಪಡೆಯುವುದೇ ಒಂದು ಸವಾಲಿನ ಕೆಲಸ. ಆದರೆ ಅಲ್ಲಿ ಎಷ್ಟು ಜನರಿಗೆ ಶಿಕ್ಷಣವನ್ನು ಪಡೆಯಲು ಸಾಧ್ಯ. ಎನ್‌ಐಟಿಕೆಯಂತಹ ಇಂಜನೀಯರಿಂಗ್ ಕಾಲೇಜುಗಳಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗಿಂತ ಹೊರ ರಾಜ್ಯದ ವಿದ್ಯಾರ್ಥಿಗಳೇ ಜಾಸ್ತಿ. ನಮ್ಮ ರಾಜ್ಯದ ವಿದ್ಯಾರ್ಥಿಗಳು ಸರಕಾರಿ ಇಂಜನೀಯರಿಂಗ್ ಕಾಲೇಜುಗಳಿಂದ ವಂಚಿತರಾಗಿದ್ದಾರೆ. ಈ ಬಗ್ಗೆ ರಾಜ್ಯ ಸರಕಾರ ಗಮನಹರಿಸಲು ಸಾಧ್ಯವಾಗಬೇಕು. ಇನ್ನು ಈಗಿನ ತಂತ್ರಜ್ಞಾನ ಮುಂದುವರಿದ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳಲ್ಲಿ ಮೊಬೈಲ್ ಬಳಕೆ ಅತಿಯಾಗಿದೆ ಇದು ಬಹಳ ಅಪಾಯಕಾರಿ. ಪರಸ್ಪರ ಮುಖ ನೋಡದೆ ವ್ಯವಹರಿಸುವಂತಹ ನಡವಳಿಕೆಯಿಂದಾಗಿ ಅಪನಂಬಿಕೆಗಳು ಜಾಸ್ತಿಯಾಗಿದೆ. ಅತೀಯಾದ ಮೊಬೈಲ್ ಬಳಕೆಯಿಂದ ದಾರಿ ತಪ್ಪುತ್ತಿರುವ ವಿದ್ಯಾರ್ಥಿಗಳು ಶಿಕ್ಷಣ ಕ್ಷೇತ್ರದಲ್ಲಿ ಕಳಪೆ ಫಲಿತಾಂಶವನ್ನು ನೀಡುವಂತಾಗಿದೆ. ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಗಳಿಗೆ, ಶಿಕ್ಷಣಕ್ಕೆ ಸದಾ ಪ್ರೋತ್ಸಾಹಿಸುವ ಪಕ್ಕಲಡ್ಕ ಯುವಕ ಮಂಡಲ ಹಾಗೂ ಡಿವೈಎಫ್‌ಐ ನಡೆ ಅಭಿನಂದನೀಯ. ಒಂದು ವಾರಗಳ ಕಾಲ ಬೇಸಿಗೆ ಶಿಬಿರದಲ್ಲಿ ಕಲಿತ ಕಲಿಕೆಯನ್ನು ಮರೆಯಬಾರದೆಂದು ಶಿಬಿರಾರ್ಥಿಗಳಿಗೆ ಸಲಹೆ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಯೆನೆಪೋಯ ಕಾಲೇಜಿನ ಪ್ರಾಧ್ಯಾಪಕರಾದ ಡಾ ಸವಿತಾ ಸುವರ್ಣ, ಸಮುದಾಯ ಸಾಂಸ್ಕೃತಿಕ ಸಂಘಟನೆಯ ಕಾರ್ಯದರ್ಶಿ ಮನೋಜ್ ವಾಮಂಜೂರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ವೇದಿಕೆಯಲ್ಲಿ ಯುವ ಉದ್ಯಮಿ ವಿಜಯ ಬಜಾಲ್, ಶಿಬಿರದ ನಿರ್ದೇಶಕರಾದ ಪ್ರವೀಣ್ ವಿಸ್ಮಯ, ಡಿವೈಎಫ್‌ಐ ನಗರ ಅಧ್ಯಕ್ಷರಾದ ಜಗದೀಶ್ ಬಜಾಲ್ ಉಪಸ್ಥಿತರಿದ್ದರು. ಭಾರತ ವಿದ್ಯಾರ್ಥಿ ಫೆಡರೇಶನ್ ನ ನಗರ ಅಧ್ಯಕ್ಷರಾದ ಪ್ರಥಮ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಪ್ರಸ್ತಾವಿಕ ಮಾತನ್ನಾಡಿದರು. ಶಿಬಿರಾರ್ಥಿ ಆಯುಷ್ ಸ್ವಾಗತಿಸಿ ಕುಮಾರಿ ಮಾನ್ಯ ಕಾರ್ಯಕ್ರಮ ನಿರೂಪಿಸಿದರು. ನಂತರ ಶಿಬಿರಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡಿದರು. ಪರಿಸರ ಸಂರಕ್ಷಣೆಯ ಕುರಿತು ಕನಸು ನಾಟಕವನ್ನು ಶಿಬಿರಾರ್ಥಿಗಳು ನಟಿಸಿ ಪ್ರದರ್ಶಿಸಿದರು.

‘ರಾಜದಂಡ’ ಆರೆಸ್ಸೆಸ್ – ಬಿಜೆಪಿಯ ಕಟ್ಟುಕಥೆ

ನೂತನ ಸಂಸತ್ ಕಟ್ಟಡವನ್ನು ಮೇ 28 ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ದೇಶದ ಮೊದಲ ಮಹಿಳಾ ಪ್ರಜೆಯಾದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಒಂದು ಗೌರವಕ್ಕಾಗಿಯಾದರೂ ಈ ಸಮಾರಂಭದಲ್ಲಿ ಆಹ್ವಾನ ಮಾಡಲಾಗಿಲ್ಲ. ‘ನಾನೇ ರಾಜ, ನಾನೇ ಮಂತ್ರಿ’ ಎಂಬ ನಿರಂಕುಶ ಧೋರಣೆಯೊಂದಿಗೆ ಮೋದಿ ಅವರೇ ಹೊಸ ಸಂಸತ್ತಿನ ಉದ್ಘಾಟನೆಯನ್ನು ಮೂಲಕ ಮಾಡುತ್ತಾರೆ. ಭಾರತದ ಸಂವಿಧಾನದ 76 ನೇ ವಿಧಿಯು ಸಂಸತ್ತಿನ ಸ್ಪೀಕರ್ ರಾಷ್ಟ್ರಪತಿ ಎಂದು ದೃಢಪಡಿಸುತ್ತದೆ. ಆದರೆ ಕೇಂದ್ರ ಬಿಜೆಪಿ ಸರ್ಕಾರ ಈ ವಿಷಯದಲ್ಲಿ ರಾಷ್ಟ್ರಪತಿಗಳ ಗೌರವಾನ್ವಿತ ಸ್ಥಾನಕ್ಕೆ ಅವಮಾನ ಮಾಡಿದೆ. ಇದರ ವಿರುದ್ಧ 19 ವಿರೋಧ ಪಕ್ಷಗಳು ಜಂಟಿಯಾಗಿ ಸಂಸತ್ತಿನ ಉದ್ಘಾಟನಾ ಸಮಾರಂಭವನ್ನು ಬಹಿಷ್ಕರಿಸಲು ನಿರ್ಧರಿಸಿವೆ.

ರಾಜಪ್ರಭುತ್ವದ ಒಂದು ಅವಶೇಷ

ಇದಲ್ಲದೆ, ರಾಜಪ್ರಭುತ್ವದ ಅವಧಿಯ ಎಲ್ಲಾ ಅವಶೇಷಗಳನ್ನು ಈ ಸಮಾರಂಭದ ಮೂಲಕ ಪ್ರಸ್ತುತಪಡಿಸುತ್ತ, ಕೇಂದ್ರ ಬಿಜೆಪಿ ಆಡಳಿತಗಾರರು ಪ್ರಜಾಪ್ರಭುತ್ವದ ತತ್ವಗಳನ್ನು ರಾಜಪ್ರಭುತ್ವದ ಯುಗದತ್ತ ಕೊಂಡೊಯ್ಯಲು ಪ್ರಯತ್ನಿಸಿದ್ದಾರೆ. ನೂತನ ಸಂಸತ್ ಭವನದಲ್ಲಿ ಸ್ಪೀಕರ್ ಸ್ಥಾನದ ಬಳಿ ರಾಜದಂಡವನ್ನು ಸ್ಥಾಪಿಸುವ ಕ್ರಮವು ಅದರ ಭಾಗವಾಗಿದೆ. ಚೋಳರ ಸಂಪ್ರದಾಯದ ಆಧಾರದ ಮೇಲೆ, ತಮಿಳುನಾಡಿನ ತಿರುವಾವದುತುರೈ ಮಠದ(ಅಧೀನಂ) ಪರವಾಗಿ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರಿಗೆ ನೀಡಲಾದ ರಾಜದಂಡವನ್ನು ದೇಶವು ಸ್ವತಂತ್ರವಾದಾಗ ಸಂಸತ್ತಿನಲ್ಲಿ ಇರಿಸಲಾಗುವುದು ಎಂದು ಘೋಷಿಸಲಾಗಿದೆ. ಅಸಂಖ್ಯಾತ ಜನರ ಜ್ವಲಂತ ಸಮಸ್ಯೆಗಳನ್ನು ದಿಕ್ಕು ತಪ್ಪಿಸುವ ಉದ್ದೇಶದಿಂದ ಅಮಿತ್ ಶಾ ಮತ್ತು ಬಿಜೆಪಿ ಈ ರಾಜದಂಡದ ವಿಚಾರವನ್ನು ತೇಲಿಬಿಟ್ಟಿದೆ. ವಾಸ್ತವವಾಗಿ, ಬ್ರಿಟಿಷರಿಂದ ಭಾರತೀಯರಿಗೆ ಅಧಿಕಾರದ ಹಸ್ತಾಂತರದ ಸಂಕೇತವಾಗಿ ರಾಜದಂಡವನ್ನು ಪ್ರಧಾನಿ ನೆಹರೂಗೆ ಹಸ್ತಾಂತರಿಸಲಾಯಿತು, ಭಾರತೀಯ ಸಂಪ್ರದಾಯದಲ್ಲಿ, ಒಬ್ಬ ರಾಜನಿಂದ ಇನ್ನೊಬ್ಬರಿಗೆ ಅಧಿಕಾರದ ವರ್ಗಾವಣೆಯ ಸಂಕೇತವಾಗಿ ಅಂತಹ ರಾಜದಂಡವನ್ನು ಕೊಡುವುದು ವಾಡಿಕೆ, ಚೋಳ ಸಂಪ್ರದಾಯದಂತೆ ತಿರುವವಡುತುರೈ ಅಧೀನಂ ಪರವಾಗಿ ಜವಾಹರಲಾಲ್ ನೆಹರೂ ಅವರಿಗೆ ನೀಡಲಾಯಿತು, ಅಂತಹ ರಾಜದಂಡವನ್ನು ರಕ್ಷಿಸಲ್ಪಟ್ಟಿತ್ತು, ಪ್ರಸ್ತುತ ಇದನ್ನು ನೂತನ ಸಂಸತ್ತಿನಲ್ಲಿ ಇರಿಸಲಾಗುತ್ತದೆ ಎಂದು ಬಿಜೆಪಿ ಕಥೆಗಳನ್ನು ಕಟ್ಟತೊಡಗಿದೆ. ಇಂತಹ ಕಥೆಗಳನ್ನು ಮಾಧ್ಯಮಗಳು ಹೆಚ್ಚು ಪ್ರಚಾರ ಮಾಡಿವೆ.

ಅವರ ವಾದದ ಪ್ರಕಾರವೂ ಈಗ ರಾಜಪ್ರಭುತ್ವವಿಲ್ಲ; ಒಬ್ಬ ರಾಜನಿಂದ ಮತ್ತೊಬ್ಬ ರಾಜನಿಗೆ ಆಡಳಿತ ವರ್ಗಾವಣೆಯೂ ಈಗಿಲ್ಲ. ರಾಜನ ಪಟ್ಟಾಭಿಷೇಕವೂ ಇಲ್ಲ. ಮೇಲಾಗಿ, ಜವಾಹರಲಾಲ್ ನೆಹರೂ ಅವರಿಗೆ ರಾಜದಂಡವನ್ನು ಆಡಳಿತದ ಬದಲಾವಣೆಯ ಸಂಕೇತವಾಗಿ ನೀಡಲಾಯಿತು ಎಂದು ಭಾವಿಸಿದರೂ, ಅದು ದೊಡ್ಡ ಹೋರಾಟಗಳ ಪರಿಣಾಮವಾಗಿ ಬ್ರಿಟಿಷ್ ಸಾಮ್ರಾಜ್ಯದಿಂದ ಭಾರತೀಯ ಜನರ ಕೈಗೆ ವರ್ಗಾವಣೆಯಾಗಿದೆ. ಆದರೆ ಈಗ ಆ ಶ್ರೇಷ್ಠ ಭಾರತೀಯ ಗಣರಾಜ್ಯ ನಡೆಯುತ್ತಿದೆ; ಬೇರೆ ಬೇರೆ ಪಕ್ಷಗಳು ಅಧಿಕಾರಕ್ಕೆ ಬರಬಹುದು; ಅಂದರೆ ಇಲ್ಲಿನ ಆಡಳಿತ ಪಕ್ಷಗಳು ಬದಲಾಗುತ್ತವೆ, ಆದರೆ ಭಾರತ ಗಣರಾಜ್ಯದ ಆಡಳಿತ ಬದಲಾಗುವುದಿಲ್ಲ. ಹೀಗಾಗಿ ಈಗ ರಾಜದಂಡ ಕೊಡುವ ಮಾತೇ ಇಲ್ಲ. ಇದಲ್ಲದೆ, ಸಂಸತ್ತಿನಲ್ಲಿ ಇಡಲಾಗುವುದು ಎಂದು ಹೇಳಲಾದ ರಾಜದಂಡದ ಬಗ್ಗೆ ಬಿಜೆಪಿ ಆಡಳಿತಗಾರರು ತಿರುಚುತ್ತಿರುವ ಪುರಾಣಗಳು ಸಂಪೂರ್ಣವಾಗಿ ಸುಳ್ಳು.

ರಾಜ್ಯಪಾಲರು ಬರೆದ ಕಥೆಯೇ?

ಭಾರತದ 75 ನೇ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಆಗಸ್ಟ್ 2022 ರಲ್ಲಿ ತಿರುವಾವಡುತುರೈ ಅಧೀನಮ್, “ಅಧಿಕಾರದ ರಾಜದಂಡ, ಭಾರತೀಯ ಸ್ವಾತಂತ್ರ್ಯ" ಎಂಬ ಒಂದು ಕಿರುಪುಸ್ತಕವನ್ನು ಪ್ರಕಟಿಸಿದೆ. 1947ರಲ್ಲಿ ತಿರುವಾವಡುತುರೈ ಅಧೀನಮ್ ಪರವಾಗಿ ಪ್ರಧಾನಿ ಜವಾಹರಲಾಲ್ ನೆಹರು ಅವರಿಗೆ ರಾಜದಂಡವನ್ನು ಹೇಗೆ ಅರ್ಪಿಸಲಾಯಿತು ಎಂಬುದನ್ನು ಪುಸ್ತಕವು ವಿವರಿಸುತ್ತದೆ: "ಭಾರತದ ಕೊನೆಯ ಗವರ್ನರ್ ಆಗಿದ್ದ ಲಾರ್ಡ್ ಮೌಂಟ್ ಬ್ಯಾಟನ್, ನೆಹರು ಅವರನ್ನು ಕರೆದು ನಾವು ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಲಿದ್ದೇವೆ ಎಂದು ಹೇಗೆ ಸಂಕೇತಿಸಬೇಕೆಂದು ಕೇಳಿದರು, ಗೊಂದಲಕ್ಕೊಳಗಾದ ನೆಹರೂ, ಇದಕ್ಕೆ ತಕ್ಷಣ ಉತ್ತರಿಸಲಿಲ್ಲ. ಆಗ ಹಿರಿಯರಾದ ರಾಜಾಜಿಯ ಬಳಿಗೆ ಬಂದು, ಈ ಸಮಸ್ಯೆಯನ್ನು



ಪರಿಹರಿಸುವಂತೆ ಕೇಳಿದರು. ಕೂಡಲೇ ರಾಜಾಜಿ, 'ಚಿಂತೆ ಮಾಡಬೇಡಿ, ತಮಿಳುನಾಡಿನಲ್ಲಿ ರಾಜರು ತಮ್ಮ ಆಡಳಿತವನ್ನು ಬದಲಾಯಿಸಿದಾಗ, ರಾಜಗುರುವಾದವರು ಹೊಸ ರಾಜನಿಗೆ ರಾಜದಂಡವನ್ನು ಕೊಟ್ಟು ಆಶೀರ್ವದಿಸುತ್ತಾರೆ; ಅದೇ ರೀತಿ ನಾವೂ ಕೂಡ ಒಬ್ಬ ಗುರುಗಳ ಮೂಲಕ ರಾಜದಂಡ ಪಡೆದು ಆಡಳಿತ ಬದಲಾವಣೆ ಮಾಡಬಹುದು’ ಎಂದು ಹೇಳಿದರು. ಆ ಸಮಯದಲ್ಲಿ, ರಾಜಾಜಿ ಅವರು ಭಾರತದ ಶೈವ ಮಠಗಳಲ್ಲಿ ಒಂದಾದ ತಿರುವಾವಡುತುರೈ ಅಧೀನ ಮಠದ 20 ನೇ ಗುರುಮಕ ಸನ್ನಿಧಾನವಾಗಿ ಆಶೀರ್ವದಿಸಲ್ಪಟ್ಟ ಶ್ರೀ ಅಂಬಲವನ ದೇಶಿಕ ಮೂರ್ತಿಯನ್ನು (1937–1951) ಸಂಪರ್ಕಿಸಿ, ಆಡಳಿತ ಬದಲಾವಣೆಗೆ ಪುಣ್ಯ ಕರ್ಮಗಳನ್ನು ನೆರವೇರಿಸಿ ಎಂದು ವಿನಮ್ರವಾಗಿ ವಿನಂತಿಸಿದರು ಎಂದು ಹೇಳಲಾಗಿದೆ. ಇದನ್ನು ಅನುಸರಿಸಿ, ಚೆನ್ನೈನ ಪ್ರಸಿದ್ಧ ಉಮ್ಮಿಡಿ ಬಂಗಾರು ಚೆಟ್ಟಿಯಾರ್ ಆಭರಣ ಮಳಿಗೆಯಲ್ಲಿ ಚಿನ್ನದ ರಾಜದಂಡವನ್ನು ತಯಾರಿಸಲಾಯಿತು, ಅದರ ಮೇಲೆ ಗೂಳಿಯ (ನಂದಿ) ಶೈವ ಚಿಹ್ನೆಯನ್ನು ಕೂರಿಸಲಾಯಿತು, ರಾಜಾಜಿಯವರ ಏರ್ಪಾಡಿನ ಮೇರೆಗೆ ಒಂದು ಗುಂಪು ಖಾಸಗಿ ವಿಮಾನದಲ್ಲಿ ಹೊರಟಿತು, ಸ್ವಾತಂತ್ರ್ಯದ ಸಂದರ್ಭದಲ್ಲಿ ರಾಜಾಜಿ ಡಾ.ರಾಜೇಂದ್ರ ಪ್ರಸಾದ್ ಅವರ ಉಪಸ್ಥಿತಿಯಲ್ಲಿ, ಪಂಡಿತ್ ಜವಾಹರಲಾಲ್ ನೆಹರು, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಉನ್ನತ ಅಧಿಕಾರಿಗಳು ಎಲ್ಲರೂ ಸುತ್ತುವರೆದರು, 14 ಆಗಸ್ಟ್ 1947 ರಾತ್ರಿ 11.45 ಕ್ಕೆ, ಲಾರ್ಡ್ ಮೌಂಟ್ ಬ್ಯಾಟನ್ ಅವರಿಗೆ ಚಿನ್ನದ ರಾಜದಂಡವನ್ನು ನೀಡಿದರು ಮತ್ತು ಅದರ ಮೇಲೆ ಪವಿತ್ರ ನೀರನ್ನು ಸಿಂಪಡಿಸಿದರು, ಭಗವಂತನ ನಾಮವನ್ನು ಜಪಿಸಿದರು ಮತ್ತು ಅದನ್ನು ಪಂಡಿತ್ ಜವಾಹರಲಾಲ್ ನೆಹರು ಅವರಿಗೆ ಹಸ್ತಾಂತರಿಸಿದರು, ಅವರು ಸರ್ಕಾರದ ಜವಾಬ್ದಾರಿಯನ್ನು ವಹಿಸಿಕೊಂಡರು.

ಆದರೆ ಇದು ಸಂಪೂರ್ಣ ಕಥೆಯಾಗಿದೆ. ಆರೆಸ್ಸೆಸ್ ಬಿಜೆಪಿಯಿಂದ ಈ ಮಿಥ್ಯೆಯನ್ನು ಸೃಷ್ಟಿಸಲಾಗಿದೆ ಎಂದು ಶಂಕಿಸಲಾಗಿದೆ. ಏಕೆಂದರೆ ಅದೇ ಪುಸ್ತಕದ ಏಳನೇ ಪುಟದಲ್ಲಿ "ಏಪ್ರಿಲ್ 19, 2022 ರಂದು ತಮಿಳುನಾಡು ರಾಜ್ಯಪಾಲ ಆರ್. ಎನ್.ರವಿ ಅವರು ತಿರುವಾವಡುತುರೈ ಅಧೀನಂ ಪ್ರಧಾನ ಮಠಕ್ಕೆ ಬಂದು ಶ್ರೀ ಶ್ರೀ 24 ನೇ ಗುರುಮಕ ಸನ್ನಿಧಾನಂ ಅವರನ್ನು ಭೇಟಿಯಾಗಿ ಸ್ವಾತಂತ್ರ್ಯ ರಾಜದಂಡದ ಬಗ್ಗೆ ವಿಚಾರಿಸಿದರು" ಎಂದು ಉಲ್ಲೇಖಿಸಲಾಗಿದೆ. ರಾಜ್ಯಪಾಲ ರವಿ ಬಂದು, ರಾಜದಂಡದ ಬಗ್ಗೆ ಏನನ್ನು ಹೇಳಬೇಕೆಂದಿದ್ದರೋ ಅದನ್ನೇ ಪುಸ್ತಕವಾಗಿ ಪ್ರಕಟಿಸಿದರು ಎಂದು ಭಾವಿಸಲು ಅವಕಾಶವಿದೆ. ಯಾಕೆಂದರೆ, ಅದನ್ನೇ ಈಗ ಅಮಿತ್ ಶಾ ಮತ್ತು ಆರ್ ಎಸ್ ಎಸ್ ಬಿಜೆಪಿ ಮುಖವಾಣಿಗಳು ಹಬ್ಬಿಸುತ್ತಿವೆ.

ಮೌಂಟ್ ಬ್ಯಾಟನ್ ಎಲ್ಲಿದ್ದರು?

ಅವರ ಪ್ರಕಾರ, ಅಂತಹ ಘಟನೆಗಳು ಆಗಸ್ಟ್ 14, 1947 ರಂದು ನಿಜವಾಗಿ ನಡೆದ ಯಾವುದೇ ಐತಿಹಾಸಿಕ ದಾಖಲೆಗಳಿಲ್ಲ. ತಿರುವಾವಡುತುರೈ ಅಧೀನಾ ಅವರು ಪ್ರಕಟಿಸಿರುವ ಪುಸ್ತಕದಲ್ಲಿಯೂ ಮೇಲಿನ ದೃಶ್ಯಗಳಂತೆ ಛಾಯಾಚಿತ್ರವಿಲ್ಲ. ಹೆಚ್ಚಿನ ಧಾರ್ಮಿಕ ಸುದ್ದಿ ಅಥವಾ ಪತ್ರಿಕಾ ವರದಿಗಳಿಲ್ಲ. ಹಾಗೇನಾದರೂ ಇದ್ದರೆ, ಅದೇ ಪ್ರಮುಖ ಸುದ್ದಿಯಾಗಿ ಬಿತ್ತರವಾಗುತ್ತಿತ್ತು. ಇದಕ್ಕೆ ವ್ಯತಿರಿಕ್ತವಾಗಿ, ಐತಿಹಾಸಿಕ ದಾಖಲೆಗಳಲ್ಲಿ, ಅಧೀನದಿಂದ ಬಂದ ಜನರು ನೆಹರೂಗೆ ರಾಜದಂಡವನ್ನು ಹಸ್ತಾಂತರಿಸುವ ಛಾಯಾಚಿತ್ರಗಳನ್ನು ಒಳಗೊಂಡಿವೆ, ಆದರೆ ಮೌಂಟ್ ಬ್ಯಾಟನ್ ಗೆ ಯಾರೂ ರಾಜದಂಡವನ್ನು ಹಸ್ತಾಂತರಿಸಲಿಲ್ಲ. ಆ ದಿನ ಮೌಂಟ್ ಬ್ಯಾಟನ್ ನಿಜವಾಗಿ ಎಲ್ಲಿದ್ದರು ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ವಿ.ಪಿ.ಮೆನನ್ ಅವರ "ದಿ ಟ್ರಾನ್ಸ್ಫರ್ ಆಫ್ ಪವರ್ ಇನ್ ಇಂಡಿಯಾ" ಪುಸ್ತಕವು ಅಧಿಕಾರದ ವರ್ಗಾವಣೆಯ ಕ್ಷಣಗಳ ಬಗ್ಗೆ ವಿವರವಾಗಿ ಹೇಳುತ್ತದೆ.

> **ರಾಜರುಗಳ ಅನುದಾನ ರದ್ದು ಮಾಡಬಾರದು ಎಂದು ಹೋರಾಟ ನಡೆಸಿದ ಜನಸಂಘದ ಉತ್ತರಾಧಿಕಾರಿಗಳು ರಾಜಪ್ರಭುತ್ವದ ಪದ್ಧತಿಯನ್ನು ಮರಳಿ ತರಲು ಯತ್ನಿಸುತ್ತಿದ್ದಾರೆ.**

10 ಜುಲೈ 1947 ರಂದು ಪಾಕಿಸ್ತಾನ ಮತ್ತು ಭಾರತಕ್ಕೆ ಸ್ವಾತಂತ್ರ್ಯ ನೀಡಬೇಕಾದಾಗ ವೈಸರಾಯ್ ಮೌಂಟ್ ಬ್ಯಾಟನ್ ರ ಅಜೆಂಡಾ 14–15 ಆಗಸ್ಟ್‌ನಲ್ಲಿ ನಿರ್ಧರಿಸಲಾಯಿತು. ಬ್ರಿಟನ್ನಿನ ಸುಂದರ್ಲಾರ್ಂಡ್ ವಿಶ್ವವಿದ್ಯಾನಿಲಯ **(University of Sunderland)** ದಲ್ಲಿ ಇರಿಸಲಾಗಿರುವ ಲಾರ್ಡ್ ಮೌಂಟ್ ಬ್ಯಾಟನ್ ಅವರ ಸಂಬಂಧಿತ ದಾಖಲೆಗಳ ಪ್ರಕಾರ, ಅವರು ಆಗಸ್ಟ್ 14 ರಂದು ಬೆಳಿಗ್ಗೆ 8 ಗಂಟೆಗೆ ದೆಹಲಿಯಿಂದ ಹೊರಟು 11.30 ಕ್ಕೆ ಕರಾಚಿ ತಲುಪಿದರು; ಪಾಕಿಸ್ತಾನದ ಮೊದಲ ಸ್ವಾತಂತ್ರ್ಯ ದಿನಾಚರಣೆಯನ್ನು ಮುಗಿಸಿ ಅಲ್ಲಿಂದ ಮಧ್ಯಾಹ್ನ 3.30ಕ್ಕೆ ಹೊರಟು ರಾತ್ರಿ 7.00 ಗಂಟೆಗೆ ದೆಹಲಿ ತಲುಪಿದರು. ಅದಾದ ನಂತರ ಆಗಸ್ಟ್ 15 ರಂದು ಬೆಳಗ್ಗೆ 10 ಗಂಟೆಗೆ ಭಾರತದ ಸ್ವಾತಂತ್ರ್ಯ ದಿನಾಚರಣೆಗೆ ಅವರ ಕಾರ್ಯಕ್ರಮ ನಡೆಯಲಿದೆ. ರಾತ್ರಿ 11.45ಕ್ಕೆ ರಾಜದಂಡವನ್ನು ತೆಗೆದುಕೊಂಡು ಹೋಗಿ ಪುಣ್ಯಜಲವನ್ನು ಸಿಂಪಡಿಸಿ ನೆಹರೂ ಅವರಿಗೆ ನೀಡಿದ ಐತಿಹಾಸಿಕ ದಾಖಲೆಗಳಿಲ್ಲ. ಬ್ರಿಟಿಷರಿಂದ ಭಾರತೀಯರಿಗೆ ಅಧಿಕಾರದ ಹಸ್ತಾಂತರದ ಏಕೈಕ ನಿಜವಾದ ಸಂಕೇತವೆಂದರೆ ಮಧ್ಯರಾತ್ರಿಯಲ್ಲಿ ಬ್ರಿಟಿಷ್ ಯೂನಿಯನ್ ಜ್ಯಾಕ್ ಧ್ವಜವನ್ನು ಇಳಿಸುವುದು ಮತ್ತು ಭಾರತೀಯ ತ್ರಿವರ್ಣ ಧ್ವಜವನ್ನು ಏರಿಸುವುದು, ನಂತರ ದೇಶದೆಲ್ಲೆಡೆ ಜನರ ಸಡಗರ, ಸಂಭ್ರಮ ಸಡಗರದಿಂದ ಆಚರಿಸಲಾಯಿತು.

‘ಸಮಯ’ ಕುರಿತು ವ್ಯಾಖ್ಯಾನ

ಅಧೀನಮ್ ಮಠದ ಸದಸ್ಯರು ನೆಹರೂ ಅವರನ್ನು ಭೇಟಿಯಾಗಿ ರಾಜದಂಡ ನೀಡಿ ಗೌರವ ಸೂಚಿಸಿದ್ದು ಸರ್ಕಾರದ ಅಧಿಕೃತ ಆಡಳಿತ ಬದಲಾವಣೆಯ ಅಜೆಂಡಾ ಅಲ್ಲ. ಅದಕ್ಕೂ ಆಡಳಿತ ಬದಲಾವಣೆಗೂ ಯಾವುದೇ ಸಂಬಂಧವಿಲ್ಲ. ಇದು ನೆಹರೂ ಅವರ ಮನೆಯಲ್ಲಿ ನಡೆದ ಸೌಜನ್ಯದ ಕಾರ್ಯಕ್ರಮವಾಗಿತ್ತು. ಈ ನಿಟ್ಟಿನಲ್ಲಿ, ಆಗಸ್ಟ್ 25, 1947 – ನ್ಯೂಯಾರ್ಕ್‌ನಿಂದ ಪ್ರಕಟವಾದ ಟೈಮ್ ಮ್ಯಾಗಜೀನ್ ಈ ಕೆಳಗಿನಂತೆ ವಿವರಿಸುತ್ತದೆ: “ದಕ್ಷಿಣ ಭಾರತದ ತಂಜಾವೂರಿನಲ್ಲಿರುವ ಮಠದ ಮುಖ್ಯಸ್ಥರಾದ ಶ್ರೀ ಅಂಬಲವನ ದೇಶಿಕರ ಇಬ್ಬರು ರಾಯಭಾರಿಗಳು ಆಗಮಿಸಿದ್ದರು. ಭಾರತದ ಮೊದಲ ನಿಜವಾದ ರಾಷ್ಟ್ರದ ಮುಖ್ಯಸ್ಥರಾದ ಜವಾಹರಲಾಲ್ ನೆಹರು ಅವರು ಪ್ರಾಚೀನ ಕಾಲದ ಭಾರತೀಯ ರಾಜರಂತೆ ಹಿಂದೂ ಸಂತರಿಂದ ಅಧಿಕಾರದ ಸಂಕೇತವನ್ನು ಪಡೆಯಬೇಕೆಂದು ಅಂಬಲವನ ದೇಶಿಕರು ಭಾವಿಸಿದರು. ಆ ದೂತರೊಂದಿಗೆ ನಾದಸ್ವರ ವಿದ್ವಾನ್ (ಡಿ.ಕೆ. ರಾಜರತ್ನಂ ಪಿಳ್ಳೈ) ಕೂಡ ಬಂದರು. ಅವರು ಆಗಸ್ಟ್ 14 ರ ಸಂಜೆ ಹಳೆಯ ಬೋರ್ಡ್ ಕಾರಿನಲ್ಲಿ ನೆಹರೂ ಅವರ ಮನೆಯ ಕಡೆಗೆ ಮೆರವಣಿಗೆಯಲ್ಲಿ ಹೊರಟರು. ಹಾಗೆ ಹೋಗುವಾಗ 100 ಅಡಿಗೊಮ್ಮೆ ನಿಲ್ಲಿಸಿ ಸುಮಾರು 15 ನಿಮಿಷಗಳ ಕಾಲ ನಾದಸ್ವರ ಮೊಳಗಿಸಿದರು. ಇನ್ನೊಬ್ಬರು ದೊಡ್ಡ ಬೆಳ್ಳಿಯ ತಟ್ಟೆಯನ್ನು ಹೊತ್ತಿದ್ದರು. ಆ ಬೆಳ್ಳಿಯ ತಟ್ಟೆಯಲ್ಲಿ ಜರಿಯುಳ್ಳ ಪೀತಾಂಬರವಿತ್ತು.

ಕೊನೆಗೆ ನೆಹರೂ ಅವರ ಮನೆ ತಲುಪಿದ ನಾದಸ್ವರ ವಿದ್ವಾನ್ ನಾದಸ್ವರ ಪಠಿಸಲು ಆರಂಭಿಸಿದರು. ಇನ್ನು ಕೆಲವರು ನೆಹರೂ ಅವರ ಕರೆಗಾಗಿ ಕಾಯುತ್ತಿದ್ದರು. ನಂತರ ಅವರು ಮನೆಯೊಳಗೆ ಪ್ರವೇಶಿಸಿದರು. ಆಗ ಜಿಂಕೆಯ ಕೂದಲುಗಳಿಂದ ಮಾಡಿದ ಬೀಸಣಿಗೆಯಿಂದ ಅವರಿಗೆ ಬೀಸಿದರು. ಒಬ್ಬ ಸನ್ಯಾಸಿಯು 5 ಅಡಿ ಎತ್ತರದ ಚಿನ್ನದ ಲೇಪಿತ 2 ಇಂಚಿನ, ಭಾರವಾದ ರಾಜದಂಡವನ್ನು ಹಿಡಿದಿದ್ದನು. ಯಾರೋ ನೆಹರೂ ಅವರ ತಲೆಗೆ ತಂಜಾವೂರಿನ ಪವಿತ್ರ ಜಲವನ್ನು ಎರಚಿದರು. ನೆಹರೂ ಅವರ ಹಣೆಗೆ ವಿಭೂತಿ ಬಳಿದರು. ಅವರು ನೆಹರೂ ಅವರಿಗೆ ಪೀಠದಲ್ಲಿ ಸುತ್ತಿದ ರಾಜದಂಡವನ್ನು ನೀಡಿದರು. ಅಂದು ಬೆಳಗ್ಗೆ ನಟರಾಜನಿಗೆ ಮಾಡಿಟ್ಟಿದ್ದ ಪ್ರಸಾದವನ್ನೂ ಆತನಿಗೆ ಕೊಟ್ಟು ವಿಮಾನದಲ್ಲಿ ತರಲಾಯಿತು” ಎಂದು ಟೈಮ್ ವರದಿ ಮಾಡಿದೆ. ನೆಹರೂಗೆ ರಾಜದಂಡ ಹಸ್ತಾಂತರಕ್ಕೆ ಸಂಬಂಧಿಸಿದ ಅತ್ಯಂತ ನಿಖರವಾದ ಘಟನೆಗಳನ್ನು ವಿವರಿಸುವ ಐತಿಹಾಸಿಕ ವರದಿ ಇದು. ಇದಕ್ಕೆ ವ್ಯತಿರಿಕ್ತವಾಗಿ ಈಗ ಆರೆಸ್ಸೆಸ್–ಬಿಜೆಪಿಯವರು ಬಿಚ್ಚಿಟ್ಟಿರುವುದು ಒಂದು ಕಟ್ಟುಕಥೆ.

ಸಂವಿಧಾನವೇ ಅಧಿಕೃತವಾಗಿದೆ

ಭಾರತದಲ್ಲಿ ರಾಜಪ್ರಭುತ್ವ ರದ್ದಾಗಿದೆ. ಜನರ ಚಳುವಳಿಯಿಂದ ವಸಾಹತುಶಾಹಿ ಆಡಳಿತವೂ ಉರುಳಿದೆ. 75 ವರ್ಷಗಳ ಕಾಲ ಗಣರಾಜ್ಯವಾಗಿದೆ. ಭಾರತೀಯ ಪ್ರಜಾಪ್ರಭುತ್ವ ಆಡಳಿತದಲ್ಲಿ ಯಾವುದೇ ವ್ಯಕ್ತಿಯ ರಾಜದಂಡಕ್ಕೆ ಸ್ಥಾನವಿಲ್ಲ. ಗಣರಾಜ್ಯವು ಅನುಮೋದಿಸಿದ ಸಂವಿಧಾನವು ಸಂಸತ್ತಿನ ಮಧ್ಯಭಾಗದಲ್ಲಿ ಇಡಬೇಕೇ ವಿನಃ ರಾಜರು ಮತ್ತು ಪುರೋಹಿತರನ್ನು ಪವಿತ್ರಗೊಳಿಸುವ ರಾಜದಂಡವಲ್ಲ.

ಲೇಖಕರು: ***ಕೆ.ಬಾಲಕೃಷ್ಣನ್,*** *ತಮಿಳುನಾಡು ರಾಜ್ಯ ಕಾರ್ಯದರ್ಶಿ, ಸಿಪಿಐ(ಎಂ)*

ಅನು: ***ಸಿಚಿ***



ನೂತನ ಸಂಸತ್ ಭವನ ಉದ್ಘಾಟನೆ ರಾಷ್ಟ್ರಪತಿಯವರಿಗಿಲ್ಲ ಆಹ್ವಾನ

ಮೇ 28 ರಂದು ನೂತನ ಸಂಸತ್ತಿನ ಉದ್ಘಾಟನೆಯಾಗುತ್ತಿದೆ. ನೂತನ ಸಂಸತ್ತಿನ ಶಂಕುಸ್ಥಾಪನೆಯಿಂದ ಉದ್ಘಾಟನಾ ಸಮಾರಂಭದವರೆಗೆ ಅನೇಕ ಚರ್ಚೆಗಳು ಹುಟ್ಟಿಕೊಂಡಿವೆ. ಇದೀಗ ಉದ್ಘಾಟನಾ ಸಮಾರಂಭಕ್ಕೆ ರಾಷ್ಟ್ರಪತಿಯವರನ್ನು ಆಹ್ವಾನಿಸದಿರುವುದು ಭಾರೀ ಚರ್ಚೆಗೆ ಗ್ರಾಸವಾಗಿದೆ. ಈ ಮೂಲಕ ಪ್ರಧಾನಿ ಮೋದಿ ಏನನ್ನು ಸಾಧಿಸಲು ಪ್ರಯತ್ನಿಸುತ್ತಿದ್ದಾರೆ? ತಮ್ಮನ್ನು ತಾವು ಭಾರತೀಯ ರಾಜಕೀಯದಲ್ಲಿ ಅಪರಿಮಿತ ಅಧಿಕಾರ ಹೊಂದಿರುವ ಏಕೈಕ ವ್ಯಕ್ತಿ ಅಂದುಕೊಂಡಿದ್ದಾರೆಯೇ? ಅಧ್ಯಕ್ಷರು ಸೇರಿದಂತೆ ಇತರರನ್ನು ತನಗಿಂತ ಕೆಳಗಿನವರಂತೆ ಇರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆಯೇ? ತಾನು ಯಾರಿಗೂ ಉತ್ತರಿಸಬೇಕಾಗಿಲ್ಲ ಎಂದು ಅವರು ಭಾವಿಸುತ್ತಾರೆಯೇ? ಮುಂತಾದ ಪ್ರಶ್ನೆಗಳು ಮುನ್ನೆಲೆಗೆ ಬಂದಿವೆ. ಬಿಜೆಪಿಗೂ ಹಾಗೆಯೇ; ವ್ಯಕ್ತಿಗಳ ಆರಾಧನೆಯನ್ನು ತಿರಸ್ಕರಿಸುವ ಆರ್.ಎಸ್.ಎಸ್. ವ್ಯವಸ್ಥೆ ಚೆನ್ನಾಗಿದೆ ಎಂದು ಹೇಳುತ್ತಾರೆ ಆದರೆ, ಮೋದಿಯವರ ಈ ಕೃತ್ಯವನ್ನು ಪ್ರಶ್ನಿಸದಿರುವುದು ವಿಚಿತ್ರವಾಗಿದೆ.

ಹೊಸ ಕಟ್ಟಡದ ಅಗತ್ಯವಿದೆಯೇ?

ನೂತನ ಸಂಸತ್ ಭವನ ನಿರ್ಮಾಣದ ಘೋಷಣೆಯಾದಾಗಲೂ ಈ ಕಟ್ಟಡ ಬೇಕೇ ಎಂಬ ಪ್ರಶ್ನೆ ಎದ್ದಿತ್ತು. ಈಗಿರುವ ಕಟ್ಟಡವೇ ಹಾಳಾಗದೇ ಬಲಿಷ್ಠವಾಗಿರುವಾಗ ಹೊಸ ಕಟ್ಟಡ ಏಕೆ? ಮತ್ತು ಅದು ತುಂಬಾ ದೊಡ್ಡ ವೆಚ್ಚದಲ್ಲಿ? ಇದಕ್ಕೆ ಸೂಕ್ತ ಉತ್ತರ ನೀಡಲು ಬಿಜೆಪಿಗೆ ಸಾಧ್ಯವಾಗಿಲ್ಲ. ನಮ್ಮ ರಾಷ್ಟ್ರೀಯ ಸಂಸತ್ತಿನ ಕಟ್ಟಡವನ್ನು 1927 ರಲ್ಲಿ ನಿರ್ಮಿಸಲಾಯಿತು. ನಂತರ ಅಗತ್ಯ ಬದಲಾವಣೆಗಳು ಮತ್ತು ನವೀಕರಣಗಳನ್ನು ಮಾಡಲಾಯಿತು. ಆದಾಗ್ಯೂ, ಕಟ್ಟಡವು ಮೂಲಭೂತವಾಗಿ ಪ್ರಬಲವಾಗಿದೆ ಎಂಬುದನ್ನು ಯಾರೂ ನಿರಾಕರಿಸುವುದಿಲ್ಲ. ಅನೇಕ ರಾಷ್ಟ್ರಗಳ ಸಂಸತ್ ಕಟ್ಟಡಗಳು ಇದಕ್ಕಿಂತಲೂ ಹಳೆಯವಾಗಿವೆ. ಆದರೆ ಅವುಗಳನ್ನು ಇನ್ನೂ ಬಳಸಲಾಗುತ್ತಿದೆ.

ರಾಷ್ಟ್ರ	ನಿರ್ಮಾಣ ವರ್ಷ	ರಾಷ್ಟ್ರ	ನಿರ್ಮಾಣ ವರ್ಷ
ಈಜಿಪ್ಟ್	1923	ಜರ್ಮನಿ	1904
ದಕ್ಷಿಣ ಆಫ್ರಿಕಾ	1884	ಇಟಲಿ	1505/1697 (ದ್ವಿಸದನ)
ಅರ್ಜೆಂಟೀನಾ	1906	ರಷ್ಯಾ	1935
ಕೆನಡಾ	1859	ಸ್ಪೇನ್	1814
ಅಮೇರಿಕಾ	1800	ಇಂಗ್ಲೆಂಡ್	1870
ಜಪಾನ್	1936	ಫ್ರಾನ್ಸ್	1615/1728 (ದ್ವಿಸದನ)

ಕೆಲವು ರಾಷ್ಟ್ರಗಳು ಹೊಸದನ್ನು ನಿರ್ಮಿಸಿವೆ. ಆದಾಗ್ಯೂ ಅವು ಹೊಸದಾಗಿ ಸ್ವತಂತ್ರ ದೇಶಗಳಾಗಿವೆ. ಅಥವಾ ಹಳೆಯ ಕಟ್ಟಡಗಳಲ್ಲಿ ದೋಷಗಳಿದ್ದರೆ ಹೊಸ ಕಟ್ಟಡಗಳನ್ನು ನಿರ್ಮಿಸಲಾಗುತ್ತದೆ. ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್ ನಂತಹ ಭಾರತಕ್ಕಿಂತ ಶ್ರೀಮಂತ ರಾಷ್ಟ್ರಗಳು ಹಳೆಯ ಕಟ್ಟಡಗಳನ್ನು ನವೀಕರಿಸುತ್ತಿವೆ ವಿನಃ ಹೊಸ ಸಂಸತ್ತಿನ ಕಟ್ಟಡಗಳನ್ನು ನಿರ್ಮಿಸುತ್ತಿಲ್ಲ ಎಂಬುದು ಗಮನಿಸಬೇಕಾದ ಸಂಗತಿ. ಹೊಸ ಸಂಸತ್ ಭವನ ನಿರ್ಮಾಣದ ವೆಚ್ಚ ರೂ. 1000 ಕೋಟಿ. ಆದಾಗ್ಯೂ, ಸಂಪೂರ್ಣ "ಸೆಂಟ್ರಲ್ ವಿಸ್ಟಾ" ಎಂಬ ಈ ಸಂಕೀರ್ಣವನ್ನು ನಿರ್ಮಿಸಲು ಒಟ್ಟು ವೆಚ್ಚ 20,000 ರಿಂದ 25,000 ಕೋಟಿ ರೂಪಾಯಿಗಳು ಎಂದು ಕೇಂದ್ರ ಸರ್ಕಾರ ಹೇಳಿದೆ.

ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಕ್ಕೆ ಇಷ್ಟೊಂದು ಹಣ ವೆಚ್ಚ ಮಾಡುವ ಅಗತ್ಯವಿತ್ತೇ ಎಂಬ ಪ್ರಶ್ನೆ ಮೂಡುತ್ತದೆ. ಈ ಪ್ರಶ್ನೆಗೆ ಸರ್ಕಾರ ಅಥವಾ ಬಿಜೆಪಿಯಿಂದ ಯಾವುದೇ ತೃಪ್ತಿಕರ ಪ್ರತಿಕ್ರಿಯೆ ಬಂದಿಲ್ಲ. ಈ 20,000 ಕೋಟಿ ರೂ. ಗಳಲ್ಲಿ 15,000 ಮಾದರಿ ಶಾಲೆಗಳನ್ನು ನಿರ್ಮಿಸಬಹುದು. 500 ಅತ್ಯುತ್ತಮ ಆಸ್ಪತ್ರೆಗಳನ್ನು ನಿರ್ಮಿಸಬಹುದು. ಆದರೆ ಸರ್ಕಾರ ಇಷ್ಟೊಂದು ದೊಡ್ಡ ಮೊತ್ತವನ್ನು ಅನಗತ್ಯವಾಗಿ ಪೋಲು ಮಾಡುತ್ತಿದೆ. ದುಂದು ವೆಚ್ಚಕ್ಕೆ ಕಡಿವಾಣ ಹಾಕಲು ಬಯಸುವ ಯಾವುದೇ ಸರ್ಕಾರ ಇಂತಹ ಕಟ್ಟಡ ಕಟ್ಟಲು ಮುಂದೆ ಬರುವುದಿಲ್ಲ. ಆದರೆ ಬಿಜೆಪಿ ಸರ್ಕಾರದಿಂದ ಇಂತಹ ನಿಲುವುಗಳನ್ನು ನಿರೀಕ್ಷಿಸುವುದಾದರೂ ಹೇಗೆ?



ಉದ್ಘಾಟನಾ ದಿನ ಸಮೀಪಿಸುತ್ತಿದೆ

ಮೇ 28ರಂದು ನೂತನ ಸಂಸತ್ತು ಉದ್ಘಾಟನೆಗೊಳ್ಳಲಿದೆ ಎಂದು ಘೋಷಿಸಲಾಗಿದೆ. ಹಿಂದುತ್ವದ ಪಿತಾಮಹರಲ್ಲಿ ಒಬ್ಬರಾದ ಸಾವರ್ಕರ್ ಅವರ ಜನ್ಮದಿನ ಅದು. ಈ ದಿನವನ್ನು ಉದ್ದೇಶಪೂರ್ವಕವಾಗಿ ಆಯ್ಕೆ ಮಾಡಲಾಗಿದೆ. ಇದು ಆಕಸ್ಮಿಕವಾಗಿ ಅಲ್ಲ. ಭಾರತದಲ್ಲಿ ಹಿಂದೂ–ಮುಸ್ಲಿಂ ಐಕ್ಯತೆಗೆ ಭಂಗ ತರುವಲ್ಲಿ ಸಾವರ್ಕರ್ ಪ್ರಮುಖ ಪಾತ್ರ ವಹಿಸಿದ್ದರು. ಭಾರತ ಒಂದೇ ರಾಷ್ಟ್ರವಾಗಲಾರದು. ಹಿಂದೂಗಳು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಒಟ್ಟಿಗೆ ಇರಲು ಸಾಧ್ಯವಿಲ್ಲ ಎಂದು ಸಾವರ್ಕರ್ ಬಲವಾಗಿ ಪ್ರತಿಪಾದಿಸಿದರು. 1937 ರಲ್ಲಿ, ಅಹಮದಾಬಾದ್ ಹಿಂದೂ ಮಹಾಸಭಾ ಸಂಘಟನೆಯ ಕಾರ್ಯಕ್ರಮವೊಂದರಲ್ಲಿ ಸಾವರ್ಕರ್ ಅವರು ತಮ್ಮ ಭಾಷಣದಲ್ಲಿ ಈ ಕೆಳಗಿನಂತೆ ಸ್ಪಷ್ಟವಾಗಿ ಹೇಳಿದ್ದಾರೆ:

"ಭಾರತದಲ್ಲಿ ಎರಡು ಸಂಘರ್ಷದ ರಾಷ್ಟ್ರಗಳು ಅಕ್ಕಪಕ್ಕದಲ್ಲಿ ವಾಸಿಸುತ್ತಿವೆ. ಕೆಲವು ಬಾಲಿಶ ರಾಜಕಾರಣಿಗಳು ಭಾರತವು (ಈ ಎರಡು ರಾಷ್ಟ್ರಗಳು) ಒಟ್ಟಿಗೆ ವಾಸಿಸುವ ದೇಶ ಅಥವಾ ಎರಡೂ ರಾಷ್ಟ್ರಗಳು ಒಂದಾಗಬಹುದು ಎಂದು ಭಾವಿಸುತ್ತಾರೆ. ಅದು ದೊಡ್ಡ ತಪ್ಪಾಗುತ್ತದೆ. "

ಅವರು ಮುಂದುವರಿದು ಹೀಗೆ ಹೇಳುತ್ತಾರೆ

"ಭಾರತವನ್ನು ಒಂದೇ ರಾಷ್ಟ್ರ ಅಥವಾ ಏಕತ್ವ ಹೊಂದಿರುವ ರಾಷ್ಟ್ರವೆಂದು ಪರಿಗಣಿಸಲಾಗುವುದಿಲ್ಲ. ಬದಲಾಗಿ ಭಾರತದಲ್ಲಿ ಎರಡು ರಾಷ್ಟ್ರಗಳಿವೆ. ಒಂದು ಮುಸಲ್ಮಾನರ ರಾಷ್ಟ್ರ; ಇನ್ನೊಂದು ಹಿಂದೂ ರಾಷ್ಟ್ರ."

ಇದೇ ಪರಿಕಲ್ಪನೆಯನ್ನು ಜಿನ್ನಾ ನೇತೃತ್ವದ ಮುಸ್ಲಿಂ ಲೀಗ್ ಮುಂದಿಟ್ಟಿತು. ರಾಷ್ಟ್ರ ವಿಭಜನೆಯ ಭೀಕರ ದುರಂತವು ಮುಸ್ಲಿಂ ಮತ್ತು ಹಿಂದೂ ಧರ್ಮದ ವಿಭಜನೆಯ ದೃಷ್ಟಿಕೋನಗಳ ಪರಿಣಾಮವಾಗಿ ಸಂಭವಿಸಿದೆ. ಲಕ್ಷಾಂತರ ಜನರು ನಿರಾಶ್ರಿತರಾದರು. ಲಕ್ಷಾಂತರ ಮಂದಿ ಕೊಲ್ಲಲ್ಪಟ್ಟರು. ಈ ಪರಿಕಲ್ಪನೆಯನ್ನು ಪ್ರತಿಪಾದಿಸಿದ ಸಾವರ್ಕರ್ ಅವರ ಜನ್ಮದಿನದಂದು ನೂತನ ಸಂಸತ್ ಭವನವನ್ನು ಉದ್ಘಾಟಿಸುವುದು ರಾಷ್ಟ್ರೀಯ ಏಕತೆ ಮತ್ತು ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ಹುತಾತ್ಮರಿಗೆ ಮಾಡಿದ ದೊಡ್ಡ ಅವಮಾನವಾಗಿದೆ. ಪ್ರಧಾನಿ ಮೋದಿ ಒಂದೆಡೆ ಹಿರೋಷಿಮಾದಲ್ಲಿ ಗಾಂಧಿ ಪ್ರತಿಮೆಯನ್ನು ಅನಾವರಣಗೊಳಿಸುತ್ತಾರೆ. ಮತ್ತೊಂದೆಡೆ, ಗಾಂಧಿ ಹತ್ಯೆಗೆ ಸಂಚು ರೂಪಿಸಿದ ಆರೋಪ ಹೊತ್ತಿರುವ ಪ್ರಧಾನಿ ಸಾವರ್ಕರ್ ಅವರ ಜನ್ಮದಿನದಂದು ಹೊಸ ಸಂಸತ್ ಭವನವನ್ನು ಉದ್ಘಾಟಿಸುತ್ತಾರೆ. ಎಂತಹ ವಿಪರ್ಯಾಸ ಇದು ಎಂದು ಕೆಲವರು ಆಶ್ಚರ್ಯ ಪಡುತ್ತಾರೆ. ಒತ್ತಾಯಕ್ಕೆ ಮಣಿದು ವಿದೇಶದಲ್ಲಿ ಗಾಂಧಿ ಪ್ರತಿಮೆ ತೆರೆದು ಗಾಂಧೀಜಿಯ ಗುಣಗಾನ ಮಾಡುತ್ತಾರೆ. ನಿಜ ಹೇಳಬೇಕೆಂದರೆ ಇವರಿಗೆ ನಿಜವಾದ ಭಕ್ತಿ ಸಾವರ್ಕರ್ ಮೇಲಿದೆ.

ಕಡೆಗಣಿಸಲ್ಪಟ್ಟ ರಾಷ್ಟ್ರಪತಿ

ಒಂದೆಡೆ ಉದ್ಘಾಟನಾ ದಿನಾಂಕದ ವಿವಾದಗಳ ಚರ್ಚೆಯಾಗುತ್ತಿವೆ. ಇದು ಸಾಲದೆಂಬಂತೆ ಕೇಂದ್ರ ಸರ್ಕಾರವು ಉದ್ಘಾಟನಾ ಸಮಾರಂಭಕ್ಕೆ ರಾಷ್ಟ್ರಪತಿಗಳನ್ನು ಆಹ್ವಾನಿಸಲು ನಿರಾಕರಿಸುವ ಮೂಲಕ ಮತ್ತಷ್ಟು ವಿವಾದವನ್ನು ಹುಟ್ಟುಹಾಕಿದೆ. ಶಿಲಾನ್ಯಾಸ ಸಮಾರಂಭದಲ್ಲಿ ಅಂದಿನ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ಆಹ್ವಾನಿಸಿರಲಿಲ್ಲ. ಈಗ ಮುರ್ಮು ಅವರನ್ನು ಆಹ್ವಾನಿಸಿಲ್ಲ. ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷ ಸೇರಿದಂತೆ ಎಲ್ಲ ವಿರೋಧ ಪಕ್ಷಗಳು ಇದನ್ನು ತೀವ್ರವಾಗಿ ಟೀಕಿಸಿವೆ. ಆದರೆ, ಬಿಜೆಪಿ ಸಚಿವರು ಇದನ್ನು ಸಮರ್ಥಿಸಿಕೊಳ್ಳುತ್ತಾರೆ. ಸಂಸದರಲ್ಲದ ಕಾರಣ ರಾಷ್ಟ್ರಪತಿಗಳಿಗೆ ಆಹ್ವಾನ ನೀಡದಿರುವುದು ತಪ್ಪಲ್ಲ ಎಂದು ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ. ಇದಕ್ಕಿಂತ ಬಾಲಿಶವಾದ ಸಮರ್ಥನೆ ಇರಬಹುದೇ? ಸಂಸತ್ತು ಎಂದರೇನು? ನಮ್ಮ ಸಂವಿಧಾನದ 74(1) ಮತ್ತು 79ನೇ ವಿಧಿಗಳು ಸ್ಪಷ್ಟವಾಗಿ ಹೇಳುತ್ತವೆ.

ರಾಷ್ಟ್ರಪತಿ ಮತ್ತು ಸಂಸತ್ತು

ಇವೆರಡರ ಸಂಯೋಜನೆಯೇ ಸಂಸತ್ತು. ರಾಷ್ಟ್ರಪತಿ ಇಲ್ಲದಿದ್ದರೆ, ಸಂಸತ್ತು ತಲೆಯಿಲ್ಲದ ದೇಹವಾಗಿರುತ್ತದೆ. ಪ್ರತಿ ವರ್ಷದ ಮೊದಲ ಸಭೆಯು ರಾಷ್ಟ್ರಪತಿ ಭಾಷಣದೊಂದಿಗೆ ಪ್ರಾರಂಭವಾಗುತ್ತದೆ. ಮೂರು ರಕ್ಷಣಾ ಪಡೆಗಳ ಸರ್ವೋಚ್ಚ ಕಮಾಂಡರ್ ರಾಷ್ಟ್ರಪತಿಯೂ ಆಗಿರುವುದು ಉಲ್ಲೇಖಾರ್ಹ. ಹೀಗಿರುವಾಗ ಬಿಜೆಪಿ ಸಚಿವರು ಸಂಸದರಲ್ಲ ಎಂಬ ಕಾರಣಕ್ಕೆ ಆಹ್ವಾನ ನೀಡಿಲ್ಲ ಎಂದು ಹೇಳಿರುವುದು ಅಸಂಬದ್ಧ.

ರಾಷ್ಟ್ರಪತಿ ಭಾಷಣವನ್ನು ನಿರ್ಲಕ್ಷಿಸಿದವರು ಈಗ ರಾಷ್ಟ್ರಪತಿ ಮೇಲೆ ಕಾಳಜಿ ಏಕೆ ಎಂದು ಕೆಲ ಸಂಘಿಗಳು ಸಾಮಾಜಿಕ ಜಾಲತಾಣದಲ್ಲಿ ಕೇಳುತ್ತಾರೆ. ಸೋಷಿಯಲ್ ಮೀಡಿಯಾ ಸಂಘಿಗಳು ಯಾವಾಗಲೂ ಸತ್ಯವನ್ನೇನೂ ಹೇಳುವುದಿಲ್ಲ. ವಿಷಯಾಂತರ ಮಾಡುವಲ್ಲಿ ಅವರಿಗೆ ಸರಿಸಾಟಿ ಯಾರೂ ಇಲ್ಲ. ರಾಷ್ಟ್ರಪತಿ ಮಾಡುವ ಭಾಷಣವು ಅವರ ಸ್ವಂತ ಭಾಷಣವಲ್ಲ. ಇದು ಪ್ರಧಾನಿ ನೇತೃತ್ವದ ಸರ್ಕಾರದ ಮಾತುಗಳು. ಅದನ್ನು ನಿರ್ಲಕ್ಷಿಸುವುದು ರಾಷ್ಟ್ರಪತಿಯವರನ್ನು ನಿರ್ಲಕ್ಷಿಸಿದಂತಾಗುವುದಿಲ್ಲ; ಬದಲಿಗೆ ಪ್ರಧಾನಿ ನೇತೃತ್ವದ ಸರ್ಕಾರವನ್ನು – ಅದರ ನೀತಿಗಳನ್ನು ನಿರ್ಲಕ್ಷಿಸುವುದು ಎಂದರ್ಥ. ಇದು ಸಾಮಾಜಿಕ ಜಾಲತಾಣಗಳಲ್ಲಿನ ಸಂಘಿಗಳಿಗೂ ಗೊತ್ತಿದೆ. ಆದಾಗ್ಯೂ, ಅವರು ವಿಷಯಾಂತರ ಮಾಡಿ ಚರ್ಚೆಯನ್ನು ಬೇರೆಡೆ ತಿರುಗಿಸಲು ಪ್ರಯತ್ನಿಸುತ್ತಾರೆ.

ರಾಷ್ಟ್ರಪತಿಯವರನ್ನು ನಿರ್ಲಕ್ಷ್ಯ ಮಾಡುವುದೇಕೆ?

"ಮೋದಿ ಸರ್ಕಾರವು ಕೇವಲ ಚುನಾವಣಾ ಕಾರಣಗಳಿಗಾಗಿ ರಾಷ್ಟ್ರಪತಿ ಹುದ್ದೆಗೆ ಪರಿಶಿಷ್ಟ ಪಂಗಡದಿಂದ ಆಯ್ಕೆ ಮಾಡುತ್ತಿದೆ ಎಂದು ತೋರುತ್ತದೆ." ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಅಭಿಪ್ರಾಯವನ್ನು ದಾಖಲಿಸಿದ್ದಾರೆ. ಈ ಆರೋಪ ನಿಜವಾಗಿದ್ದರೆ, ಇದು ಅತ್ಯಂತ ಖಂಡನೀಯ. 1978 ರಲ್ಲಿ ಶ್ರೀ ಜಗಜೀವನರಾಮ್ ಅವರು ರಕ್ಷಣಾ ಸಚಿವರಾಗಿದ್ದಾಗ ವಾರಣಾಸಿಯಲ್ಲಿ ಸಂಪೂರ್ಣಾನಂದರ ಪ್ರತಿಮೆಯನ್ನು ಉದ್ಘಾಟಿಸಿದರು. ಅವರು ಅಲ್ಲಿಂದ ಹೊರಟ ನಂತರ, ವಿಗ್ರಹವನ್ನು ಶುದ್ಧ ನೀರಿನಿಂದ ತೊಳೆಯಲಾಯಿತು. ಇದು ದೊಡ್ಡ ಖಂಡನೆಗೆ ಕಾರಣವಾಯಿತು. ಜಗಜೀವನರಾಮ್ ಅವರ ಕುಟುಂಬಕ್ಕೆ ಪುರಿ ಜಗನ್ನಾಥ ದೇವಾಲಯಕ್ಕೆ ಬಹಳ ಕಾಲ ಪ್ರವೇಶ ನಿರಾಕರಿಸಲಾಗಿತ್ತು. 2018 ರಲ್ಲಿ, ಪುರಿ ಜಗನ್ನಾಥ ದೇವಸ್ಥಾನದಲ್ಲಿ ಆಗಿನ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಅವರಿಗೂ ಕಹಿ ಅನುಭವವಾಗಿದೆ ಎಂದು ಪತ್ರಿಕೆಗಳು ಖಂಡಿಸಿದವು. ಸಂಸತ್ ಭವನದ ಉದ್ಘಾಟನೆಗೆ ರಾಷ್ಟ್ರಪತಿಗಳನ್ನು ಏಕೆ ಆಹ್ವಾನಿಸಿಲ್ಲ ಎಂಬುದನ್ನು ಬಿಜೆಪಿ ಸರ್ಕಾರ ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ, ಈ ಸಮಾರಂಭವನ್ನು ಬಹಿಷ್ಕರಿಸುವಂತೆ ವಿರೋಧ ಪಕ್ಷಗಳ ಕರೆಯನ್ನು ಸಮರ್ಥಿಸಲಾಗುತ್ತದೆ.

ಕರ್ನಾಟಕ ಚುನಾವಣಾ ಫಲಿತಾಂಶವನ್ನು ಮುಂದಕ್ಕೊಯ್ಯಬೇಕಿದೆ

ಮೋದಿಯವರ ಕಾರ್ಯವೈಖರಿಯನ್ನು ಬಿಜೆಪಿಯಲ್ಲಿ

ಪುಟ 14 ಕ್ಕೆ

“ಪ್ರಜಾಪ್ರಭುತ್ವದ ಅಂತಸ್ಸತ್ವವನ್ನು ಹೊರಹಾಕಿ ಸಂಸತ್ತನ್ನು ಟೊಳ್ಳಾಗಿಸಿರುವಾಗ, ಹೊಸಭವನದಲ್ಲಿ ನಮಗೇನೂ ಮೌಲ್ಯ ಕಾಣುತ್ತಿಲ್ಲ”

ಉದ್ಘಾಟನೆಯನ್ನು ಬಹಿಷ್ಕರಿಸುವ 19 ಪಕ್ಷಗಳ ಜಂಟಿ ಹೇಳಿಕೆ

ಈಗಾಗಲೇ ವರದಿಯಾಗಿರುವಂತೆ, ಹೊಸ ಸಂಸತ್ ಭವನವನ್ನು ರಾಷ್ಟ್ರಾಧ್ಯಕ್ಷರನ್ನು ಬದಿಗೆ ತಳ್ಳಿ ತಾನೇ ಉದ್ಘಾಟಿಸುವ ಪ್ರಧಾನ ಮಂತ್ರಿಗಳ ನಿರ್ಧಾರವನ್ನು ಪ್ರತಿಭಟಿಸಿ ದೇಶದ 19 ವಿಪಕ್ಷಗಳು ಈ ಸಮಾರಂಭವನ್ನು ಬಹಿಷ್ಕರಿಸುವ ತಮ್ಮ ಸಾಮೂಹಿಕ ನಿರ್ಧಾರವನ್ನು ಮೇ 24ರಂದು ಪ್ರಕಟಿಸಿವೆ. ಪ್ರಜಾಪ್ರಭುತ್ವದ ಅಂತಸ್ಸತ್ವವನ್ನು ಹೊರಗೆಳೆದು ಹಾಕಿ ಸಂಸತ್ತನ್ನು ಟೊಳ್ಳಾಗಿಸಿರುವಾಗ, ಹೊಸ ಭವನದಲ್ಲಿ ನಮಗೇನೂ ಮೌಲ್ಯ ಕಾಣುತ್ತಿಲ್ಲ, ಪ್ರಧಾನಿಗಳ ನಿರ್ಧಾರ ಒಂದು ಗಹನವಾದ ಅವಮಾನ ಮಾತ್ರವೇ ಅಲ್ಲ, ನಮ್ಮ ಪ್ರಜಾಪ್ರಭುತ್ವದ ಮೇಲೆ ಒಂದು ನೇರ ಪ್ರಹಾರವಾಗಿದೆ. ಇದಕ್ಕೆ ಅನುರೂಪವಾದ ಪ್ರತಿಸ್ಪಂದನೆ ಅಗತ್ಯವಾಗಿದೆ ಎಂದು ಈ 19 ವಿಪಕ್ಷಗಳು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

ಕಾಂಗ್ರೆಸ್, ಡಿಎಂಕೆ, ಎಎಪಿ, ಸಿಪಿಐ, ಸಿಪಿಐ(ಎಂ), ಆರ್‌ಎಸ್‌ಪಿ, ಎನ್‌ಸಿಪಿ, ಜೆಡಿಯು, ಟಿಎಂಸಿ, ಎಸ್‌ಪಿ, ಆರ್‌ಜೆಡಿ, ಶಿವಸೇನಾ(ಯುಬಿಟಿ), ಐಯುಎಂಎಲ್, ಜೆಎಂಎಂ, ವಿಸಿಕೆ, ಎಂಡಿಎಂಕೆ, ನ್ಯಾಷನಲ್ ಕಾನ್ಫರೆನ್ಸ್, ಕೇರಳ ಕಾಂಗ್ರೆಸ್ (ಮಣಿ) ಮತ್ತು ರಾಷ್ಟ್ರೀಯ ಲೋಕ ದಳ ಈ ಜಂಟಿ ಹೇಳಿಕೆಯನ್ನು ನೀಡಿವೆ. ಈ ಹೇಳಿಕೆಯ ಪೂರ್ಣ ಪಾಠವನ್ನು ಈ ಮುಂದೆ ಕೊಡಲಾಗಿದೆ:

ಹೊಸ ಸಂಸತ್ ಭವನದ ಉದ್ಘಾಟನೆ ಒಂದು ಬಹುಮಹತ್ವದ ಸಂದರ್ಭ. ಸರಕಾರ ಪ್ರಜಾಪ್ರಭುತ್ವಕ್ಕೆ ಬೆದರಿಕೆಯೊಡ್ಡುತ್ತಿದೆ ಎಂಬುದು ನಮ್ಮ ನಂಬಿಕೆಯಾದರೂ, ಮತ್ತು ಹೊಸ ಸಂಸತ್ ಭವನವನ್ನು ನಿರಂಕುಶ ರೀತಿಯಲ್ಲಿ ಕಟ್ಟಿರುವುದರ ಬಗ್ಗೆ ನಮ್ಮಅಸಮ್ಮತಿಯಿದ್ದರೂ, ನಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಈ ಸಂದರ್ಭದಲ್ಲಿ ಪಾಲ್ಗೊಳ್ಳಲು ಸಿದ್ಧರಿದ್ದೆವು. ಆದರೆ, ರಾಷ್ಟ್ರಾಧ್ಯಕ್ಷೆ ಮುರ್ಮುರವರನ್ನು ಸಂಪೂರ್ಣವಾಗಿ ಬದಿಗೆ ತಳ್ಳಿ ಹೊಸ ಸಂಸತ್ ಭವನವನ್ನು ತಾನೇ ಉದ್ಘಾಟಿಸುವ ಪ್ರಧಾನ ಮಂತ್ರಿಗಳ ನಿರ್ಧಾರ ಒಂದು ಗಹನವಾದ ಅವಮಾನ ಮಾತ್ರವೇ ಅಲ್ಲ, ನಮ್ಮ ಪ್ರಜಾಪ್ರಭುತ್ವದ ಮೇಲೆ ಒಂದು ನೇರ ಪ್ರಹಾರವಾಗಿದೆ. ಇದಕ್ಕೆ ಅನುರೂಪವಾದ ಪ್ರತಿಸ್ಪಂದನೆ ಅಗತ್ಯವಾಗಿದೆ.

ಭಾರತದ ಸಂವಿಧಾನ, “ಭಾರತ ಸಂಘಕ್ಕೆ, ರಾಷ್ಟ್ರಪತಿಗಳು ಮತ್ತು ಎರಡು ಸದನಗಳು, ರಾಜ್ಯ ಸಭೆ ಮತ್ತು ಲೋಕಸಭೆಯೆಂಬ ಎರಡು ಸದನಗಳಿರುವ ಒಂದು ಸಂಸತ್ತು ಇರುತ್ತದೆ" ಎಂದು ಕಲಮು 79ರಲ್ಲಿ ಹೇಳುತ್ತದೆ. ರಾಷ್ಟ್ರಪತಿಗಳು ಭಾರತದಲ್ಲಿ ಪ್ರಭುತ್ವದ ಮುಖ್ಯಸ್ಥರಷ್ಟೇ ಅಲ್ಲ, ಸಂಸತ್ತಿನ ಅವಿಭಾಜ್ಯ ಅಂಗ ಕೂಡ. ಅವರು ಸಂಸತ್ತು ಅಧಿವೇಶನ ನಡೆಸುವಂತೆ ಆದೇಶಿಸುತ್ತಾರೆ, ಅದನ್ನು ಮುಂದೂಡುತ್ತಾರೆ ಮತ್ತು ಅದನ್ನುದ್ದೇಶಿಸಿ ಭಾಷಣ ಮಾಡುತ್ತಾರೆ. ಸಂಸತ್ತಿನ ಒಂದು ಶಾಸನ ಅನುಷ್ಠಾನಕ್ಕೆ ಬರಬೇಕಾದರೆ ಅವರು ಅದಕ್ಕೆ ಒಪ್ಪಿಗೆ ಕೊಡಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ, ರಾಷ್ಟ್ರಪತಿಗಳಿಲ್ಲದೆ ಸಂಸತ್ತು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಆದರೂ ಪ್ರಧಾನ ಮಂತ್ರಿಗಳು ಅವರಿಲ್ಲದೆ ಹೊಸ ಸಂಸತ್ ಭವನವನ್ನು ಉದ್ಘಾಟಿಸಲು ನಿರ್ಧರಿಸಿದ್ದಾರೆ. ಈ ಘನತೆಯಿಲ್ಲದ ಕೃತ್ಯ ರಾಷ್ಟ್ರಾಧ್ಯಕ್ಷರ ಉನ್ನತ ಹುದ್ದೆಗೆ ಅವಮಾನ ಮಾಡುತ್ತದೆ ಮತ್ತು ಸಂವಿಧಾನದ ಆಶಯವನ್ನು ಅಕ್ಷರಶಃ ಉಲ್ಲಂಘಿಸುತ್ತದೆ. ರಾಷ್ಟ್ರದ ಮೊದಲ ಮಹಿಳಾ ಆದಿವಾಸಿ ರಾಷ್ಟ್ರಾಧ್ಯಕ್ಷರನ್ನು ಕಂಡು ಎಲ್ಲರನ್ನೂ ಒಳಗೊಳ್ಳುವ ಸಂಭ್ರಮವನ್ನು ಅದು ದುರ್ಬಲಗೊಳಿಸುತ್ತದೆ.

ಪ್ರಧಾನ ಮಂತ್ರಿಗಳಿಗೆ ಪ್ರಜಾಸತ್ತಾತ್ಮಕವಲ್ಲದ ಕೃತ್ಯಗಳು ಹೊಸದೇನಲ್ಲ. ಅವರು ಅವಿಶ್ರಾಂತವಾಗಿ ಸಂಸತ್ತನ್ನು ಟೊಳ್ಳಾಗಿಸಿದ್ದಾರೆ. ವಿಪಕ್ಷಗಳ ಸಂಸತ್ ಸದಸ್ಯರು ಭಾರತದ ಜನತೆಯ ಪ್ರಶ್ನೆಗಳನ್ನು ಎತ್ತಿದಾಗಲೆಲ್ಲ ಅವರನ್ನು ಅನರ್ಹಗೊಳಿಸಿದ್ದಾರೆ, ಅಮಾನತುಗೊಳಿಸಿದ್ದಾರೆ ಮತ್ತು ಅವರ ಮಾತುಗಳು ಕೇಳದಂತೆ ಮಾಡಿದ್ದಾರೆ. ಆಳುವ ಪೀಠಗಳ ಸಂಸತ್ ಸದಸ್ಯರು ಸಂಸತ್ತನ್ನು ಅಸ್ತವ್ಯಸ್ತಗೊಳಿಸಿದ್ದಾರೆ. ಮೂರು ಕೃಷಿ ಕಾಯ್ದೆಗಳು ಸೇರಿದಂತೆ ಹಲವು ವಿವಾದಾತ್ಮಕ ಶಾಸನಗಳನ್ನು ಸುಮಾರಾಗಿ ಚರ್ಚೆಯೇ ಇಲ್ಲದೆ ಅಂಗೀಕಾರಗೊಂಡಿವೆ, ಸಂಸದೀಯ ಸಮಿತಿಗಳನ್ನು ನಿರರ್ಥಕಗೊಳಿಸಲಾಗಿದೆ. ಹೊಸ ಸಂಸತ್ ಭವನವನ್ನು ಶತಮಾನದಲ್ಲಿ ಒಮ್ಮೆ ಬಂದೆರಗುವ ಮಹಾಸೋಂಕಿನ ಸಮಯದಲ್ಲಿ ಭಾರತದ ಜನತೆಯನ್ನು ಮತ್ತು ಯಾರಿಗಾಗಿ ಈ ಭವನವನ್ನು ಕಟ್ಟಲಾಗುತ್ತಿತ್ತೋ ಆ ಸಂಸತ್ ಸದಸ್ಯರೊಡನೆಯೂ ಸಮಾಲೋಚನೆ ನಡೆಸದೆಯೇ ಬಹಳಷ್ಟು ಖರ್ಚು ಮಾಡಿ ಕಟ್ಟಲಾಗಿದೆ.

ಪ್ರಜಾಪ್ರಭುತ್ವದ ಅಂತಸ್ಸತ್ವವನ್ನು ಹೊರಗೆಳೆದು ಹಾಕಿ ಸಂಸತ್ತನ್ನು ಟೊಳ್ಳಾಗಿಸಿರುವಾಗ, ಹೊಸ ಭವನದಲ್ಲಿ ನಮಗೇನೂ ಮೌಲ್ಯ ಕಾಣುತ್ತಿಲ್ಲ. ನಾವು ಹೊಸ ಸಂಸದ್ ಭವನದ ಉದ್ಘಾಟನೆಯನ್ನು ಬಹಿಷ್ಕರಿಸುವ ನಮ್ಮ ಸಾಮೂಹಿಕ ನಿರ್ಧಾರವನ್ನು ಪ್ರಕಟಿಸುತ್ತಿದ್ದೇವೆ. ನಾವು ಈ ಸರ್ವಾಧಿಕಾರಶಾಹೀ ಪ್ರಧಾನ ಮಂತ್ರಿ ಮತ್ತು ಅವರ ಸರಕಾರದ ವಿರುದ್ಧ ಹೋರಾಟವನ್ನು ಕಾಯಾ, ವಾಚಾ ಮತ್ತು ಮನಸಾ ಮುಂದುವರೆಸುತ್ತೇವೆ, ಮತ್ತು ಈ ಸಂದೇಶವನ್ನು ನೇರವಾಗಿ ಭಾರತದ ಜನತೆಗೆ ಒಯ್ಯುತ್ತೇವೆ”


“ವಿಜ್ಞಾನದ ರಕ್ಷಣೆಯು ಪ್ರಜಾಪ್ರಭುತ್ವದ ರಕ್ಷಣೆ”

ಎನ್‌ಸಿಇಆರ್‌ಟಿ ಪುಸ್ತಕ ಪರಿಷ್ಕರಣೆ ಮತ್ತು ಹುಸಿ-ವಿಜ್ಞಾನವನ್ನು ವಿರೋಧಿಸುತ್ತ ವಿಜ್ಞಾನಿಗಳು

ಮೇ 21ರಂದು ನವದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ ದೇಶದ ಪ್ರಸಿದ್ಧವಿಜ್ಞಾನಿಗಳು ಮತ್ತು ಇತರರು ಎನ್‌ಸಿಇಆರ್‌ಟಿ ಪುಸ್ತಕಗಳಲ್ಲಿನ ವಿವಾದಾತ್ಮಕ ಪರಿಷ್ಕರಣೆ, ಕೇಂದ್ರ ಮಂತ್ರಿಗಳ ಹುಸಿ ವಿಜ್ಞಾನದ ಪ್ರಚಾರ ಮತ್ತು ಸಂಶೋಧನಾ ಯೋಜನೆಗಳಿಗೆ ಹಣ ಕಡಿತಗಳನ್ನು ಖಂಡಿಸಿದರು. ವೈಜ್ಞಾನಿಕ ಅನ್ವೇಷಣೆಯು ಗಣರಾಜ್ಯ ಮತ್ತು ಪ್ರಜಾಪ್ರಭುತ್ವದ ಅಡಿಪಾಯಗಳೊಂದಿಗೆ ನಿಕಟ ಸಂಬಂಧ ಹೊಂದಿದೆ ಎಂದು ಸಭೆಯಲ್ಲಿ ಮಾತನಾಡಿದ ಭಾಷಣಕಾರರು ಹೇಳಿದರು.

ಖ್ಯಾತ ಭಾಷಾಶಾಸ್ತ್ರಜ್ಞ ಮತ್ತು ಶಿಕ್ಷಣತಜ್ಞ ಜಿ ಎನ್ ದೇವಿ ಮಾತನಾಡಿ, ದೇಶವು ಸ್ವಾತಂತ್ರ್ಯಾನಂತರ ಇದುವರೆಗೆ ನಾಲ್ಕು ವಿಜ್ಞಾನ ನೀತಿಗಳನ್ನು ಹೊಂದಿದೆ. ಮೊದಲನೆಯದು ವೈಜ್ಞಾನಿಕ ನೀತಿ ನಿರ್ಣಯ, ಇದು ವೈಜ್ಞಾನಿಕ ಮನೋಭಾವಕ್ಕೆ ಅಡಿಪಾಯವನ್ನು ಹಾಕಿತು; ಎರಡನೆಯದು ಇಂಜಿನಿಯರ್‌ಗಳನ್ನು ತರಬೇತುಗೊಳಿಸುವ ಗುರಿಯನ್ನು ಹೊಂದಿತ್ತು, ಮತ್ತು ಮೂರನೆಯದು ಪೇಟೆಂಟ್‌ಗಳ ಸಲ್ಲಿಕೆಯ ಮೇಲೆ ಗಮನ ಕೇಂದ್ರೀಕರಿಸಿತ್ತು. ಸದ್ಯ ನಮ್ಮ ಮಕ್ಕಳು ಧೋರಣೆಯ ಹೆಸರಿನ ಹೊರೆ ಹೊರುತ್ತಿದ್ದಾರೆ ಎಂದರು. ಈಕ್ಷೇತ್ರದಲ್ಲಿ ನಮ್ಮ ಪಯಣದಲ್ಲಿ ಹಲವು ನ್ಯೂನ್ಯತೆಗಳಿದ್ದರೂ, ಅದು ಪ್ರಶ್ನೆ ಕೇಳುವುದನ್ನು ಉತ್ತೇಜಿಸಿದೆ ಮೌಲ್ಯೀಕರಿಸಿದೆ. ಆದರೆ ಪ್ರಸಕ್ತ ಆಳ್ವಿಕೆ ಮತ್ತು ಕೇಂದ್ರ ಮಂತ್ರಿಗಳು ಜನಗಳು ನಿದ್ದೆ ಹೋಗುವಂತೆ ಮಾಡಲು, ಮಂತ್ರಿಗಳು ಮತ್ತು ಸರಕಾರಗಳು ಸುಳ್ಳೇ ಹೇಳುತ್ತಿದ್ದಾರೆ ಎಂದು ತಿಳಿದಿದ್ದರೂ ಯಾವುದಕ್ಕೂ ಪ್ರತಿಕ್ರಿಯಿಸದಂತೆ ಮಾಡಲು ಅರಿವಳಿಕೆಗಳ ರಾಜಕೀಯವನ್ನು ಬಳಸುತ್ತಿದ್ದಾರೆ ಎಂದು ಅವರು ಖಾರವಾಗಿ ಹೇಳಿದರು.

ವೈಚಾರಿಕತೆಗೆ ಅನುವು ಮಾಡಿಕೊಡಲು ಸಂವಿಧಾನವು ಕಟ್ಟಿದ ಎಲ್ಲ ಸಂಸ್ಥೆಗಳನ್ನೂಳಿಸಿದ ನಂತರ,ಈಗ ವಿದ್ಯಾರ್ಥಿಗಳು,ಸಂಶೋಧಕರು ಮತ್ತು ಅಧ್ಯಾಪಕರನ್ನು ಭಯಭೀತಗೊಳಿಸಲಾಗುತ್ತಿದೆ,



ಅವರ ಮೇಲೆ ಹಲ್ಲೆ ಮಾಡಲಾಗುತ್ತಿದೆ, ಸೈನ್ಯವನ್ನು ಬಳಸಲೂ ಹೇಸುತ್ತಿಲ್ಲ. ವಿಜ್ಞಾನಿಗಳು ಇದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಮೂರು ಘಟನೆಗಳನ್ನು ಅವರು ಈ ಸಂದರ್ಭದಲ್ಲಿ ನೆನಪಿಸಿಕೊಂಡರು.

ಮೊದಲನೆಯದಾಗಿ, ಹಲವಾರು ಆದಿವಾಸಿ ಬುಡಕಟ್ಟುಗಳ ಜನಾಂಗೀಯ ಪರಿಶುದ್ಧತೆಯನ್ನು ಪರೀಕ್ಷಿಸುವ ಒಂದು ಪ್ರಾಜೆಕ್ಟಿಗೆ ಸಂಸ್ಕೃತಿ ಸಚಿವಾಲಯವು ಹಣವನ್ನು ನೀಡಿದಾಗ 150 ವಿಜ್ಞಾನಿಗಳು ವಿರೋಧಿಸಿದರು, ಇದು 1930 ರ ದಶಕದಲ್ಲಿ ನಾಜಿ ಜರ್ಮನಿಯಲ್ಲಿ ಹಿಟ್ಲರ್ ಮಾಡಿದ ಪ್ರಯೋಗಗಳ ಪ್ರತಿರೂಪವಾಗಿದೆ ಎಂದು ನೆನಪಿಸಿದರು.

ಎರಡನೆಯ ಪ್ರತಿಭಟನೆ, ಸಂಸ್ಕೃತವು ಪ್ರಪಂಚದ ಇತರ ಭಾಗಗಳಿಗೆ ವಲಸೆ ಹೋದ ಜನರೊಂದಿಗೆ ಪ್ರಯಾಣಿಸಿ ಭಾರತವನ್ನು 'ವಿಶ್ವಗುರು' ಮಾಡಿದೆ ಎಂದು ಪ್ರಸ್ತಾಪಿಸಿದಾಗ ಸಂಭವಿಸಿತು. ತೀರಾ ಇತ್ತೀಚೆಗೆ, ಚಾರ್ಲ್ಸ್ ಡಾರ್ವಿನ್ ಅವರ ವಿಕಾಸ ಸಿದ್ಧಾಂತವನ್ನು ಶಾಲಾ ವಿಜ್ಞಾನ ಪುಸ್ತಕಗಳಿಂದ ಹೊರಗಿಡುವುದರ ವಿರುದ್ಧ ಪ್ರತಿಭಟನೆಗಳು ನಡೆದವು. ಪ್ರಸ್ತುತ, ಡಾರ್ವಿನ್ ಸಿದ್ಧಾಂತದ ಜಾಗದಲ್ಲಿ ಮನುಸ್ಮೃತಿ ಮತ್ತು ಪುರಾಣಗಳಲ್ಲಿನ ವಂಶಾವಳಿಯನ್ನು ಕೂರಿಸುವ ಸನ್ನಾಹ ನಡೆಯುತ್ತಿದೆ. ವಿಜ್ಞಾನವನ್ನು ರಕ್ಷಿಸುವುದು ಎಂದರೆ ಪ್ರಜಾಪ್ರಭುತ್ವವನ್ನು ರಕ್ಷಿಸುವುದು ಎಂದರ್ಥ. ಅದನ್ನು ರಕ್ಷಿಸಲು, ನಾವು ಪ್ರತಿ ವಿಜ್ಞಾನ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಿಗೆ ಹೋಗಿ ಪ್ರಶ್ನೆ ಕೇಳುವ ಕಲ್ಪನೆಯನ್ನು ಬಿತ್ತ ಬೇಕು ಎಂದು ಜಿ.ಎನ್. ದೇವಿ ಹೇಳಿದರು.

ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದ ಭೌತಶಾಸ್ತ್ರಜ್ಞ ಧ್ರುವ ರೈನಾ, ವೈಜ್ಞಾನಿಕ ಪರಿಣತಿಯ ಮೇಲಷ್ಟೇ ಅಲ್ಲ, ಎಲ್ಲಾ ಪರಿಣತಿಗಳ ಮೇಲೆ, ಅದು ಸಾಮಾಜಿಕ ವಿಜ್ಞಾನ ಅಥವಾ ಇತಿಹಾಸವಾಗಿರಬಹುದು, ಹಲ್ಲೆಗಳು ನಡೆಯುತ್ತಿವೆ ಎಂದು ಖೇದ ವ್ಯಕ್ತಪಡಿಸಿದರು. "ಪ್ರಭುತ್ವ ಮತ್ತು ಉದ್ಯಮದೊಂದಿಗಿನ ವಿಜ್ಞಾನದ ಸಂಬಂಧವು ಬದಲಾಗಿದೆ ಎಂದು ನಾವು ಗುರುತಿಸಬೇಕು. ಕಳೆದ ಮೂವತ್ತರಿಂದ ನಲವತ್ತು ವರ್ಷಗಳಿಂದ ಅದು ಕೈಗಾರಿಕಾ ಮತ್ತು ಮಿಲಿಟರಿ ಸಂಕೀರ್ಣ ಅದಕ್ಕೆ ಕಾವು ಕೊಡುತ್ತಿದೆ. ರಾಜ್ಯದೊಂದಿಗಿನ ಅದರ ಸಂಬಂಧವೂ ಬದಲಾಗಿದೆ. ಮನಸ್ಸನ್ನು ನಿಯಂತ್ರಿಸುವ ರಾಜಕಾರಣ ಅಪಾಯ ತಂದೊಡ್ಡುತ್ತದೆ," ಎಂದು ಅವರು ಹೇಳಿದರು. ವಿಜ್ಞಾನವು ವೈಯಕ್ತಿಕ ಉದ್ಯಮವಲ್ಲ ಅದು ಸಾಮೂಹಿಕವಾದದ್ದು ಎಂದು ನಾವು ಅರ್ಥಮಾಡಿಕೊಳ್ಳಬೇಕು ಎಂದು ರೈನಾ ಹೇಳಿದರು.

ಪ್ರಸ್ತುತ ಬಿಕ್ಕಟ್ಟು ವಿಜ್ಞಾನ ಕ್ಷೇತ್ರದಲ್ಲಿ ತೊಡಗಿರುವವರ ನಡುವೆ ಸಂವಾದದ ಕೊರತೆಯನ್ನು ನೆನಪಿಸುತ್ತದೆ ಎಂದು ಹೆಸರಾಂತ ಇತಿಹಾಸಕಾರರಾದ ರೊಮಿಲಾ ಥಾಪರ್ ಹೇಳಿದರು. “ಸಮಾಜ ವಿಜ್ಞಾನಿಗಳು ಒಂದು ನಿರ್ದಿಷ್ಟ ಕುಲದ ಅಥವ ಸಮಾಜದ ಅಧ್ಯಯನವನ್ನು ಏಕೆ ನಡೆಸಬೇಕು ಎಂಬ ಪ್ರಶ್ನೆಯಿಂದಲೇ ಆರಂಭಿಸುತ್ತಾರೆ. ಹೀಗೆ ಒಂದು ಪ್ರಶ್ನೆಯಿಂದಲೇ ಆರಂಭ. ಈಗಿರುವ ಜ್ಞಾನವನ್ನು ಪ್ರಶ್ನಿಸದೆ ಮುನ್ನಡೆಯಲು ಸಾಧ್ಯವಿಲ್ಲ. ಇತಿಹಾಸದಲ್ಲಿ ನಾವೀಗ ಸ್ಥಗಿತತೆಯನ್ನು ಕಾಣುತ್ತಿದ್ದೇವೆ. ವಿದ್ಯಾರ್ಥಿಗಳು ನಿರ್ದಿಷ್ಟ ಪ್ರಶ್ನೆಗಳಿಗೆ ನಿರ್ದಿಷ್ಟ ಉತ್ತರಗಳನ್ನು ಪುನರಾವರ್ತಿಸುತ್ತಾರೆ. ಇದು (ಚರ್ಚಿನ) ಪ್ರಶ್ನೋತ್ತರ ಬೋಧನೆಯಷ್ಟೆ. ಜೆಸುಯೈಟ್‌ಗಳು ಕೂಡ ಇಂತಹ ಬೋಧನೆ ಮತ್ತು ಜ್ಞಾನದ ನಡುವೆ ಭಿನ್ನತೆಯನ್ನು ಗುರುತಿಸುತ್ತಾರೆ. ಆದ್ದರಿಂದ ನಾವು ಪ್ರಶ್ನಿಸುವ ಒಂದು ವ್ಯವಸ್ಥೆಯ ಜ್ಞಾನವನ್ನು ಗಳಿಸಬೇಕಾಗಿದೆ” ಎಂದು ಥಾಪರ್ ಹೇಳಿದರು.



ಮೋದಿ ಅಜೇಯ ಎಂಬ ಇಮೇಜ್ ಛಿದ್ರಗೊಂಡಿದೆ – ಯೆಚೂರಿ

ಇತ್ತೀಚೆಗೆ ಪ್ರಕಟವಾದ ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣಾ ಫಲಿತಾಂಶಗಳು ರಾಷ್ಟ್ರಮಟ್ಟದಲ್ಲಿ ಯಾವ ಪರಿಣಾಮ ಬೀರುತ್ತವೆ ಎಂಬುದನ್ನು ತಕ್ಷಣ ಹೇಳಲು ಸಾಧ್ಯವಿಲ್ಲ. ಆದರೆ, ಬಿಜೆಪಿ ಈ ಚುನಾವಣೆಯನ್ನು 2024ರ ಸಂಸತ್ ಚುನಾವಣೆಗೆ ಮುನ್ನೋಟ ಎಂದು ಹೇಳಿತ್ತು. ಅವರೇ ಮುನ್ನೋಟವಾಗಿ ಮಂಡಿಸಿದ ಈ ಚುನಾವಣೆಯಲ್ಲಿ ಸೋತಿದ್ದಾರೆ. ಬಿಜೆಪಿ ವಿರೋಧಿ ಮತಗಳನ್ನು ಒಟ್ಟುಗೂಡಿಸಲು ಪ್ರಯತ್ನಿಸುತ್ತಿರುವ ಜಾತ್ಯತೀತ–ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳ ಮೇಲೆ ಇದು ಸಕಾರಾತ್ಮಕ ಪರಿಣಾಮ ಬೀರುತ್ತದೆ. ಇದರಿಂದ 2024ರ ಚುನಾವಣೆಯಲ್ಲಿ ಬಿಜೆಪಿಗೆ ಯಾವುದೇ ಲಾಭ ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಸೀತಾರಾಂ ಯೆಚೂರಿ ಹೇಳಿದ್ದಾರೆ.

ಎರಡನೆಯದಾಗಿ, ಮೋದಿ ಚುನಾವಣಾ ಅಜೇಯ ಎಂಬ ಇಮೇಜ್ ಅನ್ನು ಛಿದ್ರಗೊಳಿಸಿದೆ. ವಾಸ್ತವವಾಗಿ, ಈ ಇಮೇಜ್ ಅವರ ಸ್ವಯಂ ಸೃಷ್ಟಿಯಾಗಿದೆ. ಇದಕ್ಕೂ ಹಿಂದಿನ ಸುತ್ತಿನ ಚುನಾವಣೆಯಲ್ಲಿ ಅವರು ಗುಜರಾತ್ ಅನ್ನು ಗೆದ್ದಿದ್ದರೂ, ಅವರು ಈಗಾಗಲೇ ಅಧಿಕಾರದಲ್ಲಿದ್ದ ಹಿಮಾಚಲ ಪ್ರದೇಶವನ್ನು ಕಳೆದುಕೊಂಡರು. ಕಳೆದ 15 ವರ್ಷಗಳಿಂದ ತಮ್ಮ ಹಿಡಿತದಲ್ಲಿದ್ದ ದೆಹಲಿ ಮುನ್ಸಿಪಲ್ ಕೌನ್ಸಿಲ್ ಅನ್ನು ಸಹ ಕಳೆದುಕೊಂಡರು. ಬಹುಮಟ್ಟಿಗೆ ತಿಳಿದಿಲ್ಲದ ಈಶಾನ್ಯ ರಾಜ್ಯಗಳ ಚುನಾವಣೆಗಳಲ್ಲಿ ಅವರು ಅಸಾಧಾರಣ ಶಕ್ತಿಯಾಗಿ ಹೊರಹೊಮ್ಮಿದ್ದೇವೆ ಎಂದು ಬಿಂಬಿಸಿಕೊಂಡರು. ಮೋದಿಯ ಮಹಾನ್ ಶಕ್ತಿಯನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಹೇಳುತ್ತಿದ್ದರು. ಆದರೆ ಈ ಪ್ರದೇಶದ ಮೂರು ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಒಟ್ಟು 180 ಸ್ಥಾನಗಳಲ್ಲಿ 46 ಸ್ಥಾನಗಳನ್ನು ಮಾತ್ರ ಗೆದ್ದಿದೆ. ಅದು ನಾಗಾಲ್ಯಾಂಡ್‌ನಲ್ಲಿ 60 ರಲ್ಲಿ 12 ಸ್ಥಾನಗಳನ್ನು ಮತ್ತು ಮೇಘಾಲಯದಲ್ಲಿ 60 ರಲ್ಲಿ 2 ಸ್ಥಾನಗಳನ್ನು ಗಳಿಸಿತು. ಉಳಿದಂತೆ ಠೇವಣಿಯನ್ನೂ ಕಳೆದುಕೊಂಡಿದೆ. ಹಾಗಾಗಿ ಮಾಧ್ಯಮಗಳು ಪ್ರಚಾರ ಮಾಡುವುದರಿಂದ ಚುನಾವಣಾ ಅಸಂಭವ ಎಂಬುದೇನೂ ಇಲ್ಲ. ಇದೀಗ ಕರ್ನಾಟಕ ಚುನಾವಣಾ ಫಲಿತಾಂಶದೊಂದಿಗೆ ಅದು ಕೂಡ ಬೆಳಕಿಗೆ ಬಂದಿದೆ. ಹಾಗಾಗಿ ಈ ಫಲಿತಾಂಶಗಳು ವಿರೋಧ ಪಕ್ಷಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರಿವೆ. ಎಂದು ಸೀತಾರಾಂ ಯೆಚೂರಿ ಹೇಳಿದ್ದಾರೆ.

ಇತ್ತೀಚೆಗೆ ತಮಿಳುನಾಡಿನ ವಿಲ್ಲುಪುರಂನಲ್ಲಿ ನಡೆದ ಪರಿಶಿಷ್ಟ ಪಂಗಡಗಳ ಸಮಾವೇಶದಲ್ಲಿ ಭಾಗವಹಿಸಲು ಬಂದಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಅವರು 'ತಿಕ್ಕದಿರ್ ದಿನಪತ್ರಿಕೆ'ಗೆ ನೀಡಿದ ಸಂದರ್ಶನದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಹೀಗೆ ಹೇಳಿದ್ದಾರೆ. ಸಂದರ್ಶನದ ಉಳಿದ ಭಾಗ ಇಲ್ಲಿದೆ.

ಜಮ್ಮು ಕಾಶ್ಮೀರದಲ್ಲಿ ಅವರು ಗೆಲ್ಲುವ ಸ್ಥಿತಿಯಲ್ಲಿಲ್ಲ; ಆದ್ದರಿಂದ...

ಪ್ರಶ್ನೆ: ಜಮ್ಮು ಮತ್ತು ಕಾಶ್ಮೀರದಲ್ಲಿ ಈಗ ಏನಾಗುತ್ತಿದೆ? ಅಲ್ಲಿ ವಿಧಾನಸಭೆ ಚುನಾವಣೆ ನಡೆಯುವ ಸಾಧ್ಯತೆ ಇದೆಯೇ?

ಉತ್ತರ: ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಸ್ತುತ ಪರಿಸ್ಥಿತಿ ತುಂಬಾ ಭೀಕರವಾಗಿದೆ. ಅಂದರೆ ಆಡಳಿತ– ನಿಯಮ ಎಂಬುದೇ ಇಲ್ಲ. ಕೇಂದ್ರ ಬಿಜೆಪಿ ಸರ್ಕಾರದ ಏಕೈಕ ಗಮನವಿರುವುದು, ಕಾಶ್ಮೀರ ಕಣಿವೆಯಲ್ಲಿ ಬಹುಸಂಖ್ಯಾತ ಮುಸ್ಲಿಂ ಸಮುದಾಯವನ್ನು ಅಲ್ಪಸಂಖ್ಯಾತರನ್ನಾಗಿ ಪರಿವರ್ತಿಸುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಪ್ರದೇಶದ ಜನಸಂಖ್ಯೆಯನ್ನು ಬದಲಾಯಿಸುವುದರಲ್ಲಿದೆ. ಇದಕ್ಕಾಗಿ ಅವರು ಕಾನೂನುಗಳನ್ನು ತಿದ್ದುಪಡಿ ಮಾಡಿದ್ದಾರೆ. ಸುಧಾರಣಾ ಕ್ರಮಗಳನ್ನು ನಿರ್ಬಂಧಿಸುವುದು ಮಾತ್ರವಲ್ಲ; ವಿದೇಶಿ ಹೂಡಿಕೆದಾರರಿಗೂ ಅಲ್ಲಿ ನೆಲೆಸಲು ಅವಕಾಶ ಕಲ್ಪಿಸಲಾಗಿದೆ. ಮೊದಲು ಆ ರಾಜ್ಯಕ್ಕೆ ಸೇರಿದವರು ಮಾತ್ರ ಅಲ್ಲಿ ಆಸ್ತಿ ಖರೀದಿ ಮತ್ತು ಮಾರಾಟ ಮಾಡುತ್ತಿದ್ದರು. ಈಗ ವಿದೇಶಿಯರಿಗೆ ಆಸ್ತಿ ಖರೀದಿಸಲು ಮತ್ತು ಮಾರಾಟ ಮಾಡಲು ಕಾನೂನುಗಳನ್ನು ತಿದ್ದುಪಡಿ ಮಾಡಲಾಗಿದೆ. ವಾಸ್ತವವಾಗಿ ಜನಸಂಖ್ಯೆಯ ಸ್ವರೂಪವನ್ನು ಬದಲಾಯಿಸುವುದು ಅವರ ಗುರಿಯಾಗಿದೆ. ಅದು ಅವರ ಸಂಪೂರ್ಣ ಗಮನ. ಈ ಉದ್ದೇಶಕ್ಕಾಗಿಯೇ ಮೊದಲಿಗೆ, ವಿಧಾನಸಭಾ ಕ್ಷೇತ್ರಗಳನ್ನು ಪುನರ್ ಸ್ಥಾಪಿಸಲಾಯಿತು. ಈ ಬದಲಾವಣೆಯು ಮುಸ್ಲಿಮೇತರರ ಪಾಲಿನ ಹೆಚ್ಚಳವನ್ನು ಖಚಿತಪಡಿಸಿಕೊಳ್ಳಲು ಸಹ ಉದ್ದೇಶಿಸಲಾಗಿತ್ತು. ಇದನ್ನು ಅವರು ಮಾಡಿದ್ದಾರೆ. ಕಾಶ್ಮೀರದ ಜನರನ್ನು ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ಮರಳಿ ತರುವುದು ಅತ್ಯಂತ ಪ್ರಮುಖ ವಿಷಯ. ಆದರೆ, ಅದಕ್ಕೆ ದಾರಿಯಾಗುವಂತಹ ವಿಧಾನಸಭೆ ಚುನಾವಣೆ ನಡೆಸಲು ಮುಂದಾಗಿಲ್ಲ. ಹಾಗೆ ಮಾಡಲಿಲ್ಲವೆಂದರೆ, ಜನರಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಪರಕೀಯ ಪ್ರವೃತ್ತಿಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ. ಚುನಾವಣೆ ತಮಗೆ ಅನುಕೂಲಕರ ಫಲಿತಾಂಶ ತರುತ್ತದೆ ಎಂಬ ಖಚಿತತೆ ಇಲ್ಲದಿರುವಾಗ ವಿಧಾನಸಭೆ ಚುನಾವಣೆ ನಡೆಸಲು ಮುಂದಾಗಲಿಲ್ಲ.

ವಿಧಾನಸಭೆ ಚುನಾವಣೆಗೆ ಅವರು ಹಾಕಿಕೊಂಡಿದ್ದ ಮೂರೂ ಷರತ್ತುಗಳು ಈಗ ಈಡೇರಿವೆ. ಮೊದಲನೆಯದಾಗಿ ಕ್ಷೇತ್ರಗಳ ಮರುವಿಂಗಡಣೆ ಕಾರ್ಯಗಳು ಪೂರ್ಣಗೊಂಡಿವೆ. ಎರಡನೆಯದು, ಅಂತಿಮ ಮತದಾರರ ಪಟ್ಟಿಯ ಪ್ರಕಟಣೆ. ಅದೂ ಮುಗಿಯಿತು. ಮೂರನೆಯದಾಗಿ, ಯಾವುದೇ ಭಯೋತ್ಪಾದಕ ಚಟುವಟಿಕೆಗಳಿಲ್ಲದೆ ಸಹಜತೆ ನೆಲೆಸಬೇಕು. ಕೇಂದ್ರ ಗೃಹ ಸಚಿವಾಲಯದ ಪ್ರಕಾರ ಅಲ್ಲಿ ಪರಿಸ್ಥಿತಿ ಸಹಜ ಸ್ಥಿತಿಯಲ್ಲಿದೆ. ಹೀಗಿರುವಾಗ ಅವರೇಕೆ ಚುನಾವಣೆ ನಡೆಸಲು ಮುಂದಾಗಲಿಲ್ಲ? ಏಕೆಂದರೆ ಅನಿಶ್ಚಿತತೆ ಇರುವುದು ತುಂಬಾ ಸ್ಪಷ್ಟವಾಗಿದೆ. ಫಲಿತಾಂಶ ಏನಾಗುವುದೋ ಗೊತ್ತಿಲ್ಲದ ಕಾರಣ ಚುನಾವಣೆ ನಡೆಸುವ ಸ್ಥಿತಿಯಲ್ಲಿಲ್ಲ.



ಸ್ವತಂತ್ರ ನ್ಯಾಯಾಂಗ ಪ್ರಜಾಪ್ರಭುತ್ವದ ಬೆನ್ನೆಲುಬು

ಪ್ರಶ್ನೆ: ಕೇಂದ್ರ ಸರ್ಕಾರವು ನ್ಯಾಯಾಂಗದ ದುರುಪಯೋಗದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ: ಇದು ತುಂಬಾ ದುರದೃಷ್ಟಕರ. ಅದನ್ನು ಸಂಪೂರ್ಣವಾಗಿ ದುರುಪಯೋಗ ಪಡಿಸಿಕೊಳ್ಳಲಾಗಿದೆ ಎಂದು ನಾನು ಹೇಳುವುದಿಲ್ಲ. ಆದರೆ ಖಂಡಿತವಾಗಿ, ಆಡಳಿತದ ಕಾರ್ಯನಿರ್ವಾಹಕ ಶಾಖೆಯನ್ನು ಪಾಲಿಸಬೇಕಾದ ಬಲವಂತವನ್ನು ಬಿಕ್ಕಟ್ಟಿನ ನ್ಯಾಯಾಂಗದ ಮೇಲೆ ಹೇರಲಾಗುತ್ತದೆ. ಇದನ್ನು ನ್ಯಾಯಾಂಗ ನೇಮಕಾತಿಗಳ ಮೂಲಕ ಮಾಡಲಾಗುತ್ತದೆ. ಸುಪ್ರೀಂ ಕೋರ್ಟ್‌ನಲ್ಲಿ ಕೊಲಿಜಿಯಂ ಯಾವುದೇ ಶಿಫಾರಸು ಮಾಡಿದರೂ ಬಿಜೆಪಿಗೆ ಅನುಕೂಲಕರವಾದವುಗಳನ್ನು ಮಾತ್ರ ಸರ್ಕಾರ ತಕ್ಷಣವೇ ಒಪ್ಪಿಕೊಳ್ಳುತ್ತದೆ. ಹಾಗಾಗಿ ಅವರು ಇಷ್ಟಪಡದಿದ್ದನ್ನು ಕೆಲವು ರೀತಿಯಲ್ಲಿ ನಿಷ್ಪ್ರಯೋಜಕವಾಗಲು ಕಪಾಟಿನಲ್ಲಿ ಇಡಲಾಗುತ್ತದೆ. ಈ ರೀತಿಯಾಗಿ ನ್ಯಾಯಾಂಗದ ಮೇಲೆ ದಬ್ಬಾಳಿಕೆ ನಡೆಸಲಾಗುತ್ತಿದೆ. ಇದು ಹೆಚ್ಚುತ್ತಿದೆ. ಇದು ಭಾರತದ ಪ್ರಜಾಪ್ರಭುತ್ವಕ್ಕೆ ತುಂಬಾ ಅಪಾಯಕಾರಿ. ಏಕೆಂದರೆ ಸ್ವತಂತ್ರ ನ್ಯಾಯಾಂಗ ಪ್ರಜಾಪ್ರಭುತ್ವದ ಬೆನ್ನೆಲುಬು.

ಅಮೆರಿಕ ಮತ್ತೆ ಶೀತಲ ಸಮರ ಸೃಷ್ಟಿಸುತ್ತಿದೆ

ಪ್ರಶ್ನೆ: ರಷ್ಯಾ–ಉಕ್ರೇನ್ ಯುದ್ಧವು ಅಂತರರಾಷ್ಟ್ರೀಯ ಪರಿಸ್ಥಿತಿಗಳ ಮೇಲೆ ಯಾವ ಪರಿಣಾಮ ಬೀರಿದೆ?

ಉತ್ತರ: ನಾವು ಅಂತಿಮ ಫಲಿತಾಂಶವನ್ನು ನೋಡಬೇಕಾಗಿದೆ. ಆದಾಗ್ಯೂ, ಈಗ ಏನಾಗುತ್ತಿದೆ ಎಂದರೆ, ಅಮೆರಿಕ ಸಾಮ್ರಾಜ್ಯಶಾಹಿಯು ಪ್ರಪಂಚದ ಮೇಲೆ ತನ್ನ ಅಧಿಪತ್ಯವನ್ನು ಕಾಪಾಡಿಕೊಳ್ಳಲು, ಮತ್ತು ಜಗತ್ತನ್ನು ತನ್ನ ನಿಯಂತ್ರಣದಲ್ಲಿ ತರಲು, ರಾಜಕೀಯ ಮತ್ತು ಯುದ್ಧತಂತ್ರದ ಸೇನಾ ಮೈತ್ರಿ ಮೂಲಕ ಬಲಗೊಳ್ಳುತ್ತಿರುವುದು ಸ್ಪಷ್ಟವಾಗಿದೆ. ಮತ್ತೊಂದೆಡೆ, ನ್ಯಾಟೋವನ್ನು ಬಲಪಡಿಸಿ, ಇದು ಯುರೋಪಿಯನ್ ರಾಜಕೀಯವನ್ನು ಪ್ರಭಾವಿಸುವ ಮೂಲಕ ರಷ್ಯಾವನ್ನು ಪ್ರತ್ಯೇಕಿಸಲು ಪ್ರಯತ್ನಿಸುತ್ತದೆ. ಮತ್ತೊಂದೆಡೆ, ಅಮೆರಿಕ ತನ್ನ ಪ್ರಾಬಲ್ಯವನ್ನು ಬಲಪಡಿಸಲು, ಚೀನಾವನ್ನು ಪ್ರತ್ಯೇಕಿಸುವ ಈ ಎಲ್ಲಾ ಕ್ರಮಗಳು ಜಗತ್ತನ್ನು ಮತ್ತೊಂದು ಶೀತಲ ಸಮರಕ್ಕೆ ತಿರುಗಿಸಿವೆ. ವಾಸ್ತವವಾಗಿ ಇದು ತುಂಬಾ ಅಪಾಯಕಾರಿ ಮಾತ್ರವಲ್ಲ, ಜಗತ್ತಿನ ಮೇಲೆ ನಕಾರಾತ್ಮಕ ಪರಿಣಾಮವನ್ನೂ ಬೀರುತ್ತದೆ. ತನ್ನ ಜಾಗತಿಕ ಪ್ರಾಬಲ್ಯವನ್ನು ಬಲಪಡಿಸಲು ಅಮೆರಿಕ ಸಾಮ್ರಾಜ್ಯಶಾಹಿಯು ತೆಗೆದುಕೊಂಡ ಇಂತಹ ಕ್ರಮಗಳು ಜಗತ್ತಿನ ಮೇಲೆ ಪರಿಣಾಮಗಳನ್ನು ಬೀರುವುದರ ಜೊತೆಗೆ, ಜಗತ್ತಿನ ಜನರ ಮೇಲೆ ಮತ್ತಷ್ಟು ಹೆಚ್ಚು ಪ್ರಜಾಪ್ರಭುತ್ವ ವಿರೋಧಿ, ದಬ್ಬಾಳಿಕೆ ಹಾಗೂ ಶೋಷಣೆಗೆ ಕಾರಣವಾಗುತ್ತದೆ.

ಚೀನಾದ ಪ್ರಭಾವದ ಏರಿಕೆ

ಪ್ರಶ್ನೆ: ಚೀನಾದ ಅಂತಾರಾಷ್ಟ್ರೀಯ ಪ್ರಭಾವವು ಭವಿಷ್ಯದ ಮೇಲೆ ಯಾವ ಪರಿಣಾಮ ಬೀರುತ್ತದೆ?

ಉತ್ತರ: ಇದು ಈಗಾಗಲೇ ಸಕಾರಾತ್ಮಕ ಪರಿಣಾಮವನ್ನು ಬೀರಿದೆ. ಚೀನಾದ ಹಸ್ತಕ್ಷೇಪದ ಫಲವಾಗಿ ಈಗ ಇರಾನ್ ಮತ್ತು ಸೌದಿ ಅರೇಬಿಯಾ ಒಂದಾಗಿವೆ. ಇದು ಮಧ್ಯಪ್ರಾಚ್ಯದ ಮೇಲೆ ಆಳವಾದ ಪ್ರಭಾವವನ್ನು ಹೊಂದಿದೆ ಮತ್ತು ಮುಂದುವರಿಯುತ್ತದೆ. ಪಶ್ಚಿಮ ಏಷ್ಯಾದಲ್ಲಿ ಅಮೆರಿಕದ ಒತ್ತಾಯಕ್ಕೆ ಮಣಿದು ಅರಬ್ ಲೀಗ್ ನಿಂದ ಹೊರ ಹಾಕಿದ್ದ ಸಿರಿಯಾ ಇದೀಗ ಮತ್ತೆ ಸೇರ್ಪಡೆಗೊಂಡಿದೆ. ಹಾಗಾಗಿ ಅಮೆರಿಕ ತಾನು ಬಯಸಿದಷ್ಟು ಈ ಪ್ರದೇಶದಲ್ಲಿ ಅಮೆರಿಕ ಪ್ರಾಬಲ್ಯ ಹೊಂದಿಲ್ಲ. ಆದಾಗ್ಯೂ, ಈ ಪ್ರದೇಶಕ್ಕೆ ಇರಾನ್‌ನ ಪ್ರವೇಶವು ಇಸ್ರೇಲ್ ಮತ್ತು ಪ್ಯಾಲೇಸ್ಟಿನಿಯನ್ ಸಮಸ್ಯೆಗಳ ಮೇಲೆ ಪರಿಣಾಮ ಬೀರುತ್ತದೆ. ಮತ್ತು ಇಸ್ರೇಲ್ ಈಗ ದೊಡ್ಡ ಬಿಕ್ಕಟ್ಟಿನಲ್ಲಿದೆ. ನ್ಯಾಯಾಂಗದ ಮೇಲೆ ನೆತನ್ಯಾಹು ಅವರ ಒತ್ತಡದ ವಿರುದ್ಧ ಜನರು ಪ್ರತಿಭಟಿಸುತ್ತಿದ್ದಾರೆ. ಹಾಗಾಗಿ ಸದಾ ಪ್ರಕ್ಷುಬ್ಧ ವಾತಾವರಣದಲ್ಲಿರುವ ಮಧ್ಯಪ್ರಾಚ್ಯವು ಈಗ ಪ್ರಜಾಪ್ರಭುತ್ವೀಕರಣದ ಪ್ರಕ್ರಿಯೆಯಲ್ಲಿದೆ. ಆದ್ದರಿಂದ ಪ್ರತ್ಯೇಕತೆ ಮತ್ತು ಆರ್ಥಿಕ ಅಡೆತಡೆಗಳು ಕಡಿಮೆಯಾಗುವ ಸಾಧ್ಯತೆಯಿದೆ. ಲ್ಯಾಟಿನ್ ಅಮೆರಿಕ ಮತ್ತು ಆಫ್ರಿಕಾದಲ್ಲೂ ಚೀನಾದ ಪ್ರಭಾವ ಹೆಚ್ಚುತ್ತಿದೆ. ಆಫ್ರಿಕಾದ ಹಲವು ದೇಶಗಳು ಅಭೂತಪೂರ್ವ ಮಟ್ಟದ ಬೇಷರತ್ತಾದ ನೆರವನ್ನು ಪಡೆಯುತ್ತಿವೆ. ಈ ಮೊದಲು, ಈ ದೇಶಗಳು ಅಮೆರಿಕದಿಂದ ಕೇವಲ ಷರತ್ತುಬದ್ಧ ನೆರವನ್ನು ಪಡೆದಿದ್ದವು. ಈ ನಿಲುವು, ವಾಸ್ತವವಾಗಿ, ಚೀನಾದ ಪ್ರಭಾವವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಆದ್ದರಿಂದ, ಚೀನಾದ ಹೆಚ್ಚುತ್ತಿರುವ ಜಾಗತಿಕ ಪ್ರಭಾವವು ಅದರ ಸ್ಥಾನಮಾನವನ್ನು ಹೆಚ್ಚಿಸುತ್ತದೆ.

ಭರವಸೆಗಳನ್ನು ಈಡೇರಿಸಲು ಕ್ರಮ ಮುಂದುವರಿಯುತ್ತದೆ

ಪ್ರಶ್ನೆ: ಕೇರಳದಲ್ಲಿ ಎಡ ಪ್ರಜಾಸತ್ತಾತ್ಮಕ ರಂಗದ ಎರಡು ವರ್ಷಗಳ ಸಾಧನೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ: ಅವು ತುಂಬಾ ಧನಾತ್ಮಕ ಸಾಧನೆಗಳು. ಎಡ ಪ್ರಜಾಸತ್ತಾತ್ಮಕ ರಂಗದ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳು ಒಂದೊಂದಾಗಿ

ಪುಟ 14 ಕ್ಕೆ

ಫ್ಯಾಸಿಸ್ಟ್ ಹಿಂದುತ್ವದ ಅಗತ್ಯಗಳಿಗೆ ತಿದ್ದುಪಡಿ

ಪ್ರಶ್ನೆ: ಭಾರತದ ಇತಿಹಾಸವನ್ನು ತಿರುಚಲು CBSE ಪಠ್ಯಕ್ರಮದಲ್ಲಿ ಮಾಡಿದ ಬದಲಾವಣೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ: ಇದು ತುಂಬಾ ನಕಾರಾತ್ಮಕವಾಗಿದೆ. ಅಷ್ಟೇ ಅಲ್ಲ; ಇದು ಭಾರತದ ಇತಿಹಾಸವನ್ನು ಪುನಃ ಬರೆಯುವ ದೊಡ್ಡ ಯೋಜನೆಯ ಭಾಗವಾಗಿದೆ. ಫ್ಯಾಸಿಸ್ಟ್ ಹಿಂದುತ್ವದ ಅಗತ್ಯಗಳಿಗೆ ತಕ್ಕಂತೆ ಇಂತಹ ತಿದ್ದುಪಡಿಗಳನ್ನು ಮಾಡಲಾಗಿದೆ. ಹೀಗೇ ಆಗುತ್ತಿದೆ. ಆದ್ದರಿಂದ ಭವಿಷ್ಯದ ಪೀಳಿಗೆಗೆ ಭಾರತದ ವಿವಿಧ ನಾಗರಿಕತೆಗಳ ಸಮ್ಮಿಲನದ ಇತಿಹಾಸದ ಬಗ್ಗೆ ಅಜ್ಞಾನವಾಗುತ್ತದೆ. ಮತ್ತು ಅದು ಕೂಡ ಒಂದೇ ಧರ್ಮ, ಹಿಂದೂ ಧರ್ಮವನ್ನು ಸಾಮಾನ್ಯವಾಗಿ ಐತಿಹಾಸಿಕ ಕಾದಂಬರಿಗಳ ಮೂಲಕ ಪ್ರಸ್ತುತಪಡಿಸುತ್ತದೆ. ಅದು ನಿಜವಾದ ಇತಿಹಾಸವಲ್ಲ. ಈಗ ಆಗುತ್ತಿರುವುದು ಇದೇ. ಆದ್ದರಿಂದ, ಮೊದಲ ಅಂಶವೆಂದರೆ ಈ ಪಠ್ಯಕ್ರಮದ ಬದಲಾವಣೆಗಳು ಭಾರತೀಯ ಇತಿಹಾಸವನ್ನು ಅವರ ಫ್ಯಾಸಿಸ್ಟ್ ಅಜೆಂಡಾಕ್ಕೆ ಸರಿಹೊಂದುವಂತೆ ಪುನಃ ಬರೆಯಲು ಉದ್ದೇಶಿಸಲಾಗಿದೆ. ಎರಡನೆಯದಾಗಿ, ಇತಿಹಾಸದ ಅಧ್ಯಯನವು ಕಾರಣ ಮತ್ತು ಸತ್ಯದ ಮೇಲೆ ದಾಳಿ ಮಾಡುತ್ತದೆ. ಆದ್ದರಿಂದ, ಇದು ಕಾರಣ ಮತ್ತು ಸತ್ಯದ ಮೇಲಿನ ದಾಳಿಯಾಗಿದೆ. ಹಾಗಾಗಿ ಇದು ಅವೈಜ್ಞಾನಿಕವಾಗಿದೆ. ಮೂಲತಃ ಇದು ವೈಜ್ಞಾನಿಕ ಪ್ರಜ್ಞೆಯ ಮೇಲಿನ ದಾಳಿಯಾಗಿದೆ. ಡಾರ್ವಿನ್ ಕುರಿತಾದ ಪಾಠಗಳನ್ನು ಸಹ ತೆಗೆದುಹಾಕಲಾಗಿದೆ. ಇದು ಸ್ಪಷ್ಟವಾಗಿ ವೈಜ್ಞಾನಿಕ ಸಂವೇದನೆ ಮತ್ತು ವೈಜ್ಞಾನಿಕ ವಿಧಾನದ ಮೇಲಿನ ದಾಳಿಯಾಗಿದೆ.

2000 ರೂ. ನೋಟಿಗೆ ವಿದಾಯ.....ತಪ್ಪೊಪ್ಪಿಗೆ ?

2000ರೂ. ಮೌಲ್ಯದ ನೋಟು, ಸುಮಾರು ಆರೂವರೆ ವರ್ಷಗಳ ನಂತರ ಕೊನೆಯುಸಿರೆಳೆಯಲಾರಂಭಿಸಿದೆ. ಇದು ಭಾರತದ ರೂಪಾಯಿಗಳಲ್ಲಿ ಅತ್ಯಂತ ಅಲ್ಪಾಯುಷಿ ನೋಟು ಎನ್ನಲಾಗುತ್ತಿದೆ. 2016 ನವಂಬರ್‌ನಲ್ಲಿ 500 ಮತ್ತು 1000ದ ನೋಟುಗಳನ್ನು ಇದ್ದಕ್ಕಿದ್ದಂತೆ ರದ್ದು ಮಾಡಿ 2000ರ ನೋಟನ್ನು ತಂದಾಗ ಹಣಕಾಸು ಇಲಾಖೆಯ ಕಾರ್ಯದರ್ಶಿಯಾಗಿದ್ದವರೇ ಈಗ ರಿಝರ್ವ್ ಬ್ಯಾಂಕಿನ ಗವರ್ನರ್ ಆಗಿ ಈ ನೋಟನ್ನು ಹಿಂತೆಗೆದುಕೊಳ್ಳುತ್ತಿರುವ ಪ್ರಕಟಣೆ ಮಾಡಿದ್ದಾರೆ. ಆದರೆ ಆಗ ಇದ್ದ ಅಸ್ಪಷ್ಟತೆಯೇ ಈಗಲೂ ಇದೆ ಎಂದು ಕೆಲವು ಟಿಪ್ಪಣಿಗಾರರು ಹೇಳುತ್ತಿದ್ದಾರೆ. ಏಕೆಂದರೆ ನವಂಬರ್ 2016 ರಲ್ಲಿ 500/1000ದ ನೋಟುಗಳನ್ನು ಇದ್ದಕ್ಕಿದ್ದಂತೆ ಮೌಲ್ಯಹೀನಗೊಳಿಸಿದಂತೆ ಈಗ ಮಾಡಿಲ್ಲ, ಸಪ್ಟಂಬರ್ 30ರ ವರೆಗೆ ಅದು ಕಾನೂನು ಬದ್ಧವಾಗಿರುತ್ತದೆ, ಆಮೇಲೆ ಅದರ ಗತಿಯೇನು ಎಂಬ ಬಗ್ಗೆ ಮಾತ್ರ ಅವರು ಸ್ಪಷ್ಟವಾಗಿ ಹೇಳಿಲ್ಲ.

ಈ ಕ್ರಮಕ್ಕೆ ಅವರು ಕೊಟ್ಟ ಕಾರಣ, ಇದು ರಿಝರ್ವ್ ಬ್ಯಾಂಕಿನ 'ಕ್ಲೀನ್ ನೋಟ್ ಪಾಲಿಸಿ' ಅಂದರೆ ನೋಟುಗಳ ಸ್ವಚ್ಛತೆ ಇಳಿಮುಖವಾದಾಗ ಅದನ್ನು ಹಿಂತೆಗೆದುಕೊಳ್ಳುವ ಕ್ರಮದ ಪ್ರಕಾರ ಹೀಗೆ ಮಾಡಲಾಗಿದೆ ಎಂದು. ಆದರೆ ಇದೊಂದು ಸಮರ್ಥನೆ ಎಂದು ಯಾರೂ ನಂಬಿಲ್ಲ. ಏಕೆಂದರೆ ಈ ಪಾಲಿಸಿಯ ಪ್ರಕಾರ ಅದನ್ನು ಹಿಂತೆಗೆದುಕೊಂಡು ಅದೇ ಮೌಲ್ಯದ ಹೊಸ ನೋಟುಗಳನ್ನು ಚಲಾವಣೆಗೆ ಕೊಡಲಾಗುತ್ತದೆ, ಈಗ ಹಾಗಾಗಿಲ್ಲ.

ಸರಕಾರದ ಬೆಂಬಲಿಗರು ಈ ಕ್ರಮವನ್ನು ಸಮರ್ಥಿಸಿಕೊಳ್ಳುತ್ತ ಇದು ಕಪ್ಪು ಹಣವನ್ನು ಹೊರತೆಗೆಯುವ ಇನ್ನೊಂದು ಕ್ರಮ ಎಂದು ಹೇಳುತ್ತಿದ್ದಾರೆ. ಅದರೆ ವಾಸ್ತವವಾಗಿ ಈ ಮೂಲಕ 2016 ನೋಟು ರದ್ಧತಿ ಕ್ರಮ ಕಪ್ಪು ಹಣವನ್ನು ಹೊರತೆಗೆಯುವಲ್ಲಿ ಸಂಪೂರ್ಣವಾಗಿ ಸೋತಿದೆ ಎಂಬುದನ್ನು ರಿಝರ್ವ್ ಬ್ಯಾಂಕ್ ಮಾತ್ರವಲ್ಲ ಈಗ ಸರಕಾರವೂ ಒಪ್ಪಿಕೊಂಡಂತಾಗಿದೆ ಎಂದು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ.

ಈ ವಿಫಲತೆ ಸಹಜವೇ. ಏಕೆಂದರೆ ಕಪ್ಪು ಹಣ ನೋಟುಗಳಲ್ಲೇ ಇರುತ್ತದೆ ಎಂಬ ಹಲವರ ನಂಬಿಕೆ ನಿಜವಾಗಿದ್ದರೆ, ವಾಸ್ತವವಾಗಿ ದ್ವಿಗುಣ ಮೌಲ್ಯದ ನೋಟು ಅದಕ್ಕೆ ಇನ್ನಷ್ಟು ಅವಕಾಶ ಕಲ್ಪಿಸುತ್ತದೆ ಎಂದೂ ನಿರೀಕ್ಷಿಸಬೇಕಾಗುತ್ತದೆ.

ಆರ್‌ಬಿಐ ಗವರ್ನರ್ ಈ ಕ್ರಮಕ್ಕೆ ಮತ್ತೊಂದು ಕಾರಣವನ್ನೂ ಕೊಟ್ಟಿದ್ದಾರೆ. ನೋಟು ರದ್ಧತಿ ಮಾಡಿದಾಗ ಹಣದ ಚಲಾವಣೆಯಲ್ಲಿ ಉಂಟಾದ ಭಾರೀ ನಿರ್ವಾತವನ್ನು ತ್ವರಿತವಾಗಿ ತುಂಬಬೇಕಾಗಿತ್ತು. ಆದ್ದರಿಂದ ಮೊದಲಿಗಿಂತ ಹೆಚ್ಚು ಮೌಲ್ಯದ ನೋಟುಗಳನ್ನು ಮುದ್ರಿಸಬೇಕಾಯಿತು ಎಂದು. ಆದರೆ ಇದು ನಮ್ಮ ಆಳುವವರ ಮತ್ತು ಅಧಿಕಾರಶಾಹಿಯ ಅಸಾಮರ್ಥ್ಯದ ಬಗ್ಗೆ ಬಹಳಷ್ಟು ಹೇಳುತ್ತದೆ, ಒಟ್ಟಿನಲ್ಲಿ ನೋಟು ರದ್ಧತಿಯ ತುಘಲಕ್ ಕ್ರಮದ ದುಷ್ಪರಿಣಾಮ ಇನ್ನೂ ನಮ್ಮ ಅರ್ಥವ್ಯವಸ್ಥೆಯನ್ನು ಬಾಧಿಸುತ್ತಿದೆ ಎಂಬುದನ್ನು ಈ ಕ್ರಮ ಮತ್ತೊಮ್ಮೆ ಸಾಬೀತು ಪಡಿಸಿದೆ ಎಂದು ಪರಿಣಿತರು ಹೇಳುತ್ತಿದ್ದಾರೆ.

1000 ದ ನೋಟಿನ ಬದಲು 2000ದ ನೊಟನ್ನು ತಂದಾಗ ಅದಕ್ಕೆ 'ಗೋದೀಮೀಡಿಯಾ'ದ ಮಂದಿ ಒಂದು ಅಪೂರ್ವ ಕಾರಣ ಕೊಟ್ಟಿದ್ದರು. ಇದರಲ್ಲಿ ಚಿಪ್ ಅಡಗಿಸಿಡಲಾಗಿದೆಯಾದ್ದರಿಂದ ಇದನ್ನು ಎಲ್ಲಿ ಪೇರಿಸಿಟ್ಟರೂ ಉಪಗ್ರಹದ ಮೂಲಕ ಪತ್ತೆಯಾಗುತ್ತದೆ ಎಂದು! ಆದರೆ ಚಿಪ್ ಅದರಲ್ಲಿಟ್ಟಿರಲಿಲ್ಲ, ಬದಲಿಗೆ ಈ ಮಂದಿಯ ಮೆದುಳಿಗೆ ಹಾಕಲಾಗಿತ್ತು ಎಂದೀಗ ತಿಳಿದು ಬರುತ್ತಿದೆಯೇ?



"ಕಟ್ಟೆಚ್ಚರ , ಭಾಯ್. ಈ ಆಂಕರ್ ಕಳೆದ ಆರು ಗಂಟೆಯಿಂದ ವಿಶ್ವಗುರು ಎಂದು ಹೇಳಿಲ್ಲ!"

ಕೃಪೆ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್

"ವಾಕ್ ಸ್ವಾತಂತ್ರ್ಯವನ್ನು ರಕ್ಷಿಸುತ್ತೇವೆ, ಹಾಗಂತ ನೀವು ಒಂದು ಸಮುದಾಯವನ್ನು ನಿಂದಿಸಲು ಸಾಧ್ಯವಿಲ್ಲ": 'ದಿ ಕೇರಳ ಸ್ಟೋರಿ' ನಿಷೇಧಕ್ಕೆ ತಡೆಯಾಜ್ಞೆ ನೀಡುತ್ತ ಸುಪ್ರಿಂ ಕೋರ್ಟ್

ಸುಪ್ರಿಂ ಕೋರ್ಟ್ ಪೀಠವು 'ದಿ ಕೇರಳ ಸ್ಟೋರಿ' ಚಲನಚಿತ್ರದ ಮೇಲೆ ಪಶ್ಚಿಮ ಬಂಗಾಳ ಸರಕಾರದ ನಿಷೇಧಕ್ಕೆ ತಡೆಯಾಜ್ಞೆ ನೀಡಿದೆ. ಆದರೆ ಅದೇ ವೇಳೆಗೆ, ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಮತ್ತು ನ್ಯಾಯಮೂರ್ತಿ ಜೆ.ಬಿ. ಪರ್ಡಿವಾಲಾ ಅವರನ್ನೊಳಗೊಂಡ ಪೀಠ, ನಿಷೇಧದ ವಿರುದ್ಧದ ಮನವಿಯನ್ನು ಪರಿಗಣಿಸುವಾಗ ಮೌಖಿಕವಾಗಿ "ನಾವಂತೂ ವಾಕ್ ಸ್ವಾತಂತ್ರ್ಯವನ್ನು ರಕ್ಷಿಸುತ್ತೇವೆ, ಹಾಗಂತ ನೀವು ಒಂದು ಸಮುದಾಯವನ್ನು ನಿಂದಿಸಲು ಸಾಧ್ಯವಿಲ್ಲ" ಎಂದು ನಿಷೇಧವನ್ನು ತೆಗೆಯಬೇಕೆಂದು ಮನವಿ ಮಾಡಿರುವ ಅರ್ಜಿದಾರರಿಗೆ ಮೌಖಿಕವಾಗಿ ಹೇಳಿರುವುದಾಗಿ ವರದಿಯಾಗಿದೆ (ಸಬ್‌ರಂಗ್, ಮೇ 19)

ಪಶ್ಚಿಮ ಬಂಗಾಳದಲ್ಲಿ ಚಲನಚಿತ್ರದ ಮೇಲಿನ ನಿಷೇಧವನ್ನು ತೆಗೆದುಹಾಕಿದ ಪೀಠ, ತಮಿಳುನಾಡಿನಲ್ಲಿ ಯಾವುದೇ ನೇರ ಅಥವ ಪರೋಕ್ಷ ನಿಷೇಧ ಇಲ್ಲ ಎಂದು ಅಲ್ಲಿಯ ಸರಕಾರದ ಪರವಾಗಿ ಸ್ಪಷ್ಟನೆ ನೀಡಿದ್ದ ಹಿನ್ನೆಲೆಯಲ್ಲಿ ಅಲ್ಲಿ ಸಿನೆಮಾ ಥಿಯೇಟರುಗಳಿಗೆ ಮತ್ತು ಸಿನೆಮಾ ನೋಡಲು ಹೋಗುವವರಿಗೆ ರಕ್ಷಣೆ ಕೊಡಬೇಕು ಎಂದೂ ಹೇಳಿದೆ.

ನಿಷೇಧ ತೆಗೆಯಬೇಕೆಂಬಚಿತ್ರ ನಿರ್ಮಾಪಕರ ಅರ್ಜಿಯ ವಿಚಾರಣೆಯ ವೇಳೆಯಲ್ಲಿ, 32,000 ಹುಡುಗಿಯರನ್ನು ಮತಾಂತರಗೊಳಿಸಲಾಗಿದೆ ಎಂದು ಈ ಚಿತ್ರದಲ್ಲಿ ಹೇಳಿರುವ ಬಗ್ಗೆ ಕಳವಳ ವ್ಯಕ್ತಪಡಿಸುತ್ತ ಇದು ಸತ್ಯಸಂಗತಿಗಳನ್ನು ವಿರೂಪಗೊಳಿಸಿರುವ ವಿಷಯ ಎಂದು ನ್ಯಾಯಪೀಠ ಹೇಳಿರುವುದಾಗಿ ವರದಿಯಾಗಿದೆ.

ಈ ಮೊದಲು ಕೇರಳ ಹೈಕೋರ್ಟ್‌ನಲ್ಲಿ ಈ ಬಗ್ಗೆ ನಡೆದ ವಿಚಾರಣೆಯ ಪರಿಣಾಮವಾಗಿ, '32,000 ಹುಡುಗಿಯರನ್ನು ಇಸ್ಲಾಂಗೆ ಮತಾಂತರಿಸಲಾಗಿದೆ ಮತ್ತು ಐಸಿಸ್‌ಗೆ ಸೇರ್ಪಡೆಗೊಳಿಸಲಾಗಿದೆ' ಎಂದು ಅದುವರೆಗೆ ಈ ಚಿತ್ರದ ಟೀಸರ್(ಜಾಹೀರಾತು)ಗಳಲ್ಲಿ ಹೇಳಿಕೊಂಡು ಬಂದದ್ದನ್ನು ತೆಗೆಯಲಾಯಿತು. ಆದರೆ, 32000 ಮಹಿಳೆಯರು ಕಾಣೆಯಾಗಿದ್ದಾರೆ ಮತ್ತು ಇಸ್ಲಾಂಗೆ ಮತಾಂತರಗೊಳಿಸಿ ಅವರನ್ನು ಸಿರಿಯಾಕ್ಕೆ ಕಳುಹಿಸಲಾಗಿದೆ ಎಂದು ಸಿನಿಮಾದಲ್ಲಿಯೇ ಹೇಳಿರುವಾಗ, ಅದನ್ನು ಜಾಹೀರಾತಿನಿಂದ ತೆಗೆದುಹಾಕುವುದರಲ್ಲಿ ಯಾವುದೇ ಅರ್ಥವಿಲ್ಲ ಎಂದು ಪಶ್ಚಿಮ ಬಂಗಾಳ ರಾಜ್ಯದ ಪರ ವಾದ ಮಂಡಿಸಿದ ಹಿರಿಯ ವಕೀಲ ಎ.ಎಂ. ಸಿಂಘ್ವಿ, ವಾದಿಸಿದರು ಎಂದು ವರದಿಯಾಗಿದೆ.

32,000 ಅಂಕಿಯ ಬಗ್ಗೆ ಚಲನಚಿತ್ರ ನಿರ್ಮಾಪಕರ ಪರವಾಗಿ ಹಾಜರಾದ ಹಿರಿಯ ವಕೀಲ ಹರೀಶ್ ಸಾಳ್ವೆ ಅವರನ್ನು ಕೇಳಿದಾಗ, ಸಾಳ್ವೆಯವರು ಮೇ 20ರ ಸಂಜೆ 5 ಗಂಟೆ ಒಳಗೆ, ಚಿತ್ರದಲ್ಲಿ "ಮತಾಂತರಗೊಳಿಸಿದವರ ಸಂಖ್ಯೆ 32000 ಅಥವಾ ಯಾವುದೇ ಇತರ ಅಂಕಿಯನ್ನು ಸಮರ್ಥಿಸಲು ಯಾವುದೇ ಪ್ರಮಾಣಿತ ದತ್ತಾಂಶ ಇಲ್ಲ; ಚಲನಚಿತ್ರವು ಈ ವಿಷಯದ ಒಂದು ಕಾಲ್ಪನಿಕ ಆವೃತ್ತಿಯನ್ನು ಪ್ರತಿನಿಧಿಸುತ್ತದೆ" ಎಂಬ ನಿರಾಕರಣೆ ಘೋಷಣೆಯನ್ನು ಸೇರಿಸಲು ಒಪ್ಪಿಕೊಂಡರು:

ಇದಕ್ಕೆ ಮೊದಲು, ಈ ಚಿತ್ರದಲ್ಲಿ ಅನೇಕ ಆಕ್ಷೇಪಾರ್ಹ ಟಿಪ್ಪಣಿಗಳಿರುವುದನ್ನು ಜಮಿಯತ್ ಉಲೇಮಾ–ಇ–ಹಿಂದ್ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಪೀಠದ ಗಮನಕ್ಕೆ ತಂದರು.

ಹಿರಿಯ ವಕೀಲ ಹುಝೆಫಾ ಅಹ್ಮದಿ ಸಹ "ನಂಬಿಕೆ ಇಲ್ಲದವರ ವಿರುದ್ಧ ಹೋರಾಡಿ" ಎಂದು ಒಬ್ಬ ಮುಸ್ಲಿಮ್ ವ್ಯಕ್ತಿ ಹೇಳುವ ಮೂಲಕವೇ ಚಲನಚಿತ್ರವು ಪ್ರಾರಂಭವಾಗುತ್ತದೆ ಎನ್ನುತ್ತ ಚಿತ್ರದ ಕೆಲವು ಆಯ್ದ ಟಿಪ್ಪಣಿಗಳನ್ನು ನ್ಯಾಯಪೀಠದ ಎದುರು ಓದಿದರು. ಅಂತಿಮ ತೀರ್ಮಾನಕ್ಕೆ ಬರಲು ಪೀಠವು ಚಲನಚಿತ್ರವನ್ನು ವೀಕ್ಷಿಸಬೇಕು ಎಂದು ಅವರು ಆಗ್ರಹಿಸಿದರು. ಈ ಚಿತ್ರವು ಹುಟ್ಟಿಹಾಕುವ ದ್ವೇಷದ ಪರಿಣಾಮವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.... ಒಟಿಟಿ ವೇದಿಕೆಗಳಲ್ಲಿ ಚಲನಚಿತ್ರವನ್ನು ಪ್ರದರ್ಶಿಸುವ ಬಗ್ಗೆಯೂ ಸಹ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ" ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ. ಚಿತ್ರವು ಮಾಡುವ ಹಾನಿಯು ದೈಹಿಕ ಹಿಂಸೆಗಷ್ಟೇ ಕಾರಣವಾಗುವುದಿಲ್ಲ, ಅದು ಸಮುದಾಯದ ವಿರುದ್ಧ ಅಪಾರ ಪ್ರಮಾಣದ ದ್ವೇಷವನ್ನು ಹುಟ್ಟಿ ಹಾಕುತ್ತದೆ ಎಂದು ಅವರು ಹೇಳಿದರು.

ಮಧ್ಯಂತರ ಆದೇಶಗಳ ನಂತರ ಈ ಬಗ್ಗೆ ವಿಚಾರಣೆಯನ್ನು ಕೋರ್ಟ್ ರಜಾದಿನಗಳ ನಂತರ ಜುಲೈಗೆ ಮುಂದೂಡಲಾಯಿತು.

ನಿಜವಾದ ಕೇರಳ ಸ್ಟೋರಿ–'2018'ರ ಭಾರೀ ಯಶಸ್ಸು

ಇದಾದ ನಂತರ ಈಗ ಇನ್ನೊಂದು ಸುದ್ದಿ ಬಂದಿದೆ. ಇದೇ ವೇಳೆಗೆ ಕೇರಳದಲ್ಲಿ ಬಿಡುಗಡೆಯಾದ '2018' ಸಿನೆಮಾ ಅಲ್ಲಿ ಮಾತ್ರವಲ್ಲ ಬೆಂಗಳೂರಿನಲ್ಲೂ ಭಾರಿ ಯಶಸ್ಸು ಗಳಿಸಿದೆ, 2000ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆ ಎಂದು ವರದಿಯಾಗಿದೆ. ಇದು 2018ರಲ್ಲಿ ಕೇರಳವನ್ನು ತಲ್ಲಣಗೊಳಿಸಿದ ಭಾರೀ ಪ್ರವಾಹದ ಕುರಿತಾದ ಸಿನೆಮಾ. ದಿ ಕೇರಳ ಸ್ಟೋರಿಗೆ ತದ್ವಿರುದ್ಧವಾಗಿ, ಈ ಸಿನೆಮಾ ನೈಸರ್ಗಿಕ ವಿಪತ್ತಿನ ವೇಳೆಯಲ್ಲಿ ಕೇರಳದ ಜನತೆ ಮೆರೆದ ಐಕ್ಯತೆಯನ್ನು ಕಲಾತ್ಮಕವಾಗಿ, ಪ್ರಚಾರದ ಅಬ್ಬರವಿಲ್ಲದೆ ಪ್ರಸ್ತುತ ಪಡಿಸಿದೆ, ವಾಸ್ತವಾಗಿ ಇದೇ ನಿಜವಾದ 'ಕೇರಳ ಸ್ಟೋರಿ' ಎಂದು ಸಿನೆಮಾ ವೀಕ್ಷಕರು ಹೇಳುತ್ತಿದ್ದಾರಂತೆ. ಕರ್ನಾಟಕದ ಜನತೆ ಈ ಮೊದಲೇ 'ದಿ ಕೇರಳ ಸ್ಟೋರಿ'ಯನ್ನು ನೋಡಬೇಕೆಂಬಪ್ರಧಾನಿಗಳ ಬಲವಾದ ಶಿಫಾರಸನ್ನು ತಿರಸ್ಕರಿಸಿದ್ದರಿಂದ ಅದರ ಬೆಂಬಲಿಗರು ಅದನ್ನು ಬಲವಂತದಿಂದ ಪ್ರದರ್ಶಿಸಲು ಪ್ರಯತ್ನಿಸಿದರು ಎಂದು ಅಲ್ಲಲ್ಲಿ ವರದಿಯಾಗಿದೆ.

'ದಿ ಕೇರಳ ಸ್ಟೋರಿ'ಯ ಇಂತಹ ಬಲವಂತದ ಪುಕ್ಕಟೆ ಪ್ರಾಯೋಜಿತ ಪ್ರದರ್ಶನಗಳ ಹೊರತಾಗಿಯೂ '2018' ಮಲೆಯಾಳಂ ನಲ್ಲಿ 100 ಕೋಟಿ ರೂ.ಗಳ ಕಲೆಕ್ಷನ್ ದಾಟಿದ ಮೂರನೇ ಸಿನೆಮಾವಾಗಿದೆ. ಮೇ 26ರಂದು ಇದರ ಹಿಂದಿ, ತೆಲುಗು ಮತ್ತು ತಮಿಳು ಆವೃತ್ತಿಗಳೂ ಬಿಡುಗಡೆಯಾಗುತ್ತಿವೆಯಂತೆ.


ಸರಕಾರದ ನೀತಿಗಳನ್ನು ಪ್ರಶ್ನಿಸುವವರ ಬಾಯಿ ಮುಚ್ಚಿಸಲು ಪಿಎಂಎಲ್‌ಎ ದುರುಪಯೋಗ ನಿಲ್ಲಿಸಿ: ವಿದ್ವಾಂಸರು, ಕಾರ್ಯಕರ್ತರುಗಳ ಬಹಿರಂಗ ಪತ್ರ

ಯುಎಪಿಎ ನಂತರ ಈಗ ಪಿಎಂಎಲ್‌ಎ (ಕಪ್ಪು ಹಣವನ್ನು ಹಣವನ್ನು ಸ್ವಚ್ಛಗೊಳಿಸುವದನ್ನು ತಡೆಯುವ ಕಾಯ್ದೆ)ಉ ವ್ಯಾಪಕ ದುರುಪಯೋಗ ನಡೆಯುತ್ತಿದೆ. ಪ್ರಜಾಸತ್ತಾತ್ಮಕ ಹಕ್ಕುಗಳ ಕಾರ್ಯಕರ್ತರು ಸಾಂವಿಧಾನಿಕ ಸಮಸ್ಯೆಗಳನ್ನು ಎತ್ತುವ ಮತ್ತು ಸರ್ಕಾರದ ಹೊಣೆಗಾರಿಕೆಯನ್ನು ಕೇಳುವ ವಿದ್ವಾಂಸರು ಮತ್ತು ಕಾರ್ಯಕರ್ತರ ವಿರುದ್ಧ ಇದನ್ನು ಬಳಸಲಾಗುತ್ತಿದೆ. ಇ.ಡಿ.(ಜಾರಿ ನಿರ್ದೇಶನಾಲಯ) 'ಕಳೆದ ಕೆಲವು ತಿಂಗಳುಗಳಲ್ಲಿ, ಹಲವಾರು ಮಹಿಳಾ ವಿದ್ವಾಂಸರು ಮತ್ತು ಕಾರ್ಯಕರ್ತರನ್ನು ಪದೇ ಪದೇ ಕರೆಸಿದೆ, ಅವರು ಗಂಟೆಗಳ ಕಾಲ ಕಾಯುವಂತೆ ಮಾಡಲಾಗಿದೆ, ಯಾವುದೇ ಮಹಿಳಾ ಅಧಿಕಾರಿ ಇಲ್ಲದೆ ಆಗಾಗ್ಗೆ ವಿಚಾರಣೆಗೆ ಒಳಪಡಿಸಲಾಗಿದೆ, ದಾಖಲೆಗಳನ್ನು ಒದಗಿಸುವಂತೆ ಪದೇ ಪದೇ ಕೇಳಲಾಗಿದೆ. ಸಾಂವಿಧಾನಿಕ ಪ್ರಶ್ನೆಗಳನ್ನು ಎತ್ತುವುದಕ್ಕಾಗಿ ಮತ್ತು ಉತ್ತರದಾಯಿತ್ವವನ್ನು ಕೇಳುವುದಕ್ಕಾಗಿ ಸರ್ಕಾರವು ಈ ರೀತಿ ಜನರನ್ನು ಶಿಕ್ಷಿಸುತ್ತಿರುವುದು ಸರಿಯಲ್ಲ ಎಂದು ಇದನ್ನು ಖಂಡಿಸುತ್ತ 500 ಕ್ಕೂ ಹೆಚ್ಚು ನಾಗರಿಕರು, ಹಕ್ಕುಗಳ ಕಾರ್ಯಕರ್ತರು, ಮಹಿಳಾ ಗುಂಪುಗಳು, ವಿದ್ಯಾರ್ಥಿಗಳು ಮತ್ತು ಶಿಕ್ಷಣ ತಜ್ಞರು ಬಹಿರಂಗ ಪತ್ರ ಬರೆದಿದ್ದಾರೆ.

ಈ ಕಾಯ್ದೆಯ ಅಡಿಯಲ್ಲಿ ಪ್ರಭುತ್ವಕ್ಕೆ ನೈಸರ್ಗಿಕ ನ್ಯಾಯ, ನ್ಯಾಯೋಚಿತ ವಿಚಾರಣೆ, ಸರಿಯಾದ ಪ್ರಕ್ರಿಯೆ, ಮಹಿಳೆಯರ ವಿಚಾರಣೆ ಕುರಿತಂತೆ ವಿಧಿ–ನಿಯಮಗಳು ಮತ್ತು ಮಾನವ ಹಕ್ಕುಗಳ ತತ್ವಗಳ ಪಾಲಿಸಬೇಕೆಂಬ ಹೊಣೆಗಾರಿಕೆ ಇರುವುದಿಲ್ಲ.

ತನಿಖೆಯನ್ನು ಪ್ರಾರಂಭಿಸುವ ಮೊದಲು ಇ.ಡಿ. ಎಫ್‌ಐಆರ್ ದಾಖಲಿಸಬೇಕಾಗಿಲ್ಲ ಅಥವಾ ಸಮನ್ಸ್‌ನ ಸಮಯದಲ್ಲಿ ಅಥವಾ ತನಿಖೆಯ ಸಮಯದಲ್ಲಿ ಅವರ ವಿರುದ್ಧದ ನಿರ್ದಿಷ್ಟ ಆರೋಪಗಳನ್ನು ತನಿಖೆಯಲ್ಲಿರುವವರಿಗೆ ತಿಳಿಸಬೇಕಾಗಿಲ್ಲ. ಕರೆಸುವ ಅಧಿಕಾರವು ಎಷ್ಟು ವಿಸ್ತಾರವಾಗಿದೆಯೆಂದರೆ, ಸಹಾಯಕ ನಿರ್ದೇಶಕ ಅಥವಾ ಮೇಲಿನ ಶ್ರೇಣಿಯ ಯಾವುದೇ ಅಧಿಕಾರಿಯು ಯಾವುದೇ ವ್ಯಕ್ತಿಯನ್ನು, ಆರೋಪಿ ಅಥವಾ ಇಲ್ಲದವರನ್ನು ಪತ್ತೆ, ತಪಾಸಣೆ, ಹೇಳಿಕೆಗಳನ್ನು ದಾಖಲಿಸುವುದು ಮತ್ತು ದಾಖಲೆಗಳನ್ನು ಸಲ್ಲಿಸುವುದು ಇತ್ಯಾದಿಗಳಿಗೆ ಕರೆ ಮಾಡಬಹುದು.

ಇದನ್ನು ಬಳಸಿಕೊಂಡು ಕಾರ್ಯಕರ್ತರು ಮತ್ತು ವಿದ್ವಾಂಸರಿಗೆ ಕಿರುಕುಳ ನೀಡುವುದನ್ನು ಕೂಡಲೇ ನಿಲ್ಲಿಸಬೇಕು. ಮಹಿಳೆಯರಿಂಗೆ ಸಮನ್ಸ್, ವಿಚಾರಣೆ ಮತ್ತು ಸಾಕ್ಷ್ಯ ಸಂಗ್ರಹಣೆಗಾಗಿ ಸರಿಯಾದ ಕಾರ್ಯವಿಧಾನಗಳನ್ನು ಜಾರಿಗೆ ತರಬೇಕು. ಕಾಯಿದೆಯ ಅಡಿಯಲ್ಲಿ ಇ.ಡಿ. ಅಧಿಕಾರಿಗಳಿಗೆ ಅಪಾರ ಅಧಿಕಾರವನ್ನು ನೀಡಲಾಗಿದೆ, ಅವರು PMLA ಅನ್ನು ಬಳಸಲು ಆಯ್ಕೆಮಾಡುವ ವ್ಯಕ್ತಿಗಳೊಂದಿಗೆ ಮತ್ತು ಅಂತಹ ಪ್ರಕರಣಗಳಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ವಿವೇಚನೆಯಿಂದ ವ್ಯವಹರಿಸಬೇಕು ಮತ್ತು ವಿರೋಧಿಗಳು, ಕಾರ್ಯಕರ್ತರು ಮತ್ತು ಬುದ್ಧಿಜೀವಿಗಳನ್ನು ಬೆದರಿಸಲು ಖಂಡಿತವಾಗಿಯೂ ಇದನ್ನು ಬಳಸಬಾರದು ಎಂದು ಈ ಬಹಿರಂಗ ಪತ್ರ ಆಗ್ರಹಿಸಿದೆ.



ಅಮೇರಿಕದ ಸಾಲ ಮಿತಿ ಏರಿಕೆಯ ಬಿಕ್ಕಟ್ಟು ಮತ್ತು ಬೈಡನ್ ಆಡಳಿತದ ಎರಡು ದೋಣಿಗಳ ಸವಾರಿ

ಅಮೇರಿಕಾ ಹೊಂದಿರುವ ಸಾಲದ ಮಿತಿ 31.4 ಟ್ರಿಲಿಯನ್ ಡಾಲರ್. ಅದರ ಒಟ್ಟು ಸಾಲ ಈ ಮಿತಿಯನ್ನು ಅದಾಗಲೇ ತಲುಪಿದೆ. ಈ ಮಿತಿಯನ್ನು 79 ನೇ ಬಾರಿ ಏರಿಸುವ ಬಗ್ಗೆ ಅಲ್ಲಿ ಈಗ ಚರ್ಚೆ ನಡೆಯುತ್ತಿದೆ. ಇದಕ್ಕೆ ಬಜೆಟ್‌ನಲ್ಲಿ ಕೆಲವು ಕಡಿತಗಳನ್ನು ಮಾಡಬೇಕೆಂಬುದು ಕಾಂಗ್ರೆಸ್ ನಲ್ಲಿ ಬಹುಮತದಲ್ಲಿರುವ ರಿಪಬ್ಲಿಕನ್ನರ ನಿಲುವು. ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ವಿಧಿಸುವ ಪರ್ಯಾಯ ಮಾರ್ಗದ ಬಗ್ಗೆ ಆಸಕ್ತಿಯನ್ನು ರಿಪಬ್ಲಿಕನ್ನರು ಮಾತ್ರವಲ್ಲ, ಬೈಡನ್ ಆಡಳಿತವೂ ಹೊಂದಿಲ್ಲ. ಈ ಹಿನ್ನೆಲೆಯಲ್ಲಿ, ಗಮನ ಸೆಳೆಯುವ ವಿಷಯವೆಂದರೆ, ವಿಶ್ವದ ಈ ಪ್ರಮುಖ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ "ಉದಾರವಾದಿ ಬಂಡವಾಳಶಾಹಿ" ಮತ್ತು "ಸಾಂಪ್ರದಾಯಿಕ ಬಂಡವಾಳಶಾಹಿ" ಎಂದು ಕರೆಯಬಹುದಾದ ವಿಭಾಗಗಳ ನಡುವಿನ ವ್ಯತ್ಯಾಸ. "ಉದಾರವಾದಿ ಬಂಡವಾಳಶಾಹಿ" ನಿಲುವಿನ ಬೈಡನ್ ಆಡಳಿತದ ಸಮಸ್ಯೆಯೆಂದರೆ, ಈ ನಿಲುವು ಮತ್ತು ತದ್ವಿರುದ್ಧವಾಗಿ ಅದು ವಿಶ್ವದ ಮೇಲೆ ಹೇರುವ "ನವ–ಸಂಪ್ರದಾಯಶರಣ" ಸಾಮ್ರಾಜ್ಯಶಾಹಿ "ನಿರ್ಬಂಧ"ಗಳ ನಡುವಿನ ವೈರುಧ್ಯ. ಎರಡು ದೋಣಿಗಳ ಮೇಲೆ ಕಾಲಿಟ್ಟು ಹೆಚ್ಚು ಕಾಲ ಸವಾರಿ ಸಾಧ್ಯವಿಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಒತ್ತಡದಿಂದಾಗಿ, ವಿಶ್ವದ ಬಹುತೇಕ ದೇಶಗಳು ತಮ್ಮ ವಿತ್ತೀಯ ಕೊರತೆಯ ಮಿತಿಯನ್ನು ಜಿಡಿಪಿಯ ಅನುಪಾತದಲ್ಲಿ ನಿಗದಿಪಡಿಸುವ ಶಾಸನವನ್ನು ಜಾರಿಗೆ ತಂದಿವೆ. ಎಲ್ಲೆಡೆಯೂ ಈ ಮಿತಿ ಸಾಮಾನ್ಯವಾಗಿ ಜಿಡಿಪಿಯ ಶೇ. 3ರ ಮಟ್ಟದಲ್ಲಿದೆ. ಭಾರತದಲ್ಲೂ, ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರಗಳು ಹೊಂದಿರುವ ಈ ಮಿತಿಯು ಅದೇ ಶೇ. 3ರ ಮಟ್ಟದಲ್ಲೇ ಇದೆ. ಆದರೆ, ಅಮೇರಿಕಾದಲ್ಲಿ ಸಾಲ ಮತ್ತು ಜಿಡಿಪಿ ಅನುಪಾತಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನವಿಲ್ಲ. ಬದಲಾಗಿ, ಅಮೇರಿಕದಲ್ಲಿ ಜಾರಿಯಲ್ಲಿರುವ ಶಾಸನದ ಪ್ರಕಾರ ಯಾವುದೇ ಸಮಯದಲ್ಲಿ ಅದರ ಒಟ್ಟು ಸಾಲವು ಒಂದು ಗೊತ್ತುಪಡಿಸಿದ ಮೊತ್ತವನ್ನು ಮೀರುವಂತಿಲ್ಲ. ಇದೊಂದು ಬಹಳ ವಿಚಿತ್ರವಾದ ಪದ್ಧತಿಯೇ ಸರಿ. ವಿಚಿತ್ರ ಏಕೆಂದರೆ, ಅರ್ಥವ್ಯವಸ್ಥೆಯು ಬೆಳೆದಂತೆಲ್ಲಾ ಈ ಮಿತಿಯನ್ನು ಪರಿಷ್ಕರಿಸುವ ಅವಶ್ಯಕತೆ ಆಗಾಗ ಉದ್ಭವಿಸುತ್ತಲೇ ಇರುತ್ತದೆ. ಸಾಂದರ್ಭಿಕವಾಗಿ ಹೇಳುವುದಾದರೆ, ಅಮೇರಿಕಾದಲ್ಲಿ ಸಾಲದ ಈ ಮಿತಿಯನ್ನು 1960ರಿಂದ ಈ ವರೆಗೆ 78 ಬಾರಿ ಪರಿಷ್ಕರಿಸಲಾಗಿದೆ.


ಸದ್ಯದಲ್ಲಿ ಅಮೇರಿಕಾ ಹೊಂದಿರುವ ಸಾಲದ ಮಿತಿ 31.4 ಟ್ರಿಲಿಯನ್ ಡಾಲರ್. ಅಮೇರಿಕಾ ಈ ಮಿತಿಯನ್ನು ಅದಾಗಲೇ ತಲುಪಿದೆ. ಬೈಡನ್ ಆಡಳಿತವು ಸಾಲ ಮಿತಿಯನ್ನು ಹೆಚ್ಚಿಸುವ ಪ್ರಸ್ತಾಪವನ್ನು ಕಾಂಗ್ರೆಸ್ ಮುಂದೆ ಇಡಲಿದೆ. ಆದರೆ, ಅಮೇರಿಕಾದ ಕಾಂಗ್ರೆಸ್‌ನಲ್ಲಿ ಬಹುಮತ ಹೊಂದಿರುವ ರಿಪಬ್ಲಿಕನ್ನರು ಈ ಪ್ರಸ್ತಾಪವನ್ನು ಮಾಮೂಲು ರೀತಿಯಲ್ಲಿ ಅಂಗೀಕರಿಸಲು ನಿರಾಕರಿಸಿದ್ದಾರೆ. ಬಜೆಟ್‌ನಲ್ಲಿ ಕೆಲವು ಕಡಿತಗಳನ್ನು ಕೈಗೊಳ್ಳಬೇಕೆಂಬುದು ಅವರ ಒತ್ತಾಯ. ಸಾಲ ಮಿತಿಯ ಏರಿಕೆಗೆ ಕಾಂಗ್ರೆಸ್‌ನಲ್ಲಿ ಅನುಮೋದನೆ ದೊರೆತ ನಂತರ ಬಜೆಟ್‌ನಲ್ಲಿ ಕಡಿತದ ಬಗ್ಗೆ ಚರ್ಚೆ ಮಾಡೋಣ ಎಂಬುದು ಬೈಡನ್ ಅವರ ಸೂಚನೆ. ಬಜೆಟ್ ಕಡಿತವೇ ಮೊದಲು, ಆ ನಂತರವೇ ಅನುಮೋದನೆ ಎಂಬುದು ರಿಪಬ್ಲಿಕನ್ನರ ನಿಲುವು. ಇದುವೇ ಪ್ರಸ್ತುತ ಬಿಕ್ಕಟ್ಟಿನ ಕಾರಣ. ಈ ಇಕ್ಕಟ್ಟಿನಿಂದ ಹೊರಬರದಿದ್ದರೆ, ಹಿಂದಿನ ಸಾಲಗಳ ಮೇಲಿನ ಬಡ್ಡಿ ಪಾವತಿಸುವಲ್ಲಿ ಮತ್ತು ಸರ್ಕಾರದ ನೌಕರರ ಸಂಬಳ ಪಾವತಿಸುವಲ್ಲಿ ಕರ್ತವ್ಯಲೋಪದ ಅಪಾಯವು ಬೈಡನ್ ಆಡಳಿತಕ್ಕೆ ಎದುರಾಗಿದೆ.

ತೆರಿಗೆಯೋ – ಸಾಲವೋ

ಇಲ್ಲಿ ಬೇರೆ ಬೇರೆಯಾದ ಎರಡು ವಿಷಯಗಳಿವೆ. ಮೊದಲನೆಯದು, ಸರ್ಕಾರ ಸಾಲ ಮಾಡಬೇಕೇ? ಬೇಡವೇ? ಎಂಬ ತಾರ್ಕಿಕ ವಿವೇಚನೆಗೆ ಸಂಬಂಧಿಸಿದೆ. ಒಂದು ಸರ್ಕಾರವು ತನ್ನ ಖರ್ಚು–ವೆಚ್ಚಗಳಿಗೆ ಹಣ ಒದಗಿಸಿಕೊಳ್ಳಲು ತೆರಿಗೆ ಆದಾಯವನ್ನು ಹೆಚ್ಚಿಸುವ ಬದಲು ಸಾಲ ಪಡೆಯಲು ಮುಂದಾದಾಗ ಅದು ಶ್ರೀಮಂತರ ಮೇಲೆ ತೆರಿಗೆ ವಿಧಿಸಲು ಬಯಸುವುದಿಲ್ಲ ಎಂಬ ಅದರ ಇಂಗಿತ ವ್ಯಕ್ತಗೊಳ್ಳುತ್ತದೆ. ಶ್ರೀಮಂತರ ಮೇಲೆ ತೆರಿಗೆಗಳನ್ನು ಹೆಚ್ಚಿಸದ ಕಾರಣದಿಂದಾಗಿ ನವ ಉದಾರವಾದಿ ಬಂಡವಾಳಶಾಹಿ ಆಳ್ವಿಕೆಯ ಅವಧಿಯಲ್ಲಿ ವಿಶ್ವದ ಇತರೆಡೆಗಳಂತೆ ಅಮೇರಿಕಾದಲ್ಲೂ ಆದಾಯ ಮತ್ತು ಸಂಪತ್ತಿನ ಅಸಮಾನತೆಗಳು ಗಣನೀಯವಾಗಿ ಹೆಚ್ಚಿವೆ. ಆದ್ದರಿಂದ, ಸರ್ಕಾರವು ಕಾರ್ಪೊರೇಟ್‌ಗಳ ಲಾಭಗಳ ಮೇಲೆ ತೆರಿಗೆ ಹೇರುವ ಮೂಲಕವಾಗಲಿ ಅಥವಾ ಶ್ರೀಮಂತರ ಸಂಪತ್ತಿನ ಮೇಲೆ ತೆರಿಗೆ ಹೇರುವ ಮೂಲಕವಾಗಲಿ, ಹೆಚ್ಚು ತೆರಿಗೆ ಸಂಪನ್ಮೂಲಗಳನ್ನು ಸಂಗ್ರಹಿಸುವ ಮಾರ್ಗವನ್ನು ಅನುಸರಿಸುವ ಅಗತ್ಯವಿದೆ ಎಂಬುದು ಸ್ಪಷ್ಟವಾಗುತ್ತದೆ.



ಸರ್ಕಾರವು ತನ್ನ ಖರ್ಚು ವೆಚ್ಚಗಳಿಗೆ ಸರಿಸಮನಾಗಿ ತೆರಿಗೆಗಳನ್ನು ವಿಧಿಸಿದಾಗ, ಶ್ರೀಮಂತರ ಮೇಲೆ ಒಂದು ವೇಳೆ ಹೆಚ್ಚು ತೆರಿಗೆಗಳನ್ನು ವಿಧಿಸಿದರೂ ಸಹ, ಸಂಪತ್ತಿನ ಅಸಮಾನತೆಗಳು ಕಡಿಮೆಯಾಗುವುದಿಲ್ಲ. ಏಕೆಂದರೆ, ದುಡಿಯುವ ಜನರು ತಮ್ಮ ಇಡೀ ಆದಾಯವನ್ನು ಅನಿವಾರ್ಯವಾಗಿ ಬಳಕೆ ಮಾಡುತ್ತಾರೆ. ಅವರಿಗೆ ಉಳಿತಾಯ ಸಾಧ್ಯವಾಗುವುದಿಲ್ಲ. ಆದ್ದರಿಂದ, ಯಾವುದೇ ಅರ್ಥವ್ಯವಸ್ಥೆಯಲ್ಲಿ ಹೆಚ್ಚಿನ ಉಳಿತಾಯವನ್ನು ಶ್ರೀಮಂತರೇ ನಿರ್ವಹಿಸುತ್ತಾರೆ. ಉದಾಹರಣೆಗೆ, ಸರ್ಕಾರವು $100 ಖರ್ಚು ಮಾಡಿದಾಗ, ಆ ಹಣವನ್ನು ಒಂದು ವೇಳೆ ಸಾಲದ ಮೂಲಕ ಒದಗಿಸಿಕೊಂಡಿದ್ದರೆ, ಶ್ರೀಮಂತರ ಕೈಯಲ್ಲಿ ಅಧಿಕವಾಗಿ $100 ಉಳಿತಾಯವಾಗುತ್ತವೆ. ಅವರು ಏನನ್ನೂ ಮಾಡದೇ ಈ $100 ಗಳಿಸಿರುತ್ತಾರೆ. ನಂತರ ಸರ್ಕಾರವು ಅದನ್ನು ಸಾಲ ಪಡೆಯುತ್ತದೆ.



ಹಾಗಾಗಿ, ಸಾಲದ ಮೂಲಕ ಒದಗಿಸಿಕೊಂಡ ಹಣವನ್ನು ಸರ್ಕಾರವು ತನ್ನ ಖರ್ಚು–ವೆಚ್ಚಗಳಿಗಾಗಿ ಬಳಸಿಕೊಂಡಾಗ ಅದು ಸಂಪತ್ತಿನ ಅಸಮಾನತೆಗಳನ್ನು ಹೆಚ್ಚಿಸುತ್ತದೆ. ಆದರೆ, ತೆರಿಗೆಗಳ ಮೂಲಕ ಒದಗಿಸಿಕೊಂಡ ಹಣವನ್ನು ಖರ್ಚು–ವೆಚ್ಚಗಳಿಗಾಗಿ ಬಳಸಿಕೊಂಡಾಗ ಅದು ಸಂಪತ್ತಿನ ಅಸಮಾನತೆಯನ್ನು ಹೆಚ್ಚಿಸುವುದಿಲ್ಲ. ಅಂದರೆ, ಸರ್ಕಾರದ ಖರ್ಚು ವೆಚ್ಚಗಳಿಗೆ ಸರಿಸಮನಾಗಿ ವಿಧಿಸಿದ ತೆರಿಗೆಗಳು ಸಂಪತ್ತಿನ ಅಸಮಾನತೆಗಳನ್ನು ಬದಲಿಸುವುದಿಲ್ಲ. ಸಂಪತ್ತಿನ ಅಸಮಾನತೆಗಳು ಮೊದಲಿದ್ದ ಮಟ್ಟದಲ್ಲೇ ಉಳಿಯುತ್ತವೆ.

ಬೈಡನ್ ಆಡಳಿತವಾಗಲಿ ಅಥವಾ ರಿಪಬ್ಲಿಕನ್ ಬಹುಮತದ ಕಾಂಗ್ರೆಸ್ಸಾಗಲಿ ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ವಿಧಿಸುವ ಆಸಕ್ತಿ ಹೊಂದಿಲ್ಲ ಎಂಬ ಅಂಶವು ಅಮೇರಿಕಾದ ರಾಜಕಾರಣದ ಮೇಲೆ ಬೂರ್ಷ್ವಾಗಳು ಹೊಂದಿರುವ ಬಲವಾದ ಹಿಡಿತದ ಸಂಕೇತವಾಗಿದೆ. ಅವರಿಬ್ಬರೂ ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ವಿಧಿಸುವ ಈ ಅನ್ಯ ಮಾರ್ಗವನ್ನು ಬಿಟ್ಟು ಬೇರೆ ಅಂಶವನ್ನೇ ಚರ್ಚೆ ಮಾಡುತ್ತಾರೆ. ಸರ್ಕಾರಿ ನೌಕರರು ಸಂಬಳವಿಲ್ಲದೆ ಬರಿಗೈಯಲ್ಲಿ ಮನೆಗೆ ಹೋಗಬೇಕಾಗುತ್ತದೆ ಎಂಬುದನ್ನೇ ಮುಂದುಮಾಡಿ ಬೈಡನ್ ರಿಪಬ್ಲಿಕರನ್ನು ಹೆದರಿಸುತ್ತಾರೆ. ಶ್ರೀಮಂತರ ಮೇಲೆ ತೆರಿಗೆ ಹೆಚ್ಚಿಸುವ ಸಾಧ್ಯತೆಯನ್ನು ಬೈಡನ್ ಅಪ್ಪಿ ತಪ್ಪಿಯೂ ಒಮ್ಮೆಯೂ ಬಾಯಿಬಿಡುವುದಿಲ್ಲ. ತಮ್ಮ ಹಠವನ್ನು ಸಮರ್ಥಿಸಿಕೊಳ್ಳುವ ಸಲುವಾಗಿಯಾದರೂ ರಿಪಬ್ಲಿಕನ್ನರೂ ಸಹ, ಶ್ರೀಮಂತರ ಮೇಲೆ ತೆರಿಗೆಗಳನ್ನು ಹೆಚ್ಚಿಸಬೇಕು ಎಂದು ಅಪ್ಪಿ ತಪ್ಪಿಯೂ ಒಮ್ಮೆಯೂ ಸೂಚಿಸುವುದಿಲ್ಲ.

ಎರಡು ವಿಭಿನ್ನ ಬಂಡವಾಳಶಾಹಿ ಮಾರ್ಗಗಳು

ವಿಶ್ವದ ಪ್ರಮುಖ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ನಡೆಯುತ್ತಿರುವ ಈ ವಿದ್ಯಮಾನವು ಆಶ್ಚರ್ಯಕರವೇನಲ್ಲ. ಆದರೆ, ಗಮನ ಸೆಳೆಯುವ ಇನ್ನೊಂದು ವಿಷಯ ಇಲ್ಲಿದೆ. ಬೈಡನ್ ಆಡಳಿತ ಮತ್ತು ರಿಪಬ್ಲಿಕನ್ನರ ನಡುವಿನ ತಕ್ಷಣದ ಭಿನ್ನಾಭಿಪ್ರಾಯದ ಆಚೆಗೂ, ಆರ್ಥಿಕ ತಿಳುವಳಿಕೆ ಮತ್ತು ಆರ್ಥಿಕ ಕಾರ್ಯತಂತ್ರಗಳ ಬಗ್ಗೆ ಅವರಿಬ್ಬರ ನಡುವೆ ಬಹಳ ವ್ಯತ್ಯಾಸಗಳಿವೆ. ಅವರು ಅನುಸರಿಸುವ ಎರಡು ಮಾರ್ಗ–ವಿಧಾನಗಳನ್ನು ಅನುಕ್ರಮವಾಗಿ "ಉದಾರ ಬಂಡವಾಳಶಾಹಿ" ಮತ್ತು "ಸಾಂಪ್ರದಾಯಿಕ ಬಂಡವಾಳಶಾಹಿ" ಎಂದು ಕರೆಯಬಹುದು.

ಡೆಮೊಕ್ರಾಟರಿಗೆ (ಉದಾರ ಬಂಡವಾಳಶಾಹಿಗಳಿಗೆ) ನವ ಉದಾರವಾದಿ ಬಂಡವಾಳಶಾಹಿಯು ಒಂದು ದೀರ್ಘಾವಧಿಯ ಬಿಕ್ಕಟ್ಟಿಗೆ ಒಳಗಾಗಿದೆ ಎಂಬುದರ ಅರಿವಿದೆ. ಆದ್ದರಿಂದ ಅಮೇರಿಕಾದ ಇಂದಿನ ಸಂದರ್ಭದಲ್ಲಿ ಕೀನ್ಸ್ ಪ್ರತಿಪಾದಿಸಿದ ಆರ್ಥಿಕ ನೀತಿಗಳನ್ನು ಮತ್ತೊಮ್ಮೆ ಅಳವಡಿಸಿಕೊಳ್ಳಲು ಡೆಮೊಕ್ರಾಟರು ಬಯಸುತ್ತಾರೆ. ವಿತ್ತೀಯ ಕೊರತೆಯ ಹೆಚ್ಚಳದ ಬಗ್ಗೆ ಅವರಿಗೆ ಮುಜುಗುರವಿಲ್ಲ. ಅದಕ್ಕಾಗಿ ಸಾಲದ ಮಿತಿಯನ್ನು ಪರಿಷ್ಕರಿಸಬೇಕಾಗುತ್ತದೆ. ಸಾಲ–ಮಿತಿಯನ್ನು ಹೆಚ್ಚಿಸಬೇಕೆಂಬ ಅವರ ಅಪೇಕ್ಷೆಯು ನೇರವಾಗಿ ಅಥವಾ ತಕ್ಷಣವೇ ವಿಸ್ತರಣಾ ನೀತಿಗಳನ್ನು ಅಳವಡಿಸಿಕೊಳ್ಳುವ ಬಯಕೆಯಿಂದ ಪ್ರೇರಿತವಾಗಿಲ್ಲ ಎಂಬುದೇನೊ ಸರಿ. ಆದರೆ, ಸಾಲ ಮಿತಿಯನ್ನು ಹೆಚ್ಚಿಸುವ ಬೇಡಿಕೆಗೂ ಮತ್ತು ವಿಸ್ತರಣಾ ನೀತಿಗಳ ಅಗತ್ಯದ ಬಗ್ಗೆ ಅವರು ಹೊಂದಿರುವ ದೃಷ್ಟಿಕೋನಕ್ಕೂ ಪರಸ್ಪರ ಸಂಬಂಧವಿದೆ. ಅಮೇರಿಕಾದಲ್ಲಿ ಹಾಗೂ ಇಡೀ ಜಗತ್ತಿನಲ್ಲಿ ಸಂಭವಿಸಿದ ಹಣದುಬ್ಬರದ ಏರಿಕೆಯ ಕಾರಣದಿಂದಾಗಿ ಅಂತಹ ನೀತಿಗಳು ಸದ್ಯದಲ್ಲಿ ಗಮನ ಪಡೆಯುತ್ತಿಲ್ಲ ಎಂಬುದೂ ನಿಜವೇ.

ಉದಾರ ಬಂಡವಾಳಶಾಹಿಗಳು (ಡೆಮೊಕ್ರಾಟರು) ಹಣದುಬ್ಬರ ನಿಯಂತ್ರಣವನ್ನು ಆರ್ಥಿಕ ನೀತಿಯ ಏಕೈಕ ಅಥವಾ ಪರಮ ಉದ್ದೇಶವಾಗಿ ನೋಡುವುದಿಲ್ಲ. ನಿರುದ್ಯೋಗದ ಇಳಿಕೆಯನ್ನು ಮತ್ತು ಉನ್ನತ ಮಟ್ಟದ ಆರ್ಥಿಕ ಚಟುವಟಿಕೆಗಳ ಸಾಧನೆಯನ್ನು ಸಹ ಪ್ರಮುಖ ನೀತಿ ಉದ್ದೇಶಗಳೆಂದು ಅವರು ಪರಿಗಣಿಸುತ್ತಾರೆ. ಹಣದುಬ್ಬರವನ್ನು "ತಡೆದುಕೊಳ್ಳಬಹುದಾದ" ಮಟ್ಟಕ್ಕೆ ಇಳಿಸಿದ ಕೂಡಲೇ ಅವು ಮುಖ್ಯವಾಗುತ್ತವೆ. ಹಣದುಬ್ಬರ ನಿಯಂತ್ರಣವು ಅವರ ತಕ್ಷಣದ ಕಾಳಜಿಯ ವಿಷಯವಾಗಿದ್ದರೂ ಸಹ, ಅದನ್ನು ಸಾಧಿಸುವುದಕ್ಕಾಗಿ, ಸರ್ಕಾರದ ಖರ್ಚು–ವೆಚ್ಚಗಳನ್ನು ತೀವ್ರವಾಗಿ ಕಡಿತಗೊಳಿಸಿ ಉಂಟುಮಾಡುವ ತೀವ್ರ ಸ್ವರೂಪದ ಆರ್ಥಿಕ ಹಿಂಜರಿತವನ್ನು ತಪ್ಪಿಸಲು ಪ್ರಯತ್ನಿಸಲಾಗುವುದು.

ಈ ನಿಲುವಿಗೆ ತದ್ವಿರುದ್ಧವಾಗಿ, "ಸಾಂಪ್ರದಾಯಿಕ ಬಂಡವಾಳಶಾಹಿಗಳು" (ರಿಪಬ್ಲಿಕನ್ನರು) ಹಣದುಬ್ಬರ ನಿಯಂತ್ರಣವನ್ನು ಒಂದು ಪರಮ ಉದ್ದೇಶವೆಂದು ನೋಡುತ್ತಾರೆ. ದುಡಿಯುವ ಜನರಿಗೆ ಮಾಡುವ "ವರ್ಗಾವಣೆ"ಗಳನ್ನು ಅಥವಾ ಅವರಿಗಾಗಿಯೇ ರೂಪಿಸಿದ ಕಲ್ಯಾಣ ಯೋಜನೆಗಳ ಮೇಲೆ ಮಾಡುವ ಸರ್ಕಾರದ ವೆಚ್ಚವನ್ನು ಕಡಿತಗೊಳಿಸುವಲ್ಲಿ ಅವರಿಗೆ ಒಲವಿದೆ. ಈ ಕಡಿತಗಳನ್ನು, ಹಣದುಬ್ಬರದ ಮೇಲೆ ನಿಯಂತ್ರಣವನ್ನು ಸಾಧಿಸಲು ಅಗತ್ಯವೆಂದು ಮಾತ್ರವಲ್ಲ, ಎಲ್ಲ ಕಾಲಕ್ಕೂ ಸಲ್ಲುವ ಆರ್ಥಿಕ ನೀತಿಯ ಲಕ್ಷಣವೆಂದು ಅವರು ಭಾವಿಸುತ್ತಾರೆ.

ಕೀನ್ಸ್ ಅವರ ಕಾಲದಲ್ಲಿ, ಬ್ರಿಟನ್ನಿನ ಆರ್ಥಿಕ ಕೇಂದ್ರವಾದ ಲಂಡನ್ ನಗರವು ವ್ಯಕ್ತಪಡಿಸುತ್ತಿದ್ದ ಈ "ಸಾಂಪ್ರದಾಯಿಕ ಬಂಡವಾಳಶಾಹಿ" ನಿಲುವಿನ ವಿರುದ್ಧ ಸ್ವತಃ ಕೀನ್ಸ್ ಕೂಡ ಸೆಣಸಬೇಕಾಯಿತು. ವಾಸ್ತವವಾಗಿ, ನಿರುದ್ಯೋಗ ಮತ್ತು ಉತ್ಪಾದನಾ

ಪುಟ 14 ಕ್ಕೆ

ಮೋದಿ ಅಜೇಯ ಎಂಬ ಇಮೇಜ್ ಛಿದ್ರಗೊಂಡಿದೆ......

ಪುಟ 11 ರಿಂದ

ಜಾರಿಯಾಗುತ್ತಿವೆ. ಈ ಸರ್ಕಾರವನ್ನು ಅಸ್ಥಿರಗೊಳಿಸಲು ಕೇಂದ್ರ ಸರ್ಕಾರ ಮತ್ತು ಅದರ ಏಜೆನ್ಸಿಗಳ ಅನೇಕ ಪ್ರಯತ್ನಗಳನ್ನು ಇದು ತಡೆದಿದೆ. 'ಕೇರಳ ಸ್ಟೋರೀಸ್' ಎಂಬ ಪ್ರಚಾರ ಚಿತ್ರ ಎಡ ಪ್ರಜಾಸತ್ತಾತ್ಮಕ ರಂಗದ ವಿರುದ್ಧ ನಡೆಸಲಾಗುತ್ತಿರುವ ಸೈದ್ಧಾಂತಿಕ ದಾಳಿಯ ಭಾಗವಾಗಿದೆ. ಜನರು ಸ್ವಯಂಪ್ರೇರಿತರಾಗಿ ಈ ಚಿತ್ರಕ್ಕೆ ಬಹಿಷ್ಕಾರ ಹಾಕಿರುವುದು ಶುಭ ಸೂಚನೆಯಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರಸ್ತುತ ಎಲ್ ಡಿ ಎಫ್ ಮತ್ತು ಅದರ ಸರ್ಕಾರದೊಂದಿಗೆ ಜನರ ಸಂಪರ್ಕವು ನಿಜವಾಗಿಯೂ ಬಲಗೊಳ್ಳುತ್ತಿದೆ. ಹಾಗಾಗಿ ಕಳೆದ ಎರಡು ವರ್ಷ ಚೆನ್ನಾಗಿದೆ. ಚುನಾವಣಾ ಪ್ರಣಾಳಿಕೆಯಲ್ಲಿ ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸಲು ಈ ಚಟುವಟಿಕೆಯನ್ನು ಮುಂದುವರಿಸಬೇಕು.

ಅಪಾಯಕಾರಿ ಪರಿಸ್ಥಿತಿ

ಪ್ರಶ್ನೆ: ತ್ರಿಪುರಾದಲ್ಲಿ ಪ್ರಸ್ತುತ ರಾಜಕೀಯ ಪರಿಸ್ಥಿತಿ ಹೇಗಿದೆ?

ಉತ್ತರ: ತ್ರಿಪುರಾದಲ್ಲಿ ಬಿಜೆಪಿ ಕೇವಲ ಹೆಚ್ಚಿನ ಎರಡು ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂದಿದೆ. ಆದರೆ, ಅದು ಪ್ರಜಾಪ್ರಭುತ್ವವನ್ನು ಅಣಕಿಸುವ ಚಟುವಟಿಕೆಗಳಲ್ಲಿ ತೊಡಗಿದೆ. ವಿಧಾನಸಭೆಯಲ್ಲಿ ಪ್ರಬಲ ಪ್ರತಿಪಕ್ಷವಿದ್ದರೂ ತನ್ನ ಅಧಿಕಾರಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುವಲ್ಲಿ ನಿರತವಾಗಿದೆ. ಈ ಬಾರಿ ಯಾವುದೇ ನೇರ ದಾಳಿಗಳು ನಡೆಯದಿದ್ದರೂ, ಸೆರೆಹಿಡಿಯುವುದು, ಹೊಡೆತ ಇತ್ಯಾದಿಗಳ ಮೂಲಕ ತ್ರಿಪುರಾದ ಜನರ, ಅದರಲ್ಲೂ ವಿಶೇಷವಾಗಿ ಅವರನ್ನು ಬೆಂಬಲಿಸದ ವಿಭಾಗಗಳ ಆರ್ಥಿಕ ಜೀವನ ಮಟ್ಟವನ್ನು ಹದಗೆಡಿಸುವ ಕೆಲಸದಲ್ಲಿ ನಿರತವಾಗಿದೆ. ಹಾಗಾಗಿ ಆ ರಾಜ್ಯದಲ್ಲಿ ಪ್ರಜಾಪ್ರಭುತ್ವಕ್ಕೆ ಅತ್ಯಂತ ಅಪಾಯಕಾರಿ ಸನ್ನಿವೇಶವಿದೆ.

ರಾಜ್ಯಪಾಲರು ಸರ್ಕಾರದ ಚಟುವಟಿಕೆಗಳನ್ನು ತಡೆಯಲು ಪ್ರಯತ್ನಿಸುತ್ತಾರೆ

ಪ್ರಶ್ನೆ: ಕೇರಳ ಮತ್ತು ತಮಿಳುನಾಡು ರಾಜ್ಯಗಳ ರಾಜ್ಯಪಾಲರು ತಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ: ರಾಜ್ಯಪಾಲರ ಸಾಂವಿಧಾನಿಕ ಸ್ಥಾನದ ದುರುಪಯೋಗ ದೇಶಾದ್ಯಂತ ವಿಶೇಷವಾಗಿ ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ನಡೆಯುತ್ತಿದೆ. ಈ ರಾಜ್ಯಗಳಲ್ಲಿ ಬಿಜೆಪಿ ನೇರವಾಗಿ ರಾಜಕೀಯವಾಗಿ ಮಧ್ಯಪ್ರವೇಶಿಸಲು ಮತ್ತು ತನ್ನ ರಾಜಕೀಯ ಕಾರ್ಯಸೂಚಿಯನ್ನು ಪ್ರದರ್ಶಿಸಲು ರಾಜ್ಯಪಾಲರನ್ನು ಬಳಸಿಕೊಳ್ಳುತ್ತಿದೆ. ಕೆಲವು ರಾಜ್ಯಗಳಲ್ಲಿ ಅವರು ರಾಜ್ಯ ಸರ್ಕಾರದ ಧಿಕ್ಕರಿಸುವ ಯಾವುದೇ ಅವಶ್ಯಕತೆ ಇಲ್ಲದಿದ್ದರೂ ಸಹ ಅಧಿಕಾರಿಗಳನ್ನು ಕರೆಸಿ ಮಾತನಾಡುವ ಮಟ್ಟಕ್ಕೆ ಹೋಗುತ್ತಾರೆ. ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ರಾಜ್ಯಪಾಲರನ್ನು ಅಸ್ಥಿರಗೊಳಿಸಲು ಮತ್ತು ಆ ರಾಜ್ಯಗಳ ಕಾರ್ಯನಿರ್ವಹಣೆಗೆ ಅಡ್ಡಿಪಡಿಸಲು ಬಳಸುತ್ತಾರೆ. ಕೇರಳ ಮತ್ತು ತಮಿಳುನಾಡು ಈಗ ರಾಜ್ಯ ಸರ್ಕಾರ ಅಂಗೀಕರಿಸಿದ ಮಸೂದೆಗಳನ್ನು ಅಂಗೀಕರಿಸಲು ಅಥವಾ ತಿರಸ್ಕರಿಸಲು ನಿರ್ದಿಷ್ಟ ಕಾಲಮಿತಿಯನ್ನು ನಿಗದಿಪಡಿಸುವ ನಿಲುವನ್ನು ತೆಗೆದುಕೊಂಡಿವೆ. ಈ ಮಸೂದೆಗಳನ್ನು ದೀರ್ಘಕಾಲ ಮುಚ್ಚಿಡಲು ಸಾಧ್ಯವಿಲ್ಲ ಎಂಬುದು ಅವರ ನಿಲುವು. ಇದನ್ನು ಸುಪ್ರೀಂ ಕೋರ್ಟ್ ಕೂಡ ಎತ್ತಿ ತೋರಿಸಿದೆ. ರಾಜ್ಯಪಾಲರು ಸಮಂಜಸವಾದ ಕಾಲಮಿತಿಯೊಳಗೆ ಕಾರ್ಯನಿರ್ವಹಿಸಬೇಕು ಎಂದು ಅದು ಹೇಳುತ್ತದೆ. ಈ ನಿಟ್ಟಿನಲ್ಲಿ ಸಾಂವಿಧಾನಿಕ ನಿಬಂಧನೆಗಳನ್ನೂ ಅದು ಎತ್ತಿ ತೋರಿಸಿದೆ. ಈ ಅವಧಿಯನ್ನು ವ್ಯಾಖ್ಯಾನಿಸಬೇಕು. ರಾಷ್ಟ್ರಪತಿಗಳ ಒಪ್ಪಿಗೆಗೆ ಇದೇ ರೀತಿಯ ಮಾನದಂಡಗಳನ್ನು ಅನುಸರಿಸಬೇಕು. ಇದನ್ನು ಔಪಚಾರಿಕಗೊಳಿಸಬೇಕು ಮತ್ತು ನಿಯಂತ್ರಿಸಬೇಕು.

ಪ್ರಶ್ನೆ: ತಮಿಳುನಾಡಿನಲ್ಲಿ ಬಿಜೆಪಿ ವಿರುದ್ಧ ಐಕ್ಯರಂಗದ ಸಾಧ್ಯತೆಗಳೇನು?

ಉತ್ತರ: ತಮಿಳುನಾಡಿನಲ್ಲಿ ಬಿಜೆಪಿ ವಿರುದ್ಧ ಈಗಾಗಲೇ ಒಗ್ಗಟ್ಟಿನ ಹೋರಾಟವಿದೆ. ಕಳೆದ ಚುನಾವಣೆಯ ಸಂದರ್ಭದಲ್ಲಿ ಇದಕ್ಕೆ ಅವಕಾಶಗಳು ಹೆಚ್ಚಾಗಿವೆ. ಅದನ್ನು ಸುಧಾರಿಸಬೇಕಾಗಿದೆ ಎಂದು ನಾನು ಭಾವಿಸುತ್ತೇನೆ. ಇದರ ನಿರೀಕ್ಷೆಗಳು ಹಿಂದೆಂದಿಗಿಂತಲೂ ಉಜ್ವಲವಾಗಿವೆ. ಈ ಬಾರಿ ಎಲ್ಲ ನಲವತ್ತು ಕ್ಷೇತ್ರಗಳನ್ನು ಗೆಲ್ಲಬೇಕಿದೆ. ಕೇರಳದಲ್ಲಿ ಬಿಜೆಪಿಗೆ ಒಬ್ಬನೇ ಒಬ್ಬ ವಿಧಾನಸಭಾ ಸದಸ್ಯ ಇಲ್ಲದಂತೆ, ತಮಿಳುನಾಡಿನಲ್ಲಿ ಮುಂಬರುವ ಸಂಸತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಯಾರೂ ಗೆಲ್ಲಬಾರದು ಎಂಬುದು ನಮ್ಮ ಗುರಿಯಾಗಬೇಕು.

ಸಂದರ್ಶನ: ವಿ.ಪ.ಗಣೇಶನ್ –ಅನು:ಸಿಚಿ

ನೂತನ ಸಂಸತ್ ಭವನ ಉದ್ಘಾಟನೆ ರಾಷ್ಟ್ರಪತಿಯವರಿಗಿಲ್ಲ ಆಹ್ವಾನ....

ಪುಟ 9 ರಿಂದ

ಯಾರೂ ಪ್ರಶ್ನಿಸುವುದಿಲ್ಲ ಎಂಬ ಅಭಿಪ್ರಾಯ ಹಿಂದಿನಿಂದಲೂ ಇದೆ. ಬಿಜೆಪಿಯಲ್ಲಿ ಆಂತರಿಕ ಪ್ರಜಾಪ್ರಭುತ್ವದ ಒಂದು ತುಣುಕೂ ಇಲ್ಲ. ಪ್ರಧಾನಿ ಮತ್ತು ರಾಷ್ಟ್ರಪತಿಗಳ ಗೌರವದ ವಿಚಾರದಲ್ಲೂ ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಧೈರ್ಯ ಯಾರಿಗೂ ಇಲ್ಲ ಎಂಬುದನ್ನು ಈ ಘಟನೆ ತೋರಿಸುತ್ತದೆ. ಮತ್ತೊಂದೆಡೆ ವ್ಯಕ್ತಿಪೂಜೆ ಬೇಡ ಎಂದು ಭಾವಣಿ ಏರಿ ಬೊಬ್ಬೆ ಹೊಡೆಯುವ ಆರ್ ಎಸ್ ಎಸ್ ಮೌನವಾಗಿರುವುದು ವಿಚಿತ್ರವಾಗಿದೆ. ಆದರೆ ಈ ವಿಚಿತ್ರತೆಯ ಹಿಂದೆ, ಆರ್‌ಎಸ್‌ಎಸ್‌ಗೆ ಮೋದಿ ಸರ್ಕಾರ ಬೇಕು ಮತ್ತು ಮೋದಿ ನೇತೃತ್ವದ ಬಿಜೆಪಿಗೂ ಆರ್‌ಎಸ್‌ಎಸ್‌ನ ಪರಿವಾರಗಳ ಜಾಲ ಬೇಕು ಎಂಬ ರಹಸ್ಯ ಅಡಗಿದೆ. ಇವರೆಲ್ಲರ ಈ ಯೋಜನೆಯ ಗುರಿ ಹಿಂದೂ ರಾಷ್ಟ್ರವನ್ನು ರಚಿಸುವುದಾಗಿದೆ. ಕರ್ನಾಟಕ ಚುನಾವಣಾ ಫಲಿತಾಂಶಗಳನ್ನು ಸರಿಯಾಗಿ ಮುಂದಕ್ಕೆ ಕೊಂಡೊಯ್ದರೆ, ಸಂಘಪರಿವಾರದ ಈ ಉದ್ದೇಶ ಖಂಡಿತಾ ಸಫಲವಾಗದು! ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಮತ್ತು ಬಿಜೆಪಿಯೇತರ ರಾಜಕೀಯ ಪಕ್ಷಗಳು ಹಾಗೂ ಸಂವಿಧಾನದ ಮೌಲ್ಯಗಳನ್ನು ರಕ್ಷಿಸಬಯಸುವ ಪ್ರಗತಿಪರ ಸಂಘಟನೆಗಳು ಆ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕಿದೆ.

ಅಮೆರಿಕದ ಸಾಲ ಮಿತಿ ಏರಿಕೆಯ ಬಿಕ್ಕಟ್ಟು ಮತ್ತು ಬೈಡನ್ ಆಡಳಿತದ.........

ಪುಟ 13 ರಿಂದ

ಸಾಮರ್ಥ್ಯವು ಬಳಕೆಯಾಗದ ಪರಿಸ್ಥಿತಿಯಲ್ಲಿ, ಅಂದರೆ ಬೇಡಿಕೆಯು ಕುಗ್ಗಿದ ಪರಿಸ್ಥಿತಿಯಲ್ಲಿ, ಪಾವತಿ ಶೇಷದ ಸಂಭಾವ್ಯ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ, ವಿತ್ತೀಯ ಕೊರತೆಯು ಯಾವುದೇ ಹಾನಿಯನ್ನು (ಮೇಲೆ ಗಮನಿಸಿದಂತೆ, ತೆರಿಗೆಗಳಿಂದಲೇ ಒದಗಿಸಿಕೊಂಡ ಖರ್ಚು–ವೆಚ್ಚಗಳ ಪರಿಸ್ಥಿತಿಗೆ ಹೋಲಿಸಿದರೆ, ಸಂಪತ್ತಿನ ಅಸಮಾನತೆಯನ್ನು ಹೆಚ್ಚಿಸುವುದನ್ನು ಹೊರತುಪಡಿಸಿದರೆ) ಉಂಟುಮಾಡುವುದಿಲ್ಲ ಎಂಬುದನ್ನು ಮತ್ತು ಇಂತಹ ಒಂದು ವಿತ್ತೀಯ ಕೊರತೆಯು ಲಂಡನ್ ನಗರ ಮತ್ತು ಅದದಿಂದ ಪ್ರಭಾವಿಸಲ್ಪಟ್ಟ ಬ್ರಿಟಿಷ್ ಖಜಾನೆಯು ಭಾವಿಸಿದಂತೆ ಖಾಸಗಿ ಹೂಡಿಕೆಯನ್ನು ಖಂಡಿತವಾಗಿಯೂ "ಹೊರದಬ್ಬುವುದಿಲ್ಲ"ಎಂಬುದನ್ನು ತೋರಿಸುವುದು ಅವರ ಸಿದ್ಧಾಂತದ ಉದ್ದೇಶವಾಗಿತ್ತು.

ಕೀನ್ಸ್ ಸ್ವತಃ ಬಂಡವಾಳಶಾಹಿ ವ್ಯವಸ್ಥೆಯ ರಕ್ಷಕರಾಗಿದ್ದರು. ಅವರು ತಮ್ಮ ಸಿದ್ಧಾಂತವನ್ನು ಬೋಲ್ಶೆವಿಕ್ ಕ್ರಾಂತಿಯ ಛಾಯೆಯಲ್ಲಿ ನಿರೂಪಿಸಿದರು. ವ್ಯವಸ್ಥೆಯು ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳನ್ನು ಒದಗಿಸದಿದ್ದರೆ, ಸೋವಿಯತ್ ಮಾದರಿಯಿಂದ ಪ್ರೇರಿತರಾದ ಅತೃಪ್ತ ಕಾರ್ಮಿಕರು ವ್ಯವಸ್ಥೆಯನ್ನು ಉರುಳಿಸುತ್ತಾರೆ ಎಂದು ಅವರು ನಂಬಿದ್ದರು. ವಾಸ್ತವವಾಗಿ, "ಸಾಂಪ್ರದಾಯಿಕ ಬಂಡವಾಳಶಾಹಿ" ನಿಲುವು (ಈ ನಿಲುವನ್ನು 1930ರ ದಶಕದಲ್ಲಿ ಲಂಡನ್ ನಗರವು ವ್ಯಕ್ತಪಡಿಸಿತ್ತು ಎಂಬುದನ್ನು ನೆನಪಿಸಿಕೊಳ್ಳಬಹುದು) ಮತ್ತು ಉದಾರ ಬಂಡವಾಳಶಾಹಿಗಳ ನಿಲುವುಗಳ ನಡುವಿನ ಮುಖ್ಯ ವ್ಯತ್ಯಾಸವು ನಿಖರವಾಗಿ ಈ ಅಂಶದಲ್ಲಿದೆ: ಮೊದಲನೆಯದು, ವ್ಯವಸ್ಥೆಯ ಸಂರಕ್ಷಣೆಗಾಗಿ ಕಾರ್ಮಿಕರ ಬೃಹತ್ ಮೀಸಲು ಪಡೆಯೂ ಸೇರಿದಂತೆ ಕಾರ್ಮಿಕರು ಈ ಸಂರಕ್ಷಣೆಯನ್ನು ಮೌನವಾಗಿ ಸಮ್ಮತಿಸುವಂತೆ ಅವರನ್ನು ಮಣಿಸುವಲ್ಲಿ ಬಲ ಪ್ರಯೋಗಿಸುವ ಮಾರ್ಗದ ಮೇಲೆ ನಂಬಿಕೆ ಇಡುತ್ತದೆ. ಎರಡನೆಯದು, ವ್ಯವಸ್ಥೆಯ ಸಂರಕ್ಷಣೆಗಾಗಿ ಬೃಹತ್ ನಿರುದ್ಯೋಗವನ್ನು ತಪ್ಪಿಸುವ ಮೂಲಕ ಮತ್ತು ಅವರಿಗೆ ಸೂಕ್ತ "ವರ್ಗಾವಣೆ" ಗಳನ್ನು ಮಾಡುವ ಮೂಲಕ ಕಾರ್ಮಿಕರ ಬೆಂಬಲ ಪಡೆಯುವ ಮಾರ್ಗದ ಮೇಲೆ ನಂಬಿಕೆ ಇಡುತ್ತದೆ.

ಭಾರೀ ವೈರುಧ್ಯ

ಈ ಎರಡೂ ವಿಭಿನ್ನ ದೃಷ್ಟಿಕೋನಗಳೂ, ಸಾಲ ಮಿತಿಯನ್ನು ಏರಿಸುವ ಬಗ್ಗೆ ಅಮೆರಿಕದಲ್ಲಿ ಈಗ ನಡೆಯುತ್ತಿರುವ ಚರ್ಚೆಯಲ್ಲಿ ಅಂತರ್ಗತವಾಗಿವೆ. ಒಂದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸರ್ಕಾರದ ಅರ್ಥಪೂರ್ಣ ಹಸ್ತಕ್ಷೇಪವನ್ನು ಬಯಸುವ "ಉದಾರವಾದಿ ಬಂಡವಾಳಶಾಹಿ"ಗಳ ನಿಲುವು, ಬಂಡವಾಳಶಾಹಿಯ ಸಹಜ ಪ್ರವೃತ್ತಿಗಳಿಗೆ ವಿರುದ್ಧವಾಗಿದೆ. ಈ ಸಹಜ ಪ್ರವೃತ್ತಿಯ ಕಾರಣದಿಂದಾಗಿಯೇ, ನವ ಉದಾರವಾದಿ ಆಳ್ವಿಕೆಯು ತನಗೆ ಸಿಕ್ಕಿದ ಮೊಟ್ಟಮೊದಲ ಅವಕಾಶದಲ್ಲೇ ಕೀನ್ಸ್ ಸಿದ್ಧಾಂತವನ್ನು ಕಿತ್ತೊಗೆಯಿತು. ಆದರೆ, ನವ ಉದಾರವಾದವು ದಾರಿಕಾಣದಂತಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಕೀನ್ಸ್ ನೀತಿಗಳನ್ನು ಮತ್ತೊಮ್ಮೆ ಅಳವಡಿಸಿಕೊಳ್ಳುವ ಪ್ರಯತ್ನವು ಭಾರೀ ವೈರುಧ್ಯಗಳನ್ನು ಎದುರಿಸಬೇಕಾಗುತ್ತದೆ ಮತ್ತು ಆ ಪ್ರಯತ್ನವು ಹೊಟ್ಟೆಯಲ್ಲೇ ಸತ್ತು ಹುಟ್ಟಿದ ಮಗುವಾಗುತ್ತದೆ.

ಕೇವಲ ಒಂದು ನಿರ್ದಿಷ್ಟ ವೈರುಧ್ಯವನ್ನು ನಾನು ಇಲ್ಲಿ ಉಲ್ಲೇಖಿಸುತ್ತೇನೆ. ವಿತ್ತೀಯ ಕೊರತೆಯ ಪರಿಣಾಮವಾಗಿ ಉಂಟಾಗುವ ಪಾವತಿ ಶೇಷದ ಸಮಸ್ಯೆಯನ್ನು ಈ ಹಿಂದೆ ಪ್ರಾಸಂಗಿಕವಾಗಿ ಉಲ್ಲೇಖಿಸಲಾಗಿತ್ತು. ಬೃಹತ್ ಸಾಲದ ಮೂಲಕ ಒದಗಿಸಿಕೊಂಡ ಹಣದಿಂದ ಅಮೆರಿಕಾ ಕೈಗೊಳ್ಳುವ ಬೃಹತ್ ವೆಚ್ಚಗಳು ಉಂಟುಮಾಡುವ ಬೇಡಿಕೆಯ ಒಂದಿಷ್ಟು ಭಾಗವು ಆಮದು ರೂಪದಲ್ಲಿರುತ್ತದೆ. ಅದು ವಿದೇಶಗಳಿಗೆ "ಸೋರಿಕೆ"ಯಾಗುತ್ತದೆ. ಎಷ್ಟರಮಟ್ಟಿಗೆ ಬೇಡಿಕೆ "ಸೋರಿಕೆ"ಯಾಗುತ್ತದೆಯೊ, ಪಾವತಿ ಶೇಷದ ಕೊರತೆಯೂ ಸಹ ಅಷ್ಟರಮಟ್ಟಿಗೆ ಹೆಚ್ಚುತ್ತದೆ. ಆದ್ದರಿಂದ, ಅಮೆರಿಕದ ಈ ಅಧಿಕ ಆಮದು ಬೇಡಿಕೆಯ ಪೂರೈಕೆಗಾಗಿ ತಾವು ಮಾರುವ ಅಧಿಕ ಸರಕುಗಳ ವಿರುದ್ಧ ಅಮೆರಿಕದ ಸರ್ಕಾರವು ನೀಡುವ ಬಾಂಡ್‌ಗಳನ್ನು ವಿದೇಶಿಯರು ಸ್ವೀಕರಿಸುವರು ಎಂಬುದನ್ನು ಆಮದುಗಳನ್ನು (ವೆಚ್ಚಗಳನ್ನು) ಕೈಗೊಳ್ಳುವಾಗ ಊಹಿಸಿಕೊಳ್ಳಲಾಗಿರುತ್ತದೆ.

"ಚಿನ್ನಕ್ಕೆ ಸಮ" ಎಂದು ಸಾರ್ವತ್ರಿಕವಾಗಿ ಪರಿಗಣಿಸಲಾಗುವ ಡಾಲರ್ ಕರೆನ್ಸಿಯು ವಿಶ್ವದ ಮೀಸಲು ಕರೆನ್ಸಿಯಾಗಿ ಇರುವವರೆಗೂ ಈ ಪೂರ್ವಗ್ರಹಿಕೆಯು (ಅಂದರೆ, ಅಮೆರಿಕದ ಬಾಂಡ್‌ಗಳನ್ನು ವಿದೇಶಿಯರು ಸ್ವೀಕರಿಸುತ್ತಾರೆ ಎಂಬ ನಂಬಿಕೆ) ಒಂದು ಮಾನ್ಯತೆಯನ್ನು ಹೊಂದಿರುತ್ತದೆ. ಆದರೆ, ಅಮೆರಿಕವು ತಾನು "ಶತ್ರು" ಎಂದು ಭಾವಿಸುವ ದೇಶದ ವಿರುದ್ಧ ಮಾತ್ರವಲ್ಲ, ಹಲವಾರು ದೇಶಗಳ ವಿರುದ್ಧವೂ ನಿರ್ಬಂಧಗಳನ್ನು ಹೇರಿದರೆ, ಈ ನಿರ್ಬಂಧಗಳ ಪರಿಣಾಮವು ಕಡಿಮೆಯಾಗುತ್ತಾ ಹೋಗುತ್ತದೆ. ವಾಸ್ತವವಾಗಿ, ಈ ನಿಟ್ಟಿನಲ್ಲಿ ಮೂರು ವಿದ್ಯಮಾನಗಳು ಸಂಭವಿಸುತ್ತವೆ: ಮೊದಲನೆಯದು, ಈ ದೇಶಗಳಿಂದ ಆಮದುಗಳನ್ನು ಅಮೆರಿಕಾ ತ್ಯಜಿಸುತ್ತದೆ. ಅಂದರೆ, ದೇಶೀಯ ಉತ್ಪಾದನಾ ವೆಚ್ಚಗಳು ಹೆಚ್ಚುತ್ತವೆ ಮತ್ತು ಹಣದುಬ್ಬರದ ಒತ್ತಡಗಳೂ ಮುಂದುವರಿಯುತ್ತವೆ. ಎರಡನೆಯದು, "ನಿರ್ಬಂಧಿತ" ಮತ್ತು "ನಿರ್ಬಂಧಿತವಲ್ಲದ" ದೇಶಗಳು ಗುಂಪು ಕಟ್ಟಿಕೊಳ್ಳುತ್ತವೆ. ಅವು ದ್ವಿಪಕ್ಷೀಯ ವ್ಯಾಪಾರ ಏರ್ಪಾಟುಗಳನ್ನು ರೂಪಿಸಿಕೊಳ್ಳುತ್ತವೆ. ಈ ಏರ್ಪಾಟಿನಲ್ಲಿ ಡಾಲರ್, ಚಲಾವಣೆಯ ಮಾಧ್ಯಮವಾಗಿರುವುದಿಲ್ಲ. ಹಾಗಾಗಿ ಈ ದೇಶಗಳು ಡಾಲರ್‌ಗಳಲ್ಲಿ ಪರಿಗಣಿಸುವ (dollar- denominated) ಆಸ್ತಿಗಳನ್ನು ಹೊಂದುವ ಆಯ್ಕೆಯನ್ನು ಸೂಕ್ತವಾಗಿ ಬದಲಾವಣೆ ಮಾಡಿಕೊಳ್ಳುತ್ತವೆ. ಮೂರನೆಯದು, ಇಂತಹ ಆಸ್ತಿಗಳನ್ನು ಹೊಂದಿರುವ ಯಾವುದೇ ದೇಶವೂ ಸಹ, ಇದ್ದಕ್ಕಿದ್ದಂತೆಯೇ ನಿರ್ಬಂಧಗಳಿಗೆ ಒಳಪಡಬಹುದು. ಆಗ ಆ ದೇಶವು ಹೊಂದಿದ್ದ ಡಾಲರ್ ಸ್ವರೂಪದ ಆಸ್ತಿಗಳಿಗೆ "ಬೀಗ" ಬೀಳುತ್ತದೆ ಮತ್ತು ಅವುಗಳ ಬಳಕೆ ನಿಲ್ಲುತ್ತದೆ. ಆದ್ದರಿಂದ, ಆಸ್ತಿಗಳನ್ನು ಹಿಡಿದಿಟ್ಟುಕೊಳ್ಳಲು ಡಾಲರ್ ಆಕರ್ಷಕವಲ್ಲದ ಕರೆನ್ಸಿಯಾಗಿಬಿಡುತ್ತದೆ.

ನಿಸ್ಸಂದೇಹವಾಗಿಯೂ, "ಉದಾರವಾದಿ ಬಂಡವಾಳಶಾಹಿ" ನಿಲುವಿನ ಬೈಡನ್ ಆಡಳಿತದ ಸಮಸ್ಯೆಯೆಂದರೆ, ಕೀನ್ಸ್ ಆರ್ಥಿಕ ನೀತಿಗಳನ್ನು ಅಳವಡಿಕೊಳ್ಳಬಯಸುವ ಅದರ "ಉದಾರವಾದಿ ಬಂಡವಾಳಶಾಹಿ" ಮನೋಭಾವ ಮತ್ತು ವಿಶ್ವದ ಹೆಚ್ಚಿನ ಭಾಗದ ಮೇಲೆ ಅದು ಹೇರುವ "ನವ–ಸಂಪ್ರದಾಯಶರಣ" (neo-con) ಸಾಮ್ರಾಜ್ಯಶಾಹಿ ಆಕ್ರಮಣಶೀಲತೆಯು ಹುಟ್ಟುಹಾಕಿದ "ನಿರ್ಬಂಧ"ಗಳು, ಇವುಗಳ ನಡುವೆ ಒಂದು ಕಂದಕವಿದೆ. ಕೀನ್ಸ್ ಸಿದ್ಧಾಂತ ಮತ್ತು "ನಿಯೋ–ಕಾನ್" (ನಿರ್ಬಂಧಗಳು) ಇವೆರಡೂ ಬೇರೆ ಬೇರೆ ದೋಣಿಗಳೇ. ಇಂದಿನ ಜಗತ್ತಿನಲ್ಲಿ ಏಕಕಾಲದಲ್ಲಿ ಎರಡೂ ದೋಣಿಗಳ ಮೇಲೆ ಕಾಲಿಟ್ಟು ಹೆಚ್ಚು ಕಾಲ ಅಮೆರಿಕಾ ಸವಾರಿ ಮಾಡುವುದು ಸಾಧ್ಯವಿಲ್ಲ.

ಕೇರಳ: ಉದ್ಯಮಗಳ ಬೆಳವಣಿಗೆಗೆ ಯೋಜನೆ ರೂಪಿಸಲಾದ ವರ್ಷ – ಪಿಣರಾಯಿ ವಿಜಯನ್

ಉದ್ಯಮಶೀಲತೆಯ ವಾರ್ಷಿಕ ಕಾರ್ಯಕ್ರಮದ ಮೂಲಕ, ಕೇರಳದ ಇತಿಹಾಸದಲ್ಲಿ ಇದುವರೆಗೆ ನಡೆಯದ ಅತಿದೊಡ್ಡ ಪ್ರಗತಿಯನ್ನು ಈ ವರ್ಷ ನಮ್ಮ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಸಾಧಿಸಲಾಗಿದೆ. ವಿವಿಧ ಸರ್ಕಾರಿ ಇಲಾಖೆಗಳು, ಸಂಸ್ಥೆಗಳು, ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಬ್ಯಾಂಕುಗಳ ಸಂಯೋಜನೆಯ ಮೂಲಕ ವಾಣಿಜ್ಯೋದ್ಯಮಿಗಳನ್ನು ಸೆಳೆಯುವ ಯೋಜನೆಯು ಇಷ್ಟು ದೊಡ್ಡ ಯಶಸ್ಸನ್ನು ಗಳಿಸಿದೆ.



ಕೇರಳದ ದೀರ್ಘಕಾಲೀನ ಅಭಿವೃದ್ಧಿಯ ಗುರಿ ಹೊಂದಿರುವ ಯೋಜನೆಗಳನ್ನು ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರವು ಅಭಿವೃದ್ಧಿಪಡಿಸುತ್ತಿದೆ ಮತ್ತು ಕಾರ್ಯಗತಗೊಳಿಸುತ್ತಿದೆ. ನಿಖರವಾಗಿ ಹೇಳುವುದಾದರೆ, ಮುಂದಿನ 25 ವರ್ಷಗಳಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಮಧ್ಯಮ ವರ್ಗದ ದೇಶಗಳ ಮಟ್ಟಕ್ಕೆ ಕೇರಳದ ಜೀವನ ಮಟ್ಟವನ್ನು ಹೆಚ್ಚಿಸಲು ನಾವು ಪ್ರಯತ್ನಿಸುತ್ತಿದ್ದೇವೆ. ಅದಕ್ಕಾಗಿ ಕೌಶಲ್ಯ ತರಬೇತಿ, ಕೈಗಾರಿಕಾ ಪುನಾರಚನೆ, ಕೃಷಿ ಆಧುನೀಕರಣದ ಮೇಲೆ ಹೆಚ್ಚು ಗಮನಹರಿಸುವ ಕ್ರಿಯಾ ಯೋಜನೆಗಳೊಂದಿಗೆ ಮುಂದುವರೆಯುತ್ತಿದೆ. ಇದರಲ್ಲಿ ಉದ್ಯಮವು ವಿಶೇಷ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ರಾಜ್ಯದ ಕೈಗಾರಿಕಾ ಪರಿಸರವನ್ನು ಅಭಿವೃದ್ಧಿಪಡಿಸಲು, ಅಗತ್ಯ ರೀತಿಯಲ್ಲಿ ಉತ್ತೇಜಿಸಲು ಸರ್ಕಾರವು ವಿವಿಧ ಕ್ರಮಗಳನ್ನು ಕೈಗೊಂಡಿದೆ. ಅವುಗಳಲ್ಲಿ ಪ್ರಮುಖವಾದದ್ದು ವಾಣಿಜ್ಯೋದ್ಯಮಿಗಳಿಗೆ ಅವಕಾಶ ನೀಡಲು ಸಂಬಂಧಿಸಿದ ನಿಯಮಗಳು ಮತ್ತು ಕಾನೂನುಗಳಲ್ಲಿ ಮಾಡಲಾದ ಸಮಯೋಚಿತ ಬದಲಾವಣೆಗಳು.

ಕೇರಳದಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ಮತ್ತು ಸ್ಟಾರ್ಟ್ ಅಪ್‌ಗಳ ಚಟುವಟಿಕೆಗಳನ್ನು ಉತ್ಕೃಷ್ಟಗೊಳಿಸಲು ಏಳು ಕಾಯಿದೆಗಳಲ್ಲಿ ತಿದ್ದುಪಡಿಗಳನ್ನು ತರಲಾಗಿದೆ. 10 ಉಪ-ಕಾನೂನುಗಳಲ್ಲಿ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ. ವ್ಯಾಪಾರ ವಾಣಿಜ್ಯೋದ್ಯಮಗಳಿಗೆ ಸಕಾಲದಲ್ಲಿ ಅಗತ್ಯ ಅನುಮತಿಗಳನ್ನು ಪಡೆಯಲು ಸಹಾಯಕವಾಗುವ ಏಕಕೋಶೀಯ ವ್ಯವಸ್ಥೆ (Unicellular system) ಕೆ-ಸ್ವಿಫ್ಟ್ ಪ್ರಾಯೋಗಿಕವಾಗಿ ಜಾರಿಗೆ ಬಂದಿದೆ. ಈ ಮೂಲಕ ಪ್ರಸ್ತುತ 21 ವಲಯಗಳಿಂದ 90 ಪರವಾನಗಿಗಳನ್ನು ಒದಗಿಸಲಾಗಿದೆ. ಚಿಕ್ಕ ಚಿಕ್ಕ ಉದ್ಯಮಗಳ ಚಟುವಟಿಕೆಗಳಿಗೆ ವಿಶೇಷ ರೂಪ ಕೊಡಲು 2019 ರಲ್ಲಿ ಮಸೂದೆಯನ್ನು ರೂಪಿಸಲಾಯಿತು. 50 ಕೋಟಿಗಿಂತ ಕಡಿಮೆ ಬಂಡವಾಳ ಹೊಂದಿರುವ ವ್ಯವಹಾರಗಳನ್ನು ಮೂರು ವರ್ಷಗಳ ಪರವಾನಗಿ ನೀಡಿದ ಆಧಾರದ ಮೇಲೆ ಕಾರ್ಯನಿರ್ವಹಿಸಲು ತಿದ್ದುಪಡಿಗಳನ್ನು ಸಹ ಮಾಡಲಾಗಿದೆ. ಇದೆಲ್ಲದರ ಜೊತೆಗೆ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಸರ್ಕಾರ ಕ್ರಮ ಕೈಗೊಂಡಿದೆ.

ಉದ್ಯಮ-ಸ್ನೇಹಿ ಶ್ರೇಯಾಂಕದಲ್ಲಿ ಕೇರಳ 15ನೇ ಸ್ಥಾನಕ್ಕೆ ಏರಿಕೆ

ಹಾಗೆ ನೋಡಿದರೆ, 2016 ರ ನಂತರದಲ್ಲಿ ಕೆಎಸ್‌ಐಡಿಸಿ (Kerala State Industrial Development Corporation) ಮೂಲಕ 242 ಹಾಗೂ ಕಿನ್‌ಫಿತ್ ಯೋಜನೆಯ ಮೂಲಕ 721 ವಾಣಿಜ್ಯೋದ್ಯಮಗಳನ್ನೂ ಅಭಿವೃದ್ಧಿಪಡಿಸಲು ಸಾಧ್ಯವಾಗಿದೆ. ಈ ಮೂಲಕ ವಿವಿಧ ಉದ್ಯಮಶೀಲತೆಗಳಿಗೆ 4,653 ಕೋಟಿ ಆರ್ಥಿಕ ನೆರವು ಒದಗಿಸಲಾಗಿದ್ದು, 49,594 ಉದ್ಯೋಗಗಳನ್ನು ಸೃಷ್ಟಿಸಲಾಗಿದೆ. ಕೆಎಫ್‌ಸಿಇ ಮೂಲಕ 5,405 ಉದ್ಯಮಗಳಿಗೆ 12,048 ಕೋಟಿ ಆರ್ಥಿಕ ನೆರವು ನೀಡಲಾಗಿದೆ. ಈ ರೀತಿಯಲ್ಲಿ ಕೈಗಾರಿಕಾ ಬೆಳವಣಿಗೆಯಲ್ಲಿ ಬದಲಾವಣೆ ರಾಜ್ಯಾದ್ಯಂತ ವಿದ್ಯಮಾನವಾಗಿದೆ. ಹೊಸ ಉದ್ಯಮಗಳನ್ನು ಸ್ಥಾಪಿಸಲು ಕಾರ್ಯವಿಧಾನಗಳನ್ನು ಸುಲಭಗೊಳಿಸಿರುವ ಫಲವಾಗಿ ಹೊಸ ಉದ್ದಿಮೆಗಳು ಸ್ಥಾಪನೆಗೊಂಡಿವೆ. ಹೀಗೆ ಸ್ಥಾಪನೆಗೊಂಡಿರುವ ಹೊಸ ಉದ್ಯಮಗಳ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡು, ಉದ್ಯಮ-ಸ್ನೇಹಿ ಶ್ರೇಯಾಂಕದಲ್ಲಿ ಕೇರಳವು 15ನೇ ಸ್ಥಾನಕ್ಕೆ ಏರಿದೆ.

ಹಿಂದಿನ ಸರ್ಕಾರದ ಅವಧಿಯಲ್ಲಿ ಕೇರಳದಲ್ಲಿ 69,138 ಸಣ್ಣ ಮತ್ತು ಮಧ್ಯಮ ಉದ್ದಿಮೆಗಳನ್ನು ಹೊಸದಾಗಿ ಆರಂಭಿಸಲಾಗಿತ್ತು. ಇದರಿಂದ 6,448 ಕೋಟಿ ರೂಪಾಯಿ ಹೂಡಿಕೆಯಾಗಿದೆ. 2,45,369 ಉದ್ಯೋಗಗಳು ಸೃಷ್ಟಿಯಾಗಿವೆ. ಈ ಸರ್ಕಾರದ ಮೂರು ವರ್ಷಗಳ ಲೆಕ್ಕಪತ್ರಗಳನ್ನು ಪರಿಶೀಲಿಸಿದರೆ ಒಂದು ವರ್ಷದಲ್ಲಿ 17,855 ಉದ್ದಿಮೆಗಳನ್ನು ಆರಂಭಿಸಲಾಗಿದೆ. ಅದರ ಮೂಲಕ 1,736 ಕೋಟಿ ರೂ.ಗಳ ಹೂಡಿಕೆ ಬಂದಿದೆ. 64,541 ಉದ್ಯೋಗಗಳನ್ನು ಸೃಷ್ಟಿಸಲಾಗಿದೆ. ಒಟ್ಟು 86,993 ವ್ಯವಹಾರಗಳಲ್ಲಿ 8,184 ಕೋಟಿ ಹೂಡಿಕೆಯಾಗಿದೆ. 2016 ರಿಂದ 2021 ರವರೆಗಿನ 6 ವರ್ಷಗಳಲ್ಲಿ ಕೇರಳದಲ್ಲಿ 3,09,910 ಉದ್ಯೋಗಗಳನ್ನು ಸೃಷ್ಟಿಸಲಾಗಿದೆ. ಇವು ಕೇವಲ ಸಣ್ಣ ಮತ್ತು ಮಧ್ಯಮ ಉದ್ಯಮಗಳು ಎಂಬುದನ್ನು ಗಮನಿಸಬೇಕು. ನಾವು ಖಾಸಗಿ ಹೂಡಿಕೆಯನ್ನು ಮಾತ್ರವಲ್ಲದೆ ಸಾರ್ವಜನಿಕ ಉದ್ಯಮಶೀಲತೆಯನ್ನೂ ಪ್ರೋತ್ಸಾಹಿಸುತ್ತೇವೆ. 2021–22ರಲ್ಲಿ ನಮ್ಮ 21 ಸಾರ್ವಜನಿಕ ಉದ್ಯಮ (PSU)ಗಳು ಲಾಭದಾಯಕವಾಗಿವೆ. ಕೈಗಾರಿಕೆ ವಲಯದ ಅಡಿಯಲ್ಲಿ 41 PSU ಗಳ ಒಟ್ಟು ಬಜೆಟ್ ರೂ 3,892 ಕೋಟಿ ಮತ್ತು ನಿರ್ವಹಣಾ ಲಾಭವೂ ರೂ. 386.04 ಕೋಟಿಗಳಷ್ಟಿತ್ತು. ಇದು 2020–21 ರ ಆರ್ಥಿಕ ವರ್ಷದಲ್ಲಿ ರೂ. 588 ಕೋಟಿಗಳ ಬಜೆಟ್‌ನಿಂದ ರೂ. 339 ಕೋಟಿಗಳಷ್ಟು ನಿರ್ವಹಣಾ ಲಾಭವನ್ನು ಹೆಚ್ಚಿಸಿದೆ. ಬಿಇಎಲ್, ಇಎಂಎಲ್ ನಷ್ಟದಲ್ಲಿ ಸಾಗುತ್ತಿದೆ ಎಂದು ಕೇಂದ್ರ ಸರ್ಕಾರ ಈ ಉದ್ಯಮಗಳನ್ನು ಮಾರಾಟ ಮಾಡುವುದಾಗಿ ಹೇಳಿದೆ. ಹಿಂದೂಸ್ತಾನ್ ನ್ಯೂಸ್ ಪ್ರಿಂಟ್ ಅನ್ನು ಕೇರಳ ಸರ್ಕಾರ ಪಡೆದುಕೊಂಡಿದೆ ಮತ್ತು ಅದನ್ನು ಆಧುನೀಕರಿಸಿದೆ. ಅವು ಪ್ರಸ್ತುತ ಕೆಲ್ ಇಎಂಎಲ್, ಕೆಪಿಪಿಎಲ್ (ಕೇರಳ ಪೇಪರ್ ಪ್ರೊಡಕ್ಟ್ ಲಿಮಿಟೆಡ್) ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿವೆ. 2030 ರ ವೇಳೆಗೆ ಕೇರಳದ ಸಾರ್ವಜನಿಕ ವಲಯದಲ್ಲಿ ಕಾರ್ಯಗತಗೊಳಿಸಬೇಕಾದ ಕ್ರಮಗಳ ಸ್ಪಷ್ಟ ಮಾರ್ಗಸೂಚಿಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ಅದರ ಭಾಗವೇ ನಮ್ಮ ಉದ್ಯಮದಲ್ಲಿ ಆಗುತ್ತಿರುವ ಮಹತ್ತರ ಪ್ರಗತಿ.

ಒಂದು ಐತಿಹಾಸಿಕ ಸಾಧನೆ

ನಾವು ಈ ಎಲ್ಲಾ ಚಟುವಟಿಕೆಗಳಿಂದ ಸ್ಫೂರ್ತಿ ಪಡೆದುಕೊಂಡಿದ್ದೇವೆ ಮತ್ತು ಉದ್ಯಮಶೀಲತೆಯ ವರ್ಷ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಒಂದು ವರ್ಷದಲ್ಲಿ ಒಂದು ಲಕ್ಷ ಉದ್ಯಮ ಆರಂಭಿಸುವ ಮಹತ್ವಾಕಾಂಕ್ಷೆ ಹೊಂದಿದ್ದೆವು. ಆದರೆ ಮೊದಲ ಎಂಟು ತಿಂಗಳಲ್ಲಿ ನಾವು ಒಂದು ಲಕ್ಷದ ಸಮೀಪ ತಲುಪಲು ಸಾಧ್ಯವಾಯಿತು. ಫೆಬ್ರವರಿ 2023 ರ ಹೊತ್ತಿಗೆ, ಈ ಯೋಜನೆಯ ಮೂಲಕ 1,34,358 ವ್ಯವಹಾರಗಳನ್ನು ಪ್ರಾರಂಭಿಸಲಾಗಿದೆ. ಅದರ ಮೂಲಕ ನಾವು 8,000 ಕೋಟಿಗೂ ಹೆಚ್ಚು ಹೂಡಿಕೆಯನ್ನು ಆಕರ್ಷಿಸಲು ಮತ್ತು 2,88,000 ಉದ್ಯೋಗಗಳನ್ನು ಒದಗಿಸಲು ಸಾಧ್ಯವಾಯಿತು. ಅಂದರೆ ನಮ್ಮ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳು ಉದ್ಯಮಶೀಲತೆಯ ವಾರ್ಷಿಕ ಕಾರ್ಯಕ್ರಮದ ಮೂಲಕ ಕೇರಳದ ಇತಿಹಾಸದಲ್ಲಿ ಅಭೂತಪೂರ್ವ ಪ್ರಗತಿಯನ್ನು ಸಾಧಿಸಿವೆ. ವಾರ್ಷಿಕ ವಾಣಿಜ್ಯೋದ್ಯಮ ಕಾರ್ಯಕ್ರಮದ ಮೂಲಕ ನಮ್ಮ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಕೇರಳದ ಇತಿಹಾಸದಲ್ಲಿ ಅತ್ಯಂತ ದೊಡ್ಡ ಪ್ರಗತಿಯನ್ನು ಸಾಧಿಸಲಾಗಿದೆ. ವಿವಿಧ ಸರ್ಕಾರಿ ಇಲಾಖೆಗಳು, ಸಂಸ್ಥೆಗಳು, ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ಬ್ಯಾಂಕುಗಳ ಸಂಯೋಜನೆಯು ಉದ್ಯಮಿಗಳನ್ನು ಗುರುತಿಸುವ ಉಪಕ್ರಮವನ್ನು ಅಂತಹ ದೊಡ್ಡ ಯಶಸ್ಸನ್ನು ಮಾಡಿದೆ. ತಿರುವನಂತಪುರಂ ಜಿಲ್ಲೆಯಲ್ಲಿ ಹೆಚ್ಚಿನ ಕೈಗಾರಿಕೆಗಳನ್ನು ಆರಂಭಿಸಲಾಗಿದೆ. ಎರ್ನಾಕುಲಂ ಮತ್ತು ತ್ರಿಶೂರ್ ಜಿಲ್ಲೆಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ರಾಜ್ಯದ ಸರ್ವಾಂಗೀಣ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಉದ್ಯಮಶೀಲತೆಯ ಬೆಳವಣಿಗೆಯನ್ನು ಮತ್ತಷ್ಟು ಬಲಪಡಿಸಲು ನಾವು ನಿರಂತರ ಪ್ರಯತ್ನಗಳನ್ನು ಮಾಡಬೇಕಾಗಿದೆ.

'ಒಂದು ಸ್ಥಳೀಯ ಸಂಸ್ಥೆ, ಒಂದು ಉತ್ಪಾದನೆ'

'ಒಂದು ಸ್ಥಳೀಯ ಸಂಸ್ಥೆ, ಒಂದು ಉತ್ಪಾದನೆ' ತತ್ವವನ್ನು ಜಾರಿಗೆ ತರಲು ಮತ್ತು ಹೆಚ್ಚಿನ ಉದ್ಯಮಗಳನ್ನು ಪ್ರಾರಂಭಿಸುವ ಮೂಲಕ ಅಂತಹ ಉತ್ಪನ್ನಗಳ ಮೌಲ್ಯವನ್ನು ಉತ್ತೇಜಿಸಲು ಮತ್ತು ಹೆಚ್ಚಿಸಲು ನಾವು ಯೋಜನೆಗಳನ್ನು ಜಾರಿಗೊಳಿಸುತ್ತಿದ್ದೇವೆ. ಇದಕ್ಕಾಗಿ ಎಲ್ಲ ಸ್ಥಳೀಯ ಸಂಸ್ಥೆಗಳಲ್ಲಿ ವಾರಕ್ಕೆ ಎರಡು ಬಾರಿ ಸಹಾಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಪ್ರತಿ ಸ್ಥಳೀಯ ಸಂಸ್ಥೆಗಳ ಅಡಿಯಲ್ಲಿ ಈ ಯೋಜನೆಗಾಗಿ ವಿಶೇಷ ಸಮಿತಿಗಳನ್ನು ರಚಿಸಲಾಗಿದೆ. 2022 ರ ಮೇ–ಜೂನ್ ನಲ್ಲಿ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ನಡೆಸಿದ ಸಾರ್ವಜನಿಕ ಜಾಗೃತಿ ಕಾರ್ಯಕ್ರಮವು ಹೆಚ್ಚಿನ ಜನರ ಭಾಗವಹಿಸುವಿಕೆಯಿಂದ ಗಮನ ಸೆಳೆಯಿತು. ಬಡ್ಡಿ ಕಡಿತದೊಂದಿಗೆ ಸಾಲ ನೀಡಲು ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆಗಸ್ಟ್–ಸೆಪ್ಟೆಂಬರ್ ಅವಧಿಯಲ್ಲಿ 108 ಕೋಟಿ ರೂ.ಗಳ ಸಾಲ ಮೇಳಗಳನ್ನು ನಡೆಸಲಾಗಿದ್ದು, ಒಟ್ಟು 5,556 ಅರ್ಜಿಗಳನ್ನು ಮಂಜೂರು ಮಾಡಲಾಗಿದೆ.

ದೇಶದಲ್ಲೇ ಮೊದಲ ತಂತ್ರಜ್ಞಾನ ಪಾರ್ಕ್ ಆರಂಭಿಸಿದ ರಾಜ್ಯ ಕೇರಳ

ಅಂತಹ ಹಣಕಾಸಿನ ನೆರವು ಲಭ್ಯವಾಗುವಂತೆ ಮಾಡುವುದರ ಜೊತೆಗೆ, ಕೆಲವು ವಿಶೇಷ ಉತ್ಪನ್ನಗಳಿಗೆ ಭೌಗೋಳಿಕ ಕೋಡ್ ಅನ್ನು ಒದಗಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅಂತಹ ಅತ್ಯುತ್ತಮ ಕ್ರಮಗಳ ಪರಿಣಾಮವಾಗಿ, ನಾವು ನಿರೀಕ್ಷಿಸಿದ್ದಕ್ಕಿಂತ ಮುಂಚೆಯೇ ಗುರಿಯನ್ನು ಸಾಧಿಸಲು ಸಾಧ್ಯವಾಯಿತು. ಕೇಂದ್ರ ಸರ್ಕಾರವು ಕೇರಳದ ಉದ್ಯಮಶೀಲತೆಯ ವರ್ಷದ ಉಪಕ್ರಮವನ್ನು ಅತ್ಯುತ್ತಮ ಪ್ರಯೋಗ ಎಂದು ಶ್ಲಾಘಿಸಿದೆ. ವಾರ್ಷಿಕ ಉದ್ಯಮಶೀಲತಾ ಕಾರ್ಯಕ್ರಮದ ಯಶಸ್ಸು ಮತ್ತು ಮನ್ನಣೆಯು ನಮ್ಮ ರಾಜ್ಯವು ಉದ್ಯಮವನ್ನು ಪ್ರಾರಂಭಿಸಲು ಉತ್ತಮ ರಾಜ್ಯವಲ್ಲ ಎಂಬ ಕೇರಳ ವಿರೋಧಿಗಳ ಸುಳ್ಳು ಪ್ರಚಾರಕ್ಕೆ ಪ್ರತಿಕ್ರಿಯೆಯಾಗಿದೆ. ದೇಶದಲ್ಲೇ ಮೊದಲ ತಂತ್ರಜ್ಞಾನ ಪಾರ್ಕ್ ಆರಂಭಿಸಿದ ರಾಜ್ಯ ಕೇರಳ. ಮೊದಲ ಎಲೆಕ್ಟ್ರಾನಿಕ್ ಉತ್ಪಾದನೆಯನ್ನು ಪ್ರಾರಂಭಿಸಿದ ರಾಜ್ಯವೂ ಕೇರಳ. ಜಗತ್ತಿನಲ್ಲಿ ಉತ್ಪತ್ತಿಯಾಗುವ ಓಲಿಯೊರೆಸಿನ್ (Oleoresins) ನಲ್ಲಿ ಶೇಕಡ 40 ರಿಂದ 50 ರಷ್ಟು ಕೇರಳದಲ್ಲಿ ಉತ್ಪಾದನೆಯಾಗುತ್ತದೆ. ನಮ್ಮ ಸಾಧನೆಗಳನ್ನು ರಕ್ಷಿಸಲು ಮತ್ತು ಅವುಗಳ ಮುಂದುವರಿಕೆಯನ್ನು ಖಚಿತಪಡಿಸಿಕೊಳ್ಳಲು ನಾವು ಗಮನಹರಿಸಬೇಕು. ಲೆಫ್ಟ್ ಡೆಮಾಕ್ರಟಿಕ್ ಫ್ರಂಟ್ ಸರ್ಕಾರವು ರಾಜ್ಯದ ಸಂಪೂರ್ಣ ಮತ್ತು ಶಾಶ್ವತ ಅಭಿವೃದ್ಧಿಯನ್ನು ಅದಕ್ಕೆ ಸಹಾಯ ಮಾಡುವ ಚಟುವಟಿಕೆಗಳ ಮೂಲಕ ಸಾಧ್ಯವಾಗಿಸುವ ಮೂಲಕ ಹೊಸ ಕೇರಳವನ್ನು ರಚಿಸಲು ಪ್ರಯತ್ನಿಸುತ್ತಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE MAY 29-JUNE 4, 2023 Price: Rs. 10/- Date of Publication: 26 MAY 2023 RNI No. KARKAN /2006/17926 Posted on 29-05-2023
Posted at BG PSO, BG - 560026 **Posted at Periodical Rate** - Rs. 2

ಕೇಂದ್ರದಲ್ಲಿ ಬಂದ ಸರ್ಕಾರಗಳು ವಿಮಾನಯಾನ ಕ್ಷೇತ್ರದಲ್ಲಿ ಖಾಸಗಿಯವರ ಪ್ರವೇಶಕ್ಕೆ ಸಕಲ ಸೌಕರ್ಯಗಳನ್ನು ಒದಗಿಸಿದರೂ, ಅದಕ್ಕಾಗಿ ತಮ್ಮ 'ಮುಕ್ತ ಗಗನ ನೀತಿ'ಗಳನ್ನು ಸತತವಾಗಿ ಗಿಂಜುವ ಕೆಲಸ ಮಾಡಿದರೂ ದಿವಾಳಿಯಾಗಿರುವ ಕಿಂಗ್‌ಫಿಷರ್, ಮೋದಿಲುಫ್ಟ್, ಸಹಾರಾ ಮುಂತಾದ ಸುಮಾರು 20ಕ್ಕೂ ಹೆಚ್ಚು ಕಂಪನಿಗಳ ಸಾಲಿಗೆ ಈಗ ಮತ್ತೊಂದು ಸೇರ್ಪಡೆಯಾಗಿದೆ. ಆದರೂ ಉದಾರೀಕರಣದ ಗೀಳು ಬಿಟ್ಟಿಲ್ಲ ಎನ್ನುತ್ತಾರೆ ಹಿರಿಯ ಅರ್ಥಶಾಸ್ತ್ರಜ್ಞ ಡಾ. ಸಿ.ಪಿ.ಚಂದ್ರಶೇಖರ್.

'ಗೊ ಫಸ್ಟ್'-ಇನ್ನೊಂದು ವಿಮಾನಯಾನ ಕಂಪನಿ ದಿವಾಳಿ



'ಗೊ ಫಸ್ಟ್' ಎಂಬ ನಾಗರೀಕ ವಿಮಾನಯಾನ ಸಂಸ್ಥೆ ದಿವಾಳಿಯಾಗಿರುವುದಾಗಿ ಘೋಷಿಸಲು ದಿಢೀರನೆ ಅರ್ಜಿ ಸಲ್ಲಿಸಿದೆ. ನಾಗರೀಕ ವಿಮಾನಯಾನದ ಇತಿಹಾಸದಲ್ಲಿ ಇದು ಇನ್ನೊಂದು ಕೊಳಕು ಕಥೆ ಇರಬಹುದೆಂದು ತೋರುತ್ತಿದೆ. ಸಂಸ್ಥೆ ತನ್ನ ವಿಮಾನಗಳಲ್ಲಿ ಇರುವ "ಪ್ರಾತ್ ಅಂಡ್ ವೀತ್ನೆ" ಎಂಜಿನ್ನುಗಳಿಂದಲೇ ಈ ಸಮಸ್ಯೆ ಉಂಟಾಗಿದೆ ಎಂದು ಹೇಳುತ್ತಿದ್ದರೂ, ಈ ಮೊದಲು ಕೂಡ ಹಲವು ವಿಮಾನಯಾನ ಕಂಪನಿಗಳು ದಿವಾಳಿಯ ದಾರಿ ಹಿಡಿದದ್ದನ್ನು ಗಮನಿಸಿದರೆ ಕಥೆಯ ಒಳಾರ್ಥ ಹೆಚ್ಚು ಸ್ಪಷ್ಟವಾದೀತು.

ಈ ಸಂಸ್ಥೆ ಹಲವು ವರ್ಷಗಳಿಂದ ನಷ್ಟವನ್ನು ಸಂಚಯಿಸುತ್ತಲೇ ಕಾರ್ಯಾಚರಣೆ ಮುಂದುವರೆಸಿಕೊಂಡು ಬರುತ್ತಿದ್ದುದನ್ನು ನೋಡಿದರೆ ಕಂಪನಿಯ ಮಾತಿಗೆ ಅರ್ಥವಿಲ್ಲ ಎಂಬುದು ಗೊತ್ತಾಗುತ್ತದೆ. ದಿವಾಳಿ ಅರ್ಜಿಯ ಪ್ರಕಾರ ಅದರ ಸಾಲ 80 ಕೋಟಿ ಡಾಲರುಗಳಷ್ಟಿದೆ ಮತ್ತು ಇದರ ಹೆಚ್ಚಿನ ಭಾಗ ಸಾರ್ವಜನಿಕ ಬ್ಯಾಂಕುಗಳಿಂದ ಬಂದದ್ದು. ದೋಷಪೂರಿತ ಎಂಜಿನ್ನುಗಳು ಎನ್ನುವುದು ಕೊನೆಯದಾಗಿ ದಿವಾಳಿಯ ಅರ್ಜಿ ಹಾಕುವಂತೆ ಮಾಡಿರಬಹುದಷ್ಟೇ.

ಖಾಸಗಿ ವಿಮಾನಯಾನ ಸಂಸ್ಥೆಗಳು ಪ್ರಯಾಣಿಕ ಮತ್ತು ಸರಕು ಸಾಗಾಣಿಕೆ ಸೇವೆ ಶುರು ಮಾಡಿದ ಮೇಲೆ, ಒಂದು ಲೆಕ್ಕದ ಪ್ರಕಾರ, ಎರಡು ಡಜನ್ ಇಂತಹ ಸಂಸ್ಥೆಗಳು ಮುಳುಗಿವೆ. ಅವುಗಳಲ್ಲಿ ಕೆಲವು ಇನ್ನೂ ಕಾರ್ಯಾಚರಣೆ ಪ್ರಾರಂಭಿಸುವ ಮೊದಲೇ ಮುಳುಗಿವೆ ಎಂದರೆ ಸಮಸ್ಯೆಯ ಗಂಭೀರತೆಯ ಅರಿವಾದೀತು. ಈ ಪಟ್ಟಿಯಲ್ಲಿ ಕೆಲವನ್ನು ಹೆಸರಿಸುವುದಾದರೆ: ಏರ್ ಡೆಕ್ಕನ್, ಜೆಟ್ ಏರ್‌ವೇಸ್, ಕಿಂಗ್‌ಫಿಶರ್, ಮೋದಿಲುಫ್ಟ್, ಎನ್.ಈ.ಪಿ.ಸಿ., ಪ್ಯಾರಾಮೌಂಟ್, ಮತ್ತು ಸಹಾರಾ. ಇಷ್ಟೊಂದು ವೈಫಲ್ಯಗಳು ಎಂಬುದೊಂದೇ ಗಮನಾರ್ಹವಲ್ಲ. ಜೊತೆಗೆ ಈ ಕ್ಷೇತ್ರವನ್ನು ಇಷ್ಟೊಂದು ಖಾಸಗಿಯವರು ಪ್ರವೇಶಿಸಿದ್ದರು ಎಂಬುದೂ ಸಹ.

ಇಷ್ಟೊಂದು ಕಂಪನಿಗಳ ಪ್ರವೇಶ(ಮತ್ತು ನಿರ್ಗಮನ)ಗಳನ್ನು ಮೊದಲಿಗೆ ಒಳ್ಳೆಯ ಬೆಳವಣಿಗೆ ಎಂದೇ ಬಿಂಬಿಸಲಾಯಿತು, ಉದಾರೀಕರಣದ ಮೊದಲು ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ವಿಮಾನಯಾನ ಸೇವೆಗಳ ಸರ್ಕಾರದ ಏಕಸ್ವಾಮ್ಯದಿಂದಾಗಿ ಸ್ಪರ್ಧೆಗೆ ಅಡ್ಡಿಯಾಗಿತ್ತು, ಅದರಿಂದಾಗಿಯೇ ದರಗಳು ವಿಪರೀತವಾಗಿದ್ದವು, ಸೇವೆ ಕಳಪೆಯಾಗಿತ್ತು ಎಂಬ ತರ್ಕವನ್ನು ಅದು ಸಾಬೀತು ಮಾಡಿದೆ ಎಂದು ಹೇಳಲಾಯಿತು. ಇಂತಹ ಸ್ಪರ್ಧೆಯ ಜೊತೆ ಜೊತೆಗೇ ಉತ್ತಮ ಸೇವಾ ಗುಣಮಟ್ಟ ಮತ್ತು ಸ್ಪರ್ಧಾತ್ಮಕ ಬೆಲೆಗಳು ಮೂಡಿಬರುತ್ತವೆ ಎಂಬ ನಿರೀಕ್ಷೆಯನ್ನೂ ಹರಿಬಿಡಲಾಗಿತ್ತು.

ಹೀಗೆ ಹೇಳುವಾಗ, ಸರಕಾರದ ಏಕಸ್ವಾಮ್ಯ ಇದ್ದಾಗ ಬರೀ ಲಾಭದ ಮೇಲೇ ಗುರಿ ಇಡದೆ ಪ್ರಾದೇಶಿಕ ಸಮತೋಲ ಸಾಧಿಸಿ ಲಾಭಕಾರಿಯಲ್ಲದ ರೂಟ್‌ಗಳಲ್ಲೂ ವಿಮಾನಯಾನಗಳನ್ನು ನಡೆಸಲಾಗುತ್ತಿತ್ತು ಎಂಬುದನ್ನು ಸುಲಭವಾಗಿ ಮರೆಯಲಾಯಿತು. ಹಾಗೆ ನೋಡಿದರೆ, ಸ್ವಾತಂತ್ರ್ಯ ಬಂದ ಮೊದಲ ದಶಕಗಳಲ್ಲಿ ಖಾಸಗಿ ವಿಮಾನಯಾನ ಕಂಪನಿಗಳು ಈ ಕ್ಷೇತ್ರವನ್ನು ಪ್ರವೇಶಿಸಲು ಉತ್ಸುಕತೆ ತೋರಿರಲಿಲ್ಲವಾದ್ದರಿಂದಲೇ ಒಂದು ರಾಷ್ಟ್ರೀಯ ವಿಮಾನಯಾನ ಸಂಸ್ಥೆ ಬೇಕಾಗಿ ಬಂದಾಗ ಅನಿವಾರ್ಯವಾಗಿ ಅದು ಸರಕಾರದ ಸ್ವಾಮ್ಯದಲ್ಲಿಯೇ ಬರಬೇಕಾಯಿತು ಎಂಬುದನ್ನೂ ಮರೆಯಲಾಗಿದೆ.

ಖಾಸಗೀಕರಣಕ್ಕೆ ಎಂತಹ ಬೆಲೆ ತೆರುತ್ತಿದ್ದೇವೆ?

ಖಾಸಗಿಯವರು ಪ್ರಯಾಣಿಕರನ್ನು ಆಕರ್ಷಿಸಲು ಟಿಕೆಟ್ ದರಗಳನ್ನು ಇಳಿಸಿದರು ಮತ್ತು ಹೆಚ್ಚೆಚ್ಚು ಆದಾಯ ಗಳಿಸಲು ವೆಚ್ಚಗಳಲ್ಲಿ ಕಡಿತ ಮಾಡಿದರು. ಇದನ್ನೆಲ್ಲಾ ಮಾಡಿದರೂ ಬಹುತೇಕ ಕಂಪನಿಗಳು ಲಾಭ ಗಳಿಸುವಲ್ಲಿ ವಿಫಲವಾದವು. ಇಂಧನ ಬೆಲೆಗಳ ಏರು ಪೇರು ಮತ್ತು ಇತರ ವೆಚ್ಚಗಳ ಅನಿಶ್ಚಿತತೆಗಳಿಂದಾಗಿ ಹಲವು ಬಾರಿ ಸಂಚಿತ ನಷ್ಟ ಅಪಾರವಾಗಿ ಪರಿಣಾಮಿಸಿತು. ಇಂತಹ ಸಂಚಿತ ನಷ್ಟ ತಡೆದುಕೊಳ್ಳಲು ಆಗದಾದಾಗ ದಿವಾಳಿ ಅರ್ಜಿ ಹಾಕುವುದು ದಾರಿಯಾಯಿತು.

ಉದಾರಿಕರಣವಾದಿಗಳು ಮತ್ತು ಖಾಸಗೀಕರಣದ ಪರವಾಗಿ ಇರುವವರು, "ಉದ್ದಿಮೆಯಲ್ಲಿ ಚಾಲನೆ ಬರುತ್ತದೆ, ಅದರಿಂದಾಗಿ ಕೆಲವೇ ಹುರಿಯಾಳುಗಳು ಉಳಿದು ಅವರೆಲ್ಲ ಬಹಳ ದೊಡ್ಡ ಮೊತ್ತದ ಲಾಭವಲ್ಲದಿದ್ದರೂ ಒಂದು ಗೌರವಾರ್ಹ ಮೊತ್ತದ ಲಾಭ ಗಳಿಸುತ್ತಾರೆ" ಎಂಬ ವಾದ ಮಂಡಿಸಿದರು. ಆದರೆ ಕೆಲವು ಕಂಪನಿಗಳು ಮುಳುಗಿದರೂ, ವಿಲೀನಗಳು, ವಹಿಸಿಕೊಳ್ಳುವುದು ಇತ್ಯಾದಿಗಳು ನಡೆದರೂ ವಿಮಾನಯಾನ ಕಂಪನಿಗಳ ಸಂಖ್ಯೆ ಕಡಿಮೆಯಾಗಲೇ ಇಲ್ಲ, ಅದು ಈ ಕ್ಷೇತ್ರದಲ್ಲಿ ಮಾರುಕಟ್ಟೆಗೇ ಭಾರವಾಗುವ ರೀತಿಯಲ್ಲೇ ಮುಂದುವರೆಯಿತು. ಹೊಸ ಕಂಪನಿಗಳು ಪ್ರವೇಶಿಸುತ್ತಲೇ ಇದ್ದವು.

ಮುಳುಗುವ ಸಾಧ್ಯತೆ ಅತೀ ಹೆಚ್ಚಿರುವ ಈ ಉದ್ದಿಮೆಯಲ್ಲಿ ಇಂತಹ ತರ್ಕಹೀನ ಹೂಡಿಕೆಗಳಿಗೆ ಇರುವ ಆಕರ್ಷಣೆಯಾದರೂ ಏನು? ಇಂತಹ ಹೂಡಿಕೆಗಳಿಗೆ ಅನುಕೂಲಕರವಾದ ಹಲವಾರು ಅಂಶಗಳು ಇದ್ದವು. ಆಸ್ತಿಗಳನ್ನು ಭೋಗ್ಯಕ್ಕೆ ಪಡೆಯುವ ಮೂಲಕ ಹೊಸ ಪ್ರವೇಶಿಕರಿಗೆ ಮುಳುಗಡೆಯ ಖರ್ಚುಗಳನ್ನು ನಿಭಾಯಿಸುವ ಒಂದು ಸಾಧ್ಯತೆ ಇತ್ತು. ಇದರಿಂದಾಗಿ ಅಪಾರ ಬೆಲೆಯ ವಿಮಾನಗಳನ್ನು ಕೊಳ್ಳುವ ಬದಲು ಭೋಗ್ಯಕ್ಕೆ ಪಡೆಯಬಹುದು ಎಂಬುದೊಂದು ಬಹು ದೊಡ್ಡ ಆಕರ್ಷಣೆ. ಸರ್ಕಾರಿ ನೀತಿಗಳನ್ನು ಈ ಕ್ಷೇತ್ರಕ್ಕೆ ಹೊಸದಾಗಿ ಪ್ರವೇಶಿಸುವವರಿಗೆ ಆಕರ್ಷಕವಾಗುವಂತೆ ಮಾರ್ಪಡಿಸಲಾಯಿತು. ಸೇವಾ ಗುಣಮಟ್ಟ ಮತ್ತು ಸುರಕ್ಷತೆಯನ್ನು ಬಲಿಗೊಟ್ಟು ಖರ್ಚುಗಳನ್ನು ಕೆಳಮಟ್ಟದಲ್ಲಿ ಇಡಲು ಅನುವು ಮಾಡಿಕೊಡಲಾಯಿತು. ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಸಾಲ ಸಿಗುವ ಸಾಧ್ಯತೆಯನ್ನು ಸುಲಭಗೊಳಿಸಲಾಯಿತು.

ಪ್ರತಿಯೊಂದು ಹೊಸ ಕಂಪನಿ ಈ ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಗಟ್ಟಿಗೊಳ್ಳಲು ಪ್ರಯತ್ನಿಸಿದರೆ ಆಗ ಲಾಭ ಬಂದೇ ಬರುತ್ತದೆ, ಯಶಸ್ಸು ಗಳಿಸಬೇಕಾದರೆ ಮೊದಲು ಕಷ್ಟಪಡುವುದು, ರಕ್ತ ಸುರಿಸಬೇಕಾದ್ದು ಸಾಮಾನ್ಯ ಎಂದು ಭಾವಿಸಿದಂತಿತ್ತು. ಆದರೆ ಸ್ಪರ್ಧೆಯಿಂದಾಗಿ ದರಗಳನ್ನು ಇಳಿಸಬೇಕಾದ ಒತ್ತಡ ಬಂದಾಗ ಮತ್ತು ವಿಮಾನ ಇಂಧನ ಬೆಲೆ ಮೇರೆ ಮೀರಿ ಏರಿದಾಗ ಪರಿಣಾಮ ಗಂಭೀರವಾಯಿತು,

ಒಂದು ಸಮಯದಲ್ಲಿ ಯಶಸ್ವಿಯಾಗಿದ್ದ ಡೆಕ್ಕನ್ ಏರ್ ಮತ್ತು ಜೆಟ್ ಏರ್ವೇಸ್ ನಂತಹ ಕಂಪನಿಗಳು ಕೂಡ ಸೋತು ಹೋದಾಗ ಅದೇ ಸಾಮಾನ್ಯ ಸಂಗತಿಯಾಯ್ತು.

ಸರ್ಕಾರ ಲಾಭದಾಯಕವಲ್ಲದ ಕಂಪನಿಗಳನ್ನು ಬೆಂಬಲಿಸಿ ಮಾರುಕಟ್ಟೆಯಲ್ಲೇ ಉಳಿಸುವ ಕಾರ್ಯ ಮಾಡದೇ ಇದ್ದಿದ್ದರೆ ಇಂತಹ ಪರಿಸ್ಥಿತಿ ಸಾಮಾನ್ಯವಾಗುತ್ತಿರಲಿಲ್ಲ. ವೈಮಾನಿಕ ಇಂಧನಗಳ ಬೆಲೆ ಮತ್ತು ಅವುಗಳ ಮೇಲಿನ ಸುಂಕಗಳನ್ನು ಕಡಿಮೆ ಮಟ್ಟದಲ್ಲಿ ಇರಿಸಿ ನಿಯಂತ್ರಣಗಳನ್ನು ಸಡಿಲಗೊಳಿಸಿ ವೆಚ್ಚ ಕಡಿತಕ್ಕೆ ಸಹಾಯ ಮಾಡಲಾಯಿತು. ಈ ಕಂಪನಿಗಳಿಗೆ ಸಾಲ ನೀಡಬೇಕೆಂದು ಈ ಸಾರ್ವಜನಿಕ ಬ್ಯಾಂಕುಗಳ ಮೇಲೆ ಒತ್ತಡ ಹಾಕಲಾಯಿತು. ಇಂತಹ ವಾತಾವರಣ ಲಾಭಬಡುಕ ವ್ಯಾಪಾರಿ ಹೂಡಿಕೆದಾರರ ವಂಚಕ ವರ್ತನೆಗಳಿಗೆ ಉತ್ತೇಜನೆ ನೀಡಿದವು. ಅವರು ಲೆಕ್ಕಗಳಲ್ಲಿ ಗೋಲ್‌ಮಾಲ್ ನಡೆಸಿದರು. ಪಾವತಿಗಳನ್ನು ವಿಳಂಬಿಸಿದರು, ಗ್ರಾಹಕರನ್ನು ವಂಚಿಸಿದರು, ಅಲ್ಲದೆ ಬ್ಯಾಂಕಿನ ಹಣವನ್ನು ವೈಯಕ್ತಿಕ ಸಂಪತ್ತು ಕ್ರೋಢೀಕರಿಸಲು ಬಳಸಿಕೊಂಡರು.

ಕಿಂಗ್‌ಫಿಶರ್ ಇಂತಹ ವೈಫಲ್ಯದ ಒಂದು ವಿಪರೀತಕ್ಕೆ ಹೋದ ಮತ್ತು ವಿವಾದಾತ್ಮಕ ಪ್ರಕರಣವಿರಬಹುದು. ಆದರೆ ಗೊ ಫಸ್ಟ್ ದಿವಾಳಿ ಅರ್ಜಿ ಸಲ್ಲಿಸಿದ ಸಮಯದಲ್ಲೇ ಸಿಬಿಐ (ಕೇಂದ್ರ ತನಿಖಾ ದಳ) ಜೆಟ್ ಏರ್ವೇಸ್ ನ ನರೇಶ್ ಗೋಯಲ್ ಮತ್ತು ಅವರ ಪತ್ನಿ ಅನಿತಾ ಮತ್ತು ಕಂಪನಿಯ ಮಾಜಿ ನಿರ್ದೇಶಕ ಗೌರಾಂಗ ಆನಂದ ಶೆಟ್ಟಿ ಇವರುಗಳ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ 538 ಕೋಟಿ ರೂಪಾಯಿಗಳ ಅಪರಾ- ತಪರಾ ಬಗೆಗೆ ತನಿಖೆ ನಡೆಸಿತು. ವಿಮಾನಯಾನ ಕಂಪನಿ ಮುಳುಗಿದರೂ ಖಾಸಗಿ ಸಮೃದ್ಧಿಗೆಯೇನೂ ಅದು ಅಡ್ಡಿಯಾಗಿರಲಿಕ್ಕಿಲ್ಲ!! (ಬಹುಶಃ ಇದೇ ಕಾರಣಕ್ಕೆ ಹಣಕಾಸು ವಲಯದಲ್ಲಿ "ಉದ್ದಿಮೆ ರೋಗಿಷ್ಟ-ಉದ್ದಿಮೆದಾರ ದಷ್ಟ ಪುಷ್ಟ" ಎಂಬ ಮಾತು ತೀರ ಪ್ರಚಲಿತವಾಗಿದೆ)

ಮುಕ್ತ ಮಾರುಕಟ್ಟೆ ಮತ್ತು ಅದರ ವೈಫಲ್ಯ

ಇಲ್ಲಿ ಎರಡು ಅಂಶಗಳು ಪ್ರಮುಖ ಪಾತ್ರ ವಹಿಸಿದವು. ಮೊದಲನೇಯದು ನಾಗರೀಕ ವಿಮಾನಯಾನದ ಕ್ಷೇತ್ರದಲ್ಲಿ ಉದಾರಿಕರಣವನ್ನು ತಂದು ಅದನ್ನು ಯಶಸ್ವಿಗೊಳಿಸವ ಸರ್ಕಾರದ ಆಶಯ. ಈ ಆಶಯ ಎಷ್ಟೊಂದು ಆಳ ವಾಗಿದೆಯೆಂಬುದನ್ನು ಅದು "ಏರ್ ಇಂಡಿಯಾ" ವನ್ನು ಖಾಸಗಿಕರಣ ಗೊಳಿಸುವಲ್ಲಿ ತೋರಿದ ಅತೀವ ಆಸಕ್ತಿ ಮತ್ತು ಅದಕ್ಕೆ ಎಂತಹ ಬೆಲೆಯನ್ನೂ ತೆರಲು ಸಿದ್ಧವಾದದ್ದು ಎತ್ತಿ ತೋರಿಸುತ್ತದೆ. ಈ ಉದ್ದಿಮೆಯಲ್ಲಿ ಮಾರುಕಟ್ಟೆಯನ್ನು ಮುಕ್ತವಿರಿಸಬೇಕು, ಪ್ರಯಾಣ ದರಗಳು ಸೋವಿಯಾಗಿರಬೇಕು ಮತ್ತು ಹಲವಾರು ಕಂಪನಿಗಳಿರುವಂತೆ ಆಗಬೇಕು ಎಂಬುದು ಅದರ ಬಯಕೆ.

ಇದು ಉದಾರಿಕರಣ ನೀತಿಗಳನ್ನು ಅಳವಡಿಸಿಕೊಂಡಿರುವ ಪ್ರತಿಯೊಂದು ಸರಕಾರವೂ ಅನುಸರಿಸಿಕೊಂಡು ಬಂದ 'ಮುಕ್ತ ಗಗನ ನೀತಿ'ಗೆ ಅನುಗುಣವಾಗಿಯೇ ಇದು. 'ಸ್ಪರ್ಧೆ'ಯನ್ನು ಉಳಿಸಿಕೊಳ್ಳಲೇಬೇಕು ಎಂಬುದೇ ಅವರೆಲ್ಲರ ನಿಲುವು. ಆದರೆ, ಅನುಭವ ತೋರಿಸುವಂತೆ 'ಸ್ಪರ್ಧಾತ್ಮಕ ಮಾರುಕಟ್ಟೆ'ಗಳು ಹಲವು ಸಾರಿ ವೈಫಲ್ಯವನ್ನು ತರುತ್ತವೆ. ಬೇಕಾದ್ದಕ್ಕಿಂತ ಹೆಚ್ಚು ಉತ್ಪಾದನಾ ಸಾಮರ್ಥ್ಯ ಸೃಷ್ಟಿಸುವ ತಪ್ಪು ನಿರ್ಧಾರಗಳು, ಲಾಭಾಂಶವನ್ನು ಕುಗ್ಗಿಸುವ ಪ್ರಯಾಣ ದರ-ಯುದ್ಧ, ಅಲ್ಲದೇ ಕಳಪೆ ನಿರ್ವಹಣೆ ಇತ್ಯಾದಿಗಳು ನಷ್ಟ ಮತ್ತು ದಿವಾಳಿಯನ್ನು ತಂದು ಒಡ್ಡುತ್ತವೆ. ಈ ಎಲ್ಲ ಪುರಾವೆಗಳಿದ್ದರೂ ದಾರಿ ಬದಲಿಸಲು ಇಷ್ಟವಿಲ್ಲದ ಸರ್ಕಾರ ಇಂತಹ ಫಲಿತಾಂಶಗಳನ್ನು ಪೂರ್ವಭಾವಿಯಾಗಿ ತಡೆಯುವ ವಿಫಲ ಪ್ರಯತ್ನಗಳನ್ನು ಮಾಡುತ್ತಿದೆ.

ಎರಡನೇ ಅಂಶವೆಂದರೆ, ಒಂದು ದೊಡ್ಡ ಗಾತ್ರದ ವಿಮಾನಯಾನ ಕಂಪನಿಯನ್ನು ಮುಚ್ಚಿದರೆ ಅದರ ಪೂರಕ ಹಾನಿಗಳೂ ದೊಡ್ಡ ಪ್ರಮಾಣದವೇ ಆಗಿರುತ್ತದೆಂಬ ಅರಿವು ಸರ್ಕಾರಗಳಿಗೆ ಬಂದಿರುವುದು. ಕಡಿಮೆ ದರದ ವಿಮಾನ ಪ್ರಯಾಣಕ್ಕೆ ರೂಢಿಯಾದ ಪ್ರಯಾಣಿಕರಿಗೆ ಕೆಲವು ರೂಟ್‌ಗಳಲ್ಲಿ ಇಂತಹ ಪ್ರಯಾಣ ಲಭ್ಯವಿಲ್ಲದಂತಾಗಿದೆ (ತಾತ್ಕಾಲಿಕವಾಗಿಯಾದರೂ). ಸಿಬ್ಬಂದಿ ಮತ್ತು ಪೈಲಟ್‌ಗಳು ಸಂಬಳ ಇಲ್ಲದೆ ಹಲವು ತಿಂಗಳುಗಳ ಕಾಲ ಕಷ್ಟ ಅನುಭವಿಸಿದ್ದಾರೆ. ಬ್ಯಾಂಕುಗಳ ಸಾಲ ನಿಷ್ಕ್ರಿಯ ಆಸ್ತಿಯಾಗಿ ಅವು ನಷ್ಟ ಅನುಭವಿಸಿವೆ.

ವಾಸ್ತವ ಇನ್ನೂ ಹೆಚ್ಚು ಸವಾಲುಗಳನ್ನು ಒಡ್ಡುತ್ತಿದೆ. ಈಗಿರುವುದಕ್ಕಿಂತ ಹೆಚ್ಚಿನ ವೈಫಲ್ಯಗಳು ಬಾರವೆಂಬ ಭರವಸೆಯಿಲ್ಲ. ಹೀಗಿದ್ದರೂ ಇನ್ನೂ ಹೆಚ್ಚಿನ ಲಾಭದ ಪಿಪಾಸೆ ಇದ್ದೇ ಇದೆ. "ಏರ್ ಇಂಡಿಯಾ"ವನ್ನು ಸ್ವಾಧೀನ ಪಡಿಸಿಕೊಂಡ ಟಾಟಾ ಸಮೂಹ 470 ವಿಮಾನಗಳಿಗೆ ಬೋಯಿಂಗ್ ಮತ್ತು ಏರ್ ಬಸ್ ಕಂಪನಿಗಳಿಗೆ ಆರ್ಡರ್ ಇತ್ತಿದೆ. ಇಂತಹ ದೊಡ್ಡ ಹೂಡಿಕೆಗೆ ಪ್ರತಿಫಲ ಪಡೆಯುವುದು ಸುಲಭವೇನಲ್ಲ. ಈ ಸಮೂಹ, ತನ್ನ ಕಾರ್ಯಚರಣೆಯನ್ನು ಹಿಗ್ಗಿಸುವ ಗುರಿಯನ್ನು ಮಾತ್ರವೇ ಹೊಂದಿಲ್ಲ. ಬದಲಿಗೆ ಇರುವ ಸ್ಪರ್ಧೆಯನ್ನು ಹೊಸಕಿ ಹಾಕುವ ಹುನ್ನಾರವೂ ಇರಬಹುದು. ಉಳಿದವರು ಪ್ರಯತ್ನಿಸಿ ವಿಫಲರಾದ ದಾರಿಯಲ್ಲಿ ಯಶಸ್ಸು ಕಾಣುವ ವಿಲಕ್ಷಣ ಹಂಬಲ ಅದಕ್ಕಿರಬಹುದು.

ಅನು: ಜಿ.ಎಸ್.ಮಣಿ

ಮೂಲ: ಫ್ರಂಟ್‌ಲೈನ್ ಜೂನ್ 2, 2023

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**